ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಡಿಸೆಂಬರ್-೨೦೧೧ ಸಂಚಿಕೆ-೫



ಭಾರತೀಯ ಭಾಷೆಗಳ ವಿರುದ್ಧ ಇಂಗ್ಲಿಷ್ ನಿಂತಿದೆ !

ಜನಪದ ವಿಚಾರದಲ್ಲಿ

ಡಿಸೆಂಬರ್ - ೨೦೧೧

೧) ಭಾರತೀಯ ಭಾಷೆಗಳ ವಿರುದ್ಧ ಇಂಗ್ಲಿಷ್ ಭಾಷೆ ನಿಂತಿದೆ!

- ಸುರೇಂದ್ರ ಕೌಲಗಿ ಪುಟ-೩

ಕರ್ನಾಟಕದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷಾ ಮಾಧ್ಯಮಗಳ ಬಗ್ಗೆ ದೊಡ್ಡ ವಿವಾದ ಉಂಟಾಗಿದೆ. ಇದು ರಾಷ್ಟ್ರವ್ಯಾಪಿಯೂ ಆಗಿದೆ. ಉದ್ದೇಶಿತವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾದೇಶಿಕ ಭಾಷೆಗಳ ವಿರುದ್ಧ ಇಂಗ್ಲಿಷನ್ನು ನಿಲ್ಲಿಸಿರುವ ಬಗ್ಗೆ ತೀವ್ರವಾದ ಆತಂಕ ಈ ಲೇಖನದಲ್ಲಿ ಪ್ರಕಟವಾಗಿದೆ.

೨) ಸನಾತನ ಧರ್ಮದ ಉಜ್ಜೀವಕ ಮದನ ಮೋಹನ ಮಾಲವೀಯ

- ಎಸ್.ಆರ್.ಆರ್ ಪುಟ-೯

ದೇಶ ಕಂಡ ಅಗ್ರಮಾನ್ಯ ದೇಶಾಭಿಮಾನಿಗಳಲ್ಲಿ ಮದನ ಮೋಹನ ಮಾಲವೀಯರು ಒಬ್ಬರು. ಅವರ ಬಗ್ಗೆ ನವ ಪೀಳಿಗೆ ತಿಳಿಯಬೇಕಾದದ್ದು ಬಹಳವಿದೆ. ಮಾಲವೀಯರ ಜೀವನ ಮತ್ತು ಸಾಧನೆಗಳಿಂದ ಪ್ರೇರಣೆ ದೊರೆಯುವುದರಲ್ಲಿ ಸಂದೇಹವಿಲ್ಲ. ಅವರ ಜೀವನದ ಪಕ್ಷಿನೋಟ ಈ ಲೇಖನದಲ್ಲಿದೆ.

೩) ಪ್ರಜಾಪ್ರಭುತ್ವದ ಅಪಹರಣ ಪುಟ-೧೮

- ದೇವಿಂದರ್ ಶರ್ಮಾ

ತೀವ್ರತಮವಾದ ಆರ್ಥಿಕ ವಿಷಮತೆ ದೇಶದ ಪ್ರಜಾಪ್ರಭುತ್ವ ನೆಪ ಮಾತ್ರಕ್ಕೆ ಇರುವ ಅನುಭವವಾಗುತ್ತಿದೆ. ಇದೊಂದು ಶ್ರೀಮಂತರ ಖಾಸಗಿ ಕ್ಲಬ್ ಆಗಿದೆ ಎಂಬ ಸಂಗತಿಯನ್ನು ತಿಳಿಸುವ ಉದ್ದೇಶ ಈ ಲೇಖನದ್ದು.

೪) ಗಾಂಧೀಜಿಯವರ ದೃಷ್ಟಿಯಲ್ಲಿ ಅಹಿಂಸಾಮಾರ್ಗ ಪುಟ-೨೦

- ಡಾ॥ ಎಂ.ಡಿ.ಉಮೇಶ್

೫) ಬಹುಗುಣ ತಮ್ಮ ಜೀವನ ಸಂಗಾತಿ ಪಡೆದರು ಪುಟ-೨೪

- ಆಲ್ಫ್ರೆಡ್ ಜೇಮ್ಸ್ ; ಅನು : ಸು.ಕೌ

೬) ವೇದದಲ್ಲಿಯ ಮುತ್ತುಗಳು ಪುಟ-೩೦

೭) ಜನಪದ ಸೇವಾ ಟ್ರಸ್ಟ್ ಸಮಾಚಾರ ಪುಟ-೩೪

೮) ಜನಪದ ನಿಲಯದ ಅಂತರಂಗದಲ್ಲಿ - ೯೭ ಪುಟ-೩೫

೯) ಸರ್ವೋದಯ ಆಂದೋಲನದ ಮುನ್ನಡೆ ಪುಟ-೩೭

೧೦) ಖಾದಿ ವಿಚಾರ ಪುಟ-೩೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ - ೨೦೧೧
ಸಂಪುಟ - ೧೨
ಸಂಚಿಕೆ - ೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಅಂಧತ್ವ

ಉಣ್ಣುವ ತಟ್ಟೆಯ ಹಿಂದೆ
ಕೆಸರುಗದ್ದೆ ಒಕ್ಕಲಿನ ಕಣ
ಭತ್ತ ಬಡಿಯುವ ಬೆವರಿನ ಜನ
ಕಾಣಬೇಕಿತ್ತು..

ಉಟ್ಟ ಬಟ್ಟೆಯ ಹಿಂದೆ
ಹೊಲದ ಹತ್ತಿ ಬಿಡಿಸಿ ತಂದು
ನೇಯುವವರ ಬೆವರಿನ ಕಣ ಕಾಣಬೇಕಿತ್ತು..

ಕಟ್ಟಿಕೊಂಡ ಮನೆಯ ಹಿಂದೆ
ಸುಣ್ಣದ ಭಟ್ಟಿ ಸಿಮೆಂಟಿನ ಕಾರ್ಖಾನೆಯಲಿ
ಬೇಯುವ ಕೂಲಿಗಣ ಕಾಣಬೇಕಿತ್ತು..

ತಿನ್ನುವ ಬಾಯಿ ದೊಡ್ಡದಾಗಿದೆ
ಕಾಣುವ ಕಣ್ಣು ಕುರುಡಾಗಿದೆ
ಸಮತೆ ಸಮಾಧಿಯಾಗಿದೆ

ಪ್ರಪಂಚಕ್ಕಷ್ಟು ಪ್ರಶ್ನೆಗಳು

ಹತ್ತಾರು ವರುಷ ಹತ್ತಿಬೆಳೆದು
ಹೈರಾಣಾಗಿಆತ್ಮಹತ್ಯೆ ಮಾಡಿಕೊಂಡ
ರೈತರ ಸಾವಿನ ಹೊಣೆ
ಯಾರದಿರಬಹುದು?

ಗಾಜಾ ಪಟ್ಟಿಯಲಿ ದಿನನಿತ್ಯ ನಡೆಯುವ
ಗುಂಡಿನ ಚಕಮಕಿಯಲಿ ಸತ್ತ
ಪ್ಯಾಲೇಸ್ಟೀನಿಯರ ಸಂಖ್ಯೆ ಎಷ್ಟಿರಬಹುದು?

ಈಳಂನ ಕನಸು ಕಂಡ ತಪ್ಪಿಗೆ ಬುದ್ಧನ
ಅನುಯಾಯಿಗಳಿಂದ ಹತ್ಯೆಯಾದ ತಮಿಳರ
ಮಕ್ಕಳೀಗ ಏನು ಮಾಡುತ್ತಿರಬಹುದು?

ನಾಡಿನ ನ್ಯಾಯ ನಿರಾಕರಿಸಿ
ಕಾಡಿಗೆ ನಡೆದುಹೋಗಿ
ಎನ್‌ಕೌಂಟರ್ ಹೆಸರಿನಲ್ಲಿ ಹೆಣವಾದವರ
ನಿಜವಾದ ಹೆಸರುಗಳೇನಿರಬಹುದು?

– ಕು.ಸ.ಮಧುಸೂದನ

ವಿಚಾರ ದೀಪ್ತಿ

ಮಹನೀಯರೇ, ಕೊನೆಯದಾಗಿ ಅಧಿಕೃತ ಶಾಸನಕರ್ತರಾದ ನಿಮ್ಮಲ್ಲಿ ಅನಧಿಕೃತ ಶಾಸನಕರ್ತನಾದ ನನ್ನ ಒಂದು ಅಹವಾಲು: ಅದು ಇಂಗ್ಲಿಷ್ ಭಾಷೆಗೂ ಶಿಕ್ಷಣ ಮಧ್ಯಮಕ್ಕೂ ಸಂಬಂಧಪಟ್ಟಿದ್ದು. ವಿವರಕ್ಕಾಗಲಿ ವಾದಕ್ಕಾಗಲಿ ಜಿಜ್ಞಾಸೆಗಾಗಲಿ ನಾನೀಗ ಕೈ ಹಾಕುವುದಿಲ್ಲ. ಅದು ತತ್ಸಮಯ ಸಾಧ್ಯವೂ ಅಲ್ಲ; ಅದಕ್ಕಿಲ್ಲಿ ಕಾಲಾವಕಾಶವೂ ಇಲ್ಲ. ತಮ್ಮ ಗಮನವನ್ನು ಅತ್ತಕಡೆ ಎಳೆದು, ಅದು ತಮ್ಮ ಶೀಘ್ರ ಪರಿಶೀಲನೆಗೂ ಇತ್ಯರ್ಥಕ್ಕೂ ಒಳಗಾಗುವಂತೆ ಮಾಡುವುದೆ ನನ್ನ ಸಧ್ಯಃಪ್ರಯತ್ನದ ಮುಖ್ಯ ಉದ್ದೇಶ. ಆ ವಿಚಾರವಾಗಿ ನಮ್ಮ ರಾಷ್ಟ್ರ ಪಿತನಾದಿಯಾಗಿ ಸಾವಿರಾರು ದೇಶಭಕ್ತರೂ ನೂರಾರು ಸ್ವದೇಶೀಯ ಮತ್ತು ವಿದೇಶೀಯ ವಿದ್ಯಾತಜ್ಞರೂ ಹೇಳಿದ್ದಾರೆ, ಮಾತನಾಡಿದ್ದಾರೆ, ಬರೆದಿದ್ದಾರೆ. ಹೊತ್ತಗೆ ಹೊತ್ತಗೆಗಳನ್ನೆ ಪ್ರಕಟಿಸಿಯೂ ಇದ್ದಾರೆ. ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವಳನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ವರ್ಷವೂ ಪರೀಕ್ಷೆಯ ಜಿಲೊಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಮಾಣವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಾಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೋ!

ಇಂಗ್ಲಿಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಾಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸುವುದಕ್ಕಾಗಿಯೆ ವೆಚ್ಚಮಾಡಿದರೂ, ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿಹೊಂದುವುದರಲ್ಲಿ ಸಂದೇಹವಿಲ್ಲ.

ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲಾತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲಿ ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ ಅದು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿನೆಮ್ಮದಿಯ ಭಾವದಲ್ಲಿ ಈಗಲೆ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.

– *ಕುವೆಂಪು*

ಭಾರತೀಯ ಭಾಷೆಗಳ ವಿರುದ್ಧ ಇಂಗ್ಲಿಷ್ ನಿಂತಿದೆ!

– ಸುರೇಂದ್ರ ಕೌಲಗಿ

ಇತಿಹಾಸ ತಂತಾನೆ ಮರುಕಳಿಸದೇ ಇರಬಹುದು. ಆದರೆ ಪ್ರತಿಯುಗದಲ್ಲೂ ಗತಕಾಲದ ರಾಜಕೀಯ ಚಿಂತನೆಯ ಮುನ್ನಡೆಯಿರುತ್ತದೆ. ಅಲ್ಲದೆ, ಮುಂದಿನ ವರ್ಷಗಳಲ್ಲಿ ಫಲನೀಡುವ ವಿಚಾರಗಳ ಚಿತ್ತನೆಯೂ ಆಗಿರುತ್ತದೆ.

– ಚೆಸ್ಟರ್ ಸಿ. ಮಾರ್ಕಿ

ಸುಮಾರು ಇನ್ನೂರು ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಬಂತು. ವ್ಯಾಪಾರದ ಮೂಲಕ ದೇಶದ ಕತ್ತನ್ನೇ ಹಿಡಿಯಿತು. ದೇಶದ ರಾಜಕಾರಣ, ಭೌಗೋಲಿಕ ಸಂಪತ್ತು, ಸಂಸ್ಕೃತಿ, ಶಿಕ್ಷಣ ಮತ್ತು ಮುಖ್ಯವಾಗಿ ಜನಮಾನಸದ ಮೇಲೆ ಪ್ರಭುತ್ವ ಸಾಧಿಸಿತು. ಅನೇಕ ದೇಶಪ್ರೇಮಿಗಳು ಹುಟ್ಟಿದರು. ಜನರನ್ನು ಜಾಗೃತಗೊಳಿಸಿದರು. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. ಕಾರಾಗೃಹವಾಸ ಅನುಭವಿಸಿದರು, ಗುಂಡೇಟು ತಿಂದರು, ಫಾಸಿಶಿಕ್ಷೆಗೆ ಒಳಗಾದರು. ಅಂತೂ ದೇಶ ಸ್ವತಂತ್ರಗೊಂಡಿತು. ಅಷ್ಟರೊಳಗಾಗಿ ದೇಶದ ಬಹುಪಾಲು ಸಂಪತ್ತು ಇಂಗ್ಲಿಷರಿಂದ ಲೂಟಿಯಾಗಿತ್ತು. ದೇಶದ ಜನರು ಕ್ಷಾಮಗಳಿಂದ ಬಳಲಿ ಸತ್ತರು. ದೇಶ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಂಡಿತು. ಉಸಿರುಗಟ್ಟುವ ವಾತಾವರಣದಲ್ಲಿರಬೇಕಾಯಿತು. ಎಂಥ ಅಂಧಕಾರದ ನಂತರವೂ ಬೆಳಗು ಮೂಡುವಂತೆ ದೇಶದ ತುಂಬ ಸ್ವಾಭಿಮಾನದ ಅಲೆಯೆದ್ದಿತು. ದೇಶದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯಾಯಿತು. ಆದರೆ ಇಂಗ್ಲಿಷರ ಆಡಳಿತದ ಕಾಲದಲ್ಲಿ ಸ್ವೀಕರಿಸಿದ್ದ ಪಾಶ್ಚಿಮಾತ್ಯ ಸಂಸ್ಕೃತಿ, ಭಾಷೆ ಮತ್ತು ಉಂಟಾಗಿದ್ದ ದಾಸ್ಯ ಮನೋಭಾವ ಮಾತ್ರ ದೇಶದಿಂದ ತೊಲಗಲಿಲ್ಲ. ಭಾರತ ತನ್ನ ಅಭ್ಯುದಯಕ್ಕಾಗಿ ಆಯ್ಕೆ ಮಾಡಿಕೊಂಡ ಪ್ರಜಾಪ್ರಭುತ್ವ ಇಂಗ್ಲಿಷ್ ಸಾಮ್ರಾಜ್ಯದ ಚಿಂತನಾಕ್ರಮದಿಂದ, ಕಾರ್ಯಪದ್ಧತಿಯಿಂದ ಬಿಡುಗಡೆಗೊಳ್ಳಲು ಮಾತ್ರ ಸಾಧ್ಯವಾಗಲಿಲ್ಲ. ಪರಿಣಾಮವಾಗಿ ದೇಶದ ಸ್ವಾತಂತ್ರ್ಯದ ಏಳು ದಶಕಗಳ ನಂತರವೂ ಭಾರತ ಪರೋಕ್ಷವಾಗಿ ಇಂಗ್ಲಿಷರ ಆಡಳಿತಕ್ಕೇ ಒಳಗಾದಂತೆ ತನ್ನ ಆಡಳಿತವನ್ನು ನಡೆಸಿಕೊಂಡು ಬರುತ್ತಿದೆ. ದೇಶವಾಸಿಗಳಂತೂ ದಿನೇ ದಿನೇ ಪಾಶ್ಚಿಮಾತ್ಯಕರಣಕ್ಕೆ ಒಳಗಾಗುತ್ತಿದ್ದಾರೆ. ಭಾಷೆ–ವೇಷ–ಸಂಸ್ಕೃತಿ–ಶಿಕ್ಷಣ, ಕೈಗಾರಿಕೆ ಮುಂತಾದವೆಲ್ಲ ಜಾಗತಿಕರಣದಿಂದ ಪಾಶ್ಚಿಮಾತ್ಯಕರಣಗೊಳ್ಳುತ್ತಿವೆ. ಈ ಪ್ರಕ್ರಿಯೆಗೆ ಇಂಗ್ಲಿಷ್ ಭಾಷೆ ಪ್ರಬಲ ಮಾಧ್ಯಮವಾಗಿ ಕೆಲಸಮಾಡುತ್ತಿದೆ. ಎಂಥ ಪರಿಸ್ಥಿತಿಯುಂಟಾಗಿದೆಯೆಂದರೆ ಇಂಗ್ಲಿಷ್ ಭಾಷೆಯಿಲ್ಲದೆ ಬದುಕಲಾರೆವು, ಜೀವನ ನಡೆಸಲಾರೆವು ಎಂಬ ಅನಿವಾರ್ಯತೆಯ ಭಾವನೆ ಕಾಡುತ್ತಿದೆ. ಇಂಗ್ಲಿಷ್ ಭಾಷೆಯೇ ಅನ್ನ, ನೀರು, ಪ್ರಾಣವಾಯುವಾಗಿದೆ. ಇದರ ಪರಿಣಾಮವಾಗಿ ಇತಿಹಾಸ ಮರುಕಳಿಸಿದೆ. ನೇರವಾಗಿ ಇಂಗ್ಲೆಂಡ್ ಭಾರತವನ್ನು ಆಳದೇ ಇದ್ದರೂ ಪರೋಕ್ಷವಾಗಿ ಇಂಗ್ಲಿಷ್

ಭಾಷೆಯ ಮೂಲಕ ಆಳುತ್ತಿದೆ. ಈಗ ಇಂಗ್ಲೆಂಡ್ ಅಂದರೆ ಅಮೇರಿಕಾ ಮತ್ತು ಎಲ್ಲ ಪಾಶ್ಚಿಮಾತ್ಯ ದೇಶಗಳ ಒಕ್ಕೂಟ. ಇಂಗ್ಲೆಂಡ್ ಭಾರತವನ್ನು ಆಳುತ್ತಿದ್ದಾಗ ಭಾರತದ ಭೌಗೋಳಿಕ ಸಂಪತ್ತು ಆ ದೇಶಕ್ಕೆ ಮಾತ್ರ ಹೋಗುತ್ತಿತ್ತು. ಈಗ ಇಂಗ್ಲೆಂಡಿನ ಮೂಲಕ ಸ್ಥಾಪಿತಗೊಂಡ ಆ ಒಕ್ಕೂಟದ ಎಲ್ಲ ದೇಶಗಳಿಗೆ ಹೋಗುತ್ತಿದೆ. ಅಂದರೆ ಭಾರತ ದೇಶವನ್ನು ಹಿಂಡುವ ಗಾಣ ಒಂದಲ್ಲ, ಹತ್ತು! ಆದರೂ ಕೂಡ ಭಾರತೀಯರಿಗೆ ನೋವಾಗುತ್ತಿಲ್ಲ. ಕಾರಣ, ಇಂಗ್ಲಿಷ್ ಭಾಷೆಯ ಮೇಲೆ ಉಂಟಾಗಿರುವ ಅತಿಯಾದ ಮೋಹ. ಮನುಷ್ಯ ಭಾವನೆಗೆ, ಅಂತಃಕರಣಕ್ಕೆ, ಆತ್ಮಾಭಿಮಾನಕ್ಕೆ ನೋವುಂಟಾಗಬೇಕಾದರೆ ಅವನಿಗೆ ತನ್ನದೇ ಅಸ್ಮಿತೆಯಿರಬೇಕು. ಈಗ ಭಾರತೀಯರು ಇಂಗ್ಲಿಷ್ ಭಾಷಾ ಮೋಹದಿಂದ ಆ ಅಸ್ಮಿತೆಯನ್ನು ಕಳೆದುಕೊಂಡಿದ್ದಾರೆ. ಭಾವನೆಗಳ ವಾಹಕ, ಸಂಸ್ಕೃತಿಯ ಅಭಿವ್ಯಕ್ತಿ ಭಾಷೆ. ಯಾವಾಗ ಭಾಷೆಯೆಂಬುದೇ ಸತ್ತುಹೋಗುತ್ತದೋ, ಆಗ ಮನುಷ್ಯನ ಚಿಂತನೆ ಬರಡಾಗುತ್ತದೆ. ಕ್ರಿಯಾಶೀಲತೆ ಕುಂಠಿತವಾಗುತ್ತದೆ. ಜೀವನ ಶುಷ್ಕಗೊಳ್ಳುತ್ತದೆ. ಇಂಗ್ಲೆಂಡ್ ಸೂರ್ಯ ಮುಳುಗದ ಸಾಮ್ರಾಜ್ಯ ಸ್ಥಾಪಿಸುವುದಕ್ಕೆ ಕಾರಣವಾದದ್ದು ಅದರ ಭಾಷೆ. ತಮ್ಮ ಭಾಷೆಯನ್ನು ಧಾರ್ಮಿಕ ಭಾವನೆಯಿಂದ, ಸಾಹಿತ್ಯಕ ಪ್ರಖರತೆಯಿಂದ, ವೈಜ್ಞಾನಿಕ ವಿಚಾರಗಳಿಂದ, ಸಾಹಸಿ ಮನೋಭಾವದಿಂದ ಓತಪ್ರೋತಗೊಳಿಸಿದರು. ಭಾಷೆಯ ಮೂಲಕ ಬಂದ ಒತ್ತಾಸೆಯ ಕ್ರಿಯಾಶೀಲತೆಯಿಂದ ತಮ್ಮ ಭಾಷೆಯಲ್ಲಿ ಸಂವಹನ ಶಕ್ತಿ ತುಂಬಿದರು. ತಮ್ಮ ಭೌತಿಕ ಸಿರಿವಂತಿಕೆಯನ್ನು ಹೆಚ್ಚಿಸಿಕೊಳ್ಳುವಂತೆಯೇ ಭಾಷೆಯ ಸಿರಿವಂತಿಕೆಯನ್ನೂ ಹೆಚ್ಚಿಸಿದರು. ಇಂಗ್ಲಿಷರ ಎಲ್ಲ ಪ್ರಕಾರದ ಉತ್ಕೃಷ್ಟ ರಾಜಕೀಯ ಚಿಂತನೆಗಳಿಗೆ, ಮೃದು ಭಾವನೆಗಳಿಗೆ ಮಾನವೀಯ ಚಿಂತನೆಗಳಿಗೆ, ಸಾಹಿತ್ಯದ ಮೇರುಕೃತಿಗಳಿಗೆ ಕಾರಣವಾದದ್ದು ಅವರ ಭಾಷೆ. ಅರಸೊತ್ತಿಗೆಯನ್ನು ಕಿತ್ತುಹಾಕಲು, ಧರ್ಮಾಧಿಕಾರಿಗಳ ಹಿಡಿತದಿಂದ ಬಿಡಿಸಿಕೊಳ್ಳಲು ಕಾರಣವಾಗುವಂಥ ವಿಪ್ಲವಕಾರಿ ವಿಚಾರಗಳನ್ನು ಸೃಷ್ಟಿಸಿಕೊಂಡದ್ದು ಮತ್ತು ಅವುಗಳನ್ನು ಜನಸಾಮಾನ್ಯರಲ್ಲಿ ಹರಡಿದ್ದು ತಮ್ಮ ಭಾಷೆಯ ಮೂಲಕ. ಕೈಗಾರಿಕಾ ಕ್ರಾಂತಿ ಮಾಡಿದ್ದು ತಮ್ಮ ಭಾಷೆಯ ಮೂಲಕ. ಅಮೇರಿಕಾದಲ್ಲಿ ರಾಜಕೀಯ ಕ್ರಾಂತಿ ಮಾಡಿದ್ದು ತಮ್ಮ ಭಾಷೆಯ ಮೂಲಕ. ಗುಲಾಮಗಿರಿಯನ್ನು ನಿರ್ನಾಮಮಾಡಿದ್ದು ತಮ್ಮ ಭಾಷೆಯ ಮೂಲಕ. ಇಂಗ್ಲೆಂಡ್ ಪ್ರಜಾಪ್ರಭುತ್ವದ ತವರುಮನೆ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು ಮತ್ತು ಅಲಿಖಿತ ಸಂವಿಧಾನವನ್ನು ಹೊಂದಿದ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾದದ್ದು ತಮ್ಮ ಭಾಷೆಯ ಮೂಲಕ.

ಆದರೆ ಇಂದು ಭಾರತೀಯರು ತಮ್ಮ ಕೈಯಾರೆ ತಮ್ಮ ಭಾಷೆಯನ್ನು ಪರಕೀಯರ ಭಾಷಾ ಮೋಹದಿಂದ ಕೊಲ್ಲುತ್ತಿದ್ದಾರೆ. ಹಾಗೆ ಮಾಡುವುದರ ಮೂಲಕ ವಿಚಾರ ಮತ್ತು ಕ್ರಿಯಾಕ್ಷೇತ್ರಗಳಲ್ಲಿ ನಪುಂಸಕರಾಗುತ್ತಿದ್ದಾರೆ. ನೈತಿಕತೆಯನ್ನು ಕಳೆದುಕೊಳ್ಳುತ್ತಿದ್ದಾರೆ, ಮೌಲ್ಯರಹಿತ ಜೀವನಸಾಗಿಸುತ್ತಿದ್ದಾರೆ. ದೇಶದ ಭಾವನಾತ್ಮಕ ಐಕ್ಯತೆಗೆ ಅಡ್ಡಿಯಾಗುತ್ತಿದ್ದಾರೆ.

ಭಾರತದಲ್ಲಿ ನೂರಾರು ಭಾಷೆಗಳಿವೆ. ಪ್ರತಿಯೊಬ್ಬ ಭಾರತೀಯ ಮೂರು-ನಾಲ್ಕು ಭಾಷೆಗಳನ್ನು ಕಲಿಯುವ ಸಾಧ್ಯತೆಯಿಂದ ವಂಚಿತನಾಗುತ್ತಿದ್ದಾನೆ. ಸಂಪರ್ಕ ಮಾಧ್ಯಮವಾಗಿ ಇಂಗ್ಲಿಷ್ ಒಂದೇ ಎಂಬ ಭ್ರಾಂತಿಯಲ್ಲಿ ಸಿಲುಕಿದ್ದಾನೆ. ತ್ರಿಭಾಷಾ-ಬಹುಭಾಷಾ ಸೂತ್ರದಂಥ ಮೌಲಿಕ ಸೂತ್ರಗಳನ್ನು ಕಡೆಗಾಣಿಸಿದ್ದಾನೆ.

ಇದು ವಿಜ್ಞಾನದ ಯುಗ, ತಂತ್ರಜ್ಞಾನದ ಯುಗ. ಈ ಯುಗದಲ್ಲಿ ಇಂಗ್ಲಿಷ್ ಭಾಷೆಯೇ ಸಾರ್ವಭೌಮಿಕ ಎಂಬ ಅಭಿಪ್ರಾಯ ಸರ್ವತ್ರ ಮೂಡಿದೆ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನಾಗಲೀ, ಈಗಾಗಲೇ ಆಗಿರುವ ಬೆಳವಣಿಗೆಯ ಪ್ರಯೋಜನವನ್ನಾಗಲೀ ಭಾರತೀಯ ಭಾಷೆಗಳ ಮೂಲಕ ಮಾಡಲು ಎಲ್ಲಿ ಮತ್ತು ಯಾವ ಪ್ರಯತ್ನ ನಡೆದಿದೆ? ಯಾವ ವಿಶ್ವ ವಿದ್ಯಾಲಯಗಳು ಇದಕ್ಕಾಗಿ ಪರಿಶ್ರಮಿಸುತ್ತಿವೆ? ಯು.ಜಿ.ಸಿ. ಇದಕ್ಕಾಗಿ ಎಲ್ಲಿ ಪ್ರೋತ್ಸಾಹಕೊಡುತ್ತಿದೆ? ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತೀಯ ಭಾಷೆಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಬೇರ ಇಡಲಾಗಿದೆ. ಅವೆರಡೂ ಪರಸ್ಪರ ಹೊಂದಾಣಿಕೆಯಾಗದ ಪದಾರ್ಥಗಳೆಂಬಂತೆಯೇ ನಡೆಸಿಕೊಂಡು ಬರಲಾಗಿದೆ. ವಿಜ್ಞಾನ-ತಂತ್ರಜ್ಞಾನ ಒಂದು ದಿಕ್ಕಿಗೆ ಮುಖವಾಗಿ, ಭಾರತೀಯ ಭಾಷೆಗಳು ವಿರುದ್ಧ ದಿಕ್ಕಿಗೆ ಮುಖವಾಗಿ ನಿಲ್ಲುವಂತೆ ಮಾಡಲಾಯಿತೆ ಹೊರತು ದೇಶಿ ಭಾಷೆ ಮತ್ತು ವಿಜ್ಞಾನ-ತಂತ್ರಜ್ಞಾನಗಳ ಮಧ್ಯ ಕೊಡುಕೊಳ್ಳುವ, ಪರಸ್ಪರ ಪ್ರವರ್ಧಮಾನಗೊಳ್ಳುವ ರೀತಿಯಲ್ಲಿ ಸಾವಯವಿಕ ಸಂಬಂಧವನ್ನು ಕುದುರಿಸಲೇ ಇಲ್ಲ. ಬದಲಿಗೆ ಅವೆರಡೂ ಪರಸ್ಪರ ವಿರೋಧಿ ಸಂಬಂಧಗಳೆಂದೇ ಭಾವಿಸುತ್ತಬರಲಾಯಿತು. ಆದ್ದರಿಂದ ಸಮಾಜದ ಬೆಳವಣಿಗೆ ಸರ್ವಾಂಗೀಣವಾಗಲಿಲ್ಲ. ವಿಜ್ಞಾನ-ತಂತ್ರಜ್ಞಾನದ ಜೊತೆ ಕೇವಲ ಇಂಗ್ಲಿಷನ್ನೇ ಜೋಡಿಸಲಾಯಿತು. ಯಾವಾಗ ವಿಜ್ಞಾನ-ತಂತ್ರಜ್ಞಾನಗಳು ಹಣ ಸಂಪಾದನೆ ಹಾಗೂ ಅಧಿಕಾರ ಮತ್ತು ಪ್ರತಿಷ್ಠೆ ಸಂಪಾದನೆಯ ಸಾಧನಗಳಾದವೋ ಆಗ ಇಂಗ್ಲಿಷ್ ಭಾಷೆ ಶ್ರೀಮಂತಿಕೆ ಪಡೆಯುವ ಭಾಷೆಯಾಗಿ ಗುರುತಿಸಲ್ಪಡಲಾರಂಭವಾಯಿತು; ದೇಶೀಯ ಭಾಷೆಗಳು ದಾರಿದ್ರ್ಯತೆಯ ಸಂಕೇತಗಳಾದವು. ಪ್ರಜಾಪ್ರಭುತ್ವದ ದೇಶಕ್ಕೆ ಮಾರಕವಾಗಲಾರಂಭಿಸಿತು. ದೇಶದ ಸಮುದಾಯ ಹತ್ತಾರು ರೀತಿಯಲ್ಲಿ ತುಂಡಾಗಲಾರಂಭಿಸಿತು. ಇಂಗ್ಲಿಷ್ ಭಾಷೆ ಕಲಿತ ಪ್ರತಿಷ್ಠಿತ ವರ್ಗ; ಕೇವಲ ದೇಶಿ ಭಾಷೆಗಳಲ್ಲಿ ವ್ಯವಹರಿಸುವ ದೀನ ವರ್ಗ; ಕೈ ಕೆಸರು ಮಾಡಿಕೊಳ್ಳದೆ ಬಾಯಿ ಮೊಸರು ಮಾಡಿಕೊಳ್ಳುವ ನಗರವಾಸಿಗಳ ವರ್ಗ; ಕೈ ಮೈ ಕೆಸರು ಮಾಡಿಕೊಂಡು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ದೊರೆಯದೆ ಆತ್ಮಹತ್ಯೆ ಮಾಡಿಕೊಳ್ಳುವ ಗ್ರಾಮವಾಸಿಗಳ ವರ್ಗ; ಕೋಟಿ-ಮಿಲಿಯನ್-ಬಿಲಿಯನ್ ಲೆಕ್ಕದಲ್ಲಿ ವ್ಯವಹಾರ ಮಾಡುವ ಕಾರ್ಪೊರೇಟ್ ವರ್ಗ; ಕೇವಲ ನೂರು-ಸಾವಿರ ರೂಪಾಯಿಗಳಲ್ಲಿ ಲೆಕ್ಕ ಹಾಕುವ ಸಾಮಾನ್ಯವರ್ಗ. ಇಂಥ ನೂರಾರು ರೀತಿಯ ವರ್ಗಗಳಲ್ಲಿ ಭಾರತೀಯ ಸಮುದಾಯ ತುಂಡಾಗಲಾರಂಭಿಸಿತು. ಈ ವಿಭಜನೆ ಎಷ್ಟು ಆಳವೂ, ಅಗಲವೂ ಆಗಿದೆಯೆಂದರೆ ಅದನ್ನು ಪುನಃ ಏಕೀಕೃತಗೊಳಿಸುವುದು ಬಹು ಕಷ್ಟ ಸಾಧ್ಯ.

ಇಂದು ದೇಶ ಭ್ರಷ್ಟಾಚಾರದ ಶಾಪಕ್ಕೆ ಗುರಿಯಾಗಿದೆ. ಈ ಶಾಪಕ್ಕೆ ಕಾರಣ ದೇಶಿಯ ಭಾಷೆಗಳ ವಿರುದ್ಧವಾಗಿ ಇಂಗ್ಲಿಷ್ ಭಾಷೆ ನಿಂತಿರುವುದು. ಇಂಗ್ಲಿಷ್ ಭಾಷೆ ಕಲಿತವರು ದೇಶಿಯಭಾಷೆಗಳನ್ನಾಡುವ ಜನರನ್ನು ಶೋಷಿಸಲು ಆರಂಭಿಸಿದರು, ವಂಚಿಸಲು ಆರಂಭಿಸಿದರು. ಈ ಕಾಯಕದಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೂ ಶಾಮೀಲಾದವು. ಇಂಗ್ಲಿಷ್ ಭಾಷಾ ವ್ಯಾಮೋಹ ಜನರಲ್ಲಿ ಹೆಚ್ಚಿದಂತೆ ಶಿಕ್ಷಣ ಕ್ಷೇತ್ರವೂ ಎಲ್ಲ ಪಾಪಗಳ ಮೂಲವಾಯಿತು. ಮಕ್ಕಳಿಗೆ ಯೋಗ್ಯ ಮತ್ತು ಸಾರ್ಥಕ ಶಿಕ್ಷಣ ಕೊಡಬೇಕಾದ ಸಂಸ್ಥೆಗಳು ಈ ಕೆಲಸವೊಂದನ್ನು ಬಿಟ್ಟು ಹಣ ಸಂಪಾದನೆ ಮತ್ತು ಬೇರೆಲ್ಲ ಅನಗತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವು.

ಮೇಲ್ಕಾಣಿಸಿದ ಎಲ್ಲ ದುರಂತಗಳ ಖಳನಾಯಕ ಪ್ರಜೆಗಳೇ ಆರಿಸಿದ 'ಜನಪ್ರಿಯ' ಸರ್ಕಾರ! ಇದು ದುರಂತದ ದುರಂತ. ಯಾವ ರೀತಿ ಕಾಮಾತುರನಿಗೆ ಭೀತಿ, ಲಜ್ಜೆ ಇತ್ಯಾದಿ ಯಾವುದೂ ಇಲ್ಲವೋ ಅದೇ ರೀತಿ ರಾಜಕೀಯ ಪಕ್ಷಗಳಿಗೆ ಅಧಿಕಾರ ಹಿಡಿಯುವ ಆತುರದಲ್ಲಿ ತಾವು ನಿಂತ ಮರದ ಕೊಂಬೆಯನ್ನೇ ಕಡಿಯುವ ದುಃಸ್ಸಾಹಸಕ್ಕೆ ಇಳಿಯುತ್ತವೆ. ಅಂಥದೇ ಒಂದು ಪ್ರಸಂಗ ಕೆಲವು ಸನ್ನಿವೇಶದಲ್ಲಿ ಪ್ರತ್ಯಕ್ಷವಾಗಿಯೂ, ಇನ್ನು ಕೆಲವು ಸನ್ನಿವೇಶದಲ್ಲಿ ಪರೋಕ್ಷವಾಗಿಯೂ ದೇಶಿಯ ಭಾಷೆಗಳ ಕತ್ತನ್ನು ಹಿಸುಕುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಅದರ ಉದ್ದೇಶ್ಯ ಸ್ಪಷ್ಟವಾಗಿದೆ. ಭಾರತವನ್ನು ಬಲಾಢ್ಯ ಮತ್ತು ಮುಂದುವರಿದ ದೇಶವನ್ನಾಗಿ ಮಾಡಬೇಕಾಗಿದೆ. ಭಾರತ ಆ ರೀತಿ ಆಗಬೇಕಾದರೆ ಇಂಗ್ಲಿಷ್ ಭಾಷೆಯೇ ರಾಷ್ಟ್ರಭಾಷೆ, ಆಡಳಿತಭಾಷೆ, ಶಿಕ್ಷಣ ಮಾಧ್ಯಮದ ಭಾಷೆ, ವ್ಯವಹಾರ ಭಾಷೆಯಾಗಬೇಕು. ೨೦೨೫ರ ವೇಳೆಗೆ ದೇಶದ ಜನಸಂಖ್ಯೆಯಲ್ಲಿ ಕೇವಲ ನೂರಕ್ಕೆ ೨೦ರಷ್ಟು ಜನರು ಹಳ್ಳಿಗಳಲ್ಲಿರಬೇಕು. ಇನ್ನು ೮೦ರಷ್ಟು ಜನರು ನಗರಗಳಲ್ಲಿರಬೇಕು ಎಂಬ ನೀತಿ ಇಂದಿನ ಕೇಂದ್ರ ಸರ್ಕಾರದ್ದಾಗಿದೆ. ಕ್ರಮೇಣ ಭಾರತ ಇನ್ನೊಂದು ಅಮೇರಿಕಾ ಆಗಬೇಕು ಎಂಬ ಕನಸು ಸರ್ಕಾರದ್ದಾಗಿದೆ. ತಮ್ಮ ಹಿತ, ತಮ್ಮ ಏಳಿಗೆ ಇಂಗ್ಲಿಷ್ ಭಾಷೆಯಿಂದಲ್ಲದೆ ಬೇರೆ ಇನ್ನಾವ ಭಾಷೆಯಿಂದಲೂ ಸಾಧ್ಯವಿಲ್ಲ ಎಂಬ ಭ್ರಮೆಯನ್ನು ಸರ್ಕಾರ ಜನತೆಯಲ್ಲುಂಟುಮಾಡಿದೆ. ಈ ಭ್ರಮೆ ಎಷ್ಟು ವ್ಯಾಪಕ ಮತ್ತು ಬಲಿಷ್ಠವಾಗಿದೆಯೆಂದರೆ ಗರ್ಭದಲ್ಲಿರುವ ಮಗುವಿಗೆ ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಹತ್ತಾರು ಸಾವಿರ ರುಪಾಯಿ ಮುಂಗಡಕೊಟ್ಟು ಸ್ಥಳ ಕಾದಿರಿಸುತ್ತಾರೆ! ಅಂದರೆ ಇಂಗ್ಲಿಷ್ ಭಾಷೆ ಜನರನ್ನು ಬಿಡಲು ಸಿದ್ಧವಾಗಿದ್ದರೂ ಜನರೇ ಇಂಗ್ಲಿಷನ್ನು ಅಪ್ಪಿಕೊಳ್ಳುತ್ತಿದ್ದಾರೆ. ಇಷ್ಟೊಂದು ಆತ್ಮಘಾತಕಕಾರಿ ಭ್ರಮೆಯನ್ನು ಸರ್ಕಾರ ಇಂಗ್ಲಿಷ್ ಭಾಷೆಯ ಬಗ್ಗೆ ಸೃಷ್ಟಿಸಿದೆ. ಈ ಕಾರಣದಿಂದ ಸಾವಿರಾರು ವರ್ಷಗಳಷ್ಟು ಹಳೆಯದಾದ ತಮಿಳು, ಕನ್ನಡ ಮತ್ತು ತೆಲಗಿನಂಥ ಶ್ರೀಮಂತ ಭಾಷೆಗಳು ಅವಸಾನದ ಸ್ಥಿತಿ ತಲುಪುತ್ತಿವೆ. ಇನ್ನು ಚಿಕ್ಕ ಭಾಷೆಗಳಿಗೆ ಆಗಲೆ ಗೋರಿ ತೆಗೆದಾಗಿದೆ. ಜಗತ್ತಿನಲ್ಲಿ ಇಂಗ್ಲಿಷ್‌ನಷ್ಟೆ ಮಹತ್ವದ ಹಾಗು ಅಗತ್ಯವಾದ ಫ್ರೆಂಚ್, ಜರ್ಮನ್, ಜಪಾನಿ, ರಶಿಯನ್, ಚೀನಿಯಂಥ ಭಾಷೆಗಳಿವೆ, ಅವುಗಳನ್ನು ಕಲಿಯುವುದು ಸಹ ಇಂದಿನ ಕಾಲಕ್ಕೆ ಜರೂರು ಎಂಬ ವಿಚಾರವನ್ನು ಭಾರತೀಯರಲ್ಲಿ ಮೂಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ.

ಭಾರತೀಯರಲ್ಲಿ ಇಷ್ಟೊಂದು ಇಂಗ್ಲೀಷ್ ವ್ಯಾಮೋಹ ಬೆಳೆಯಲು ಸ್ವತಂತ್ರ ಭಾರತದ ನಾಯಕರು, ಯೋಜನಾ ನಿರೂಪಕರು, ಅರ್ಥಮಂತ್ರಿಗಳು, ಶಿಕ್ಷಣ ಮಂತ್ರಿಗಳು ಕಾರಣ. ಭಾರತ ಸ್ವತಂತ್ರಗೊಂಡ ತಕ್ಷಣ ರಚನೆಯಾದ ಸರ್ಕಾರದಲ್ಲಿ ಪ್ರಧಾನಮಂತ್ರಿ ಸ್ಥಾನದಿಂದ ರಕ್ಷಣಾಮಂತ್ರಿ ಸ್ಥಾನದಲ್ಲಿಯ ಎಲ್ಲ ಮಂತ್ರಿಗಳು ಸಾಮಾನ್ಯವಾಗಿ ವಿದೇಶದಲ್ಲಿ ಮುಖ್ಯವಾಗಿ ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗ ಮಾಡಿದವರಾಗಿದ್ದರು. ಅವರೆಲ್ಲ ಇಂಗ್ಲಿಷ್ ಭಾಷಾ ಪ್ರೇಮಿಗಳೂ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಆರಾಧಕರೂ ಆಗಿದ್ದರು. ಅವರಲ್ಲಿ ಬಹುಪಾಲು ನಾಯಕರು ಗ್ರಾಮೀಣ ಭಾರತದೊಂದಿಗಿನ ಸಂಪರ್ಕ ಕಳೆದುಕೊಂಡಿದ್ದರು. ಅವರ ಕಣ್ಮುಂದೆ ಮತ್ತು ಮನಸ್ಸಿನಲ್ಲಿ ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿಯೇ ಇತ್ತು. ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿಗಾಗಿ ಇಂಗ್ಲಿಷ್ ತುಂಬ ಅಗತ್ಯವೆನಿಸಿತ್ತು. ಆಗ ಬಿತ್ತಲ್ಪಟ್ಟ ಇಂಗ್ಲಿಷ್ ವ್ಯಾಮೋಹದ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾತ್ಮಾ ಗಾಂಧೀಯವರೊಬ್ಬರೇ ದೇಶದ ಪ್ರಾದೇಶಿಕ ಭಾಷೆಗಳ ಮಹತ್ವವನ್ನು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವುಗಳ ಸಕ್ರಿಯ ಪಾತ್ರವನ್ನು ತಿಳಿದಿದ್ದರು. ಆದ್ದರಿಂದಲೇ ಅವರು ಭಾಷಾವಾರು ಪ್ರಾಂತರಚನೆಗೂ ಒತ್ತಾಸೆ ನೀಡಿದರು. ತಮ್ಮ ಅನೇಕ ಸಾಹಿತ್ಯವನ್ನು ತಮ್ಮ ಮಾತೃಭಾಷೆಯಲ್ಲಿಯೇ ರಚಿಸಿದರು. ಗಾಂಧೀಯವರು ಇಂಗ್ಲೆಂಡಿನಲ್ಲಿ ಓದಿ ಬ್ಯಾರಿಸ್ಟರ್ ಆದರು. ಇಂಗ್ಲಿಷ್ ಸರ್ಕಾರದೊಂದಿಗೆ ೧೯೦೬ ರಿಂದ ೧೯೪೭ರ ವರೆಗೂ ಸುಮಾರು ೪೦ ವರ್ಷ ಇಂಗ್ಲಿಷ್‌ನಲ್ಲಿಯೇ ಪತ್ರವ್ಯವಹಾರ ಮಾಡಿದರು. ತಮ್ಮ ಪತ್ರಿಕೆಗಳಾದ 'ಇಂಡಿಯನ್ ಒಪೀನಿಯನ್', 'ಯಂಗ್ ಇಂಡಿಯಾ', 'ಹರಿಜನ್' ಮುಂತಾದವುಗಳನ್ನು ಇಂಗ್ಲಿಷ್‌ನಲ್ಲಿಯೇ ಪ್ರಕಟಿಸಿದರು. ಆದಾಗ್ಯೂ ಅವರು ತಮ್ಮ ಮಾತೃಭಾಷೆ ಗುಜರಾತಿಯನ್ನೂ, ರಾಷ್ಟ್ರಭಾಷೆ ಹಿಂದಿ-ಹಿಂದೂಸ್ತಾನಿಯನ್ನೂ ಮರೆಯಲಿಲ್ಲ. ಭಾರತೀಯರು ಪರಸ್ಪರ ಇಂಗ್ಲಿಷ್‌ನಲ್ಲಿ ಮಾತನಾಡಿದರೆ, ಇಂಗ್ಲಿಷ್‌ನಲ್ಲಿ ಪತ್ರ ವ್ಯವಹಾರ ಮಾಡಿದರೆ ಅದನ್ನು ಖಂಡಿಸುತ್ತಿದ್ದರು. ೧೯೪೫, ಅಕ್ಟೋಬರ್ ೫ರಂದು ನೆಹರೂಗೆ ಪತ್ರ ಬರೆಯುವುದಕ್ಕಾಗಿ ಗಾಂಧೀ ಇಂಗ್ಲಿಷ್‌ಗೆ ಬದಲಾಗಿ ಹಿಂದೂಸ್ತಾನಿಯನ್ನು ಉಪಯೋಗಿಸಲು ನಿರ್ಧರಿಸಿದರು. ಭಾರತೀಯ ಭಾಷೆಗಳ ಮಹತ್ವ, ಅವುಗಳ ಮೂಲಕ ಸಾಧ್ಯವಾಗುವ ಮಾನವನ ವಿಕಾಸ ಮತ್ತು ಸ್ವರಾಜ್ಯ ಸ್ಥಾಪಿಸುವುದಕ್ಕಾಗಿರುವ ಅದರ ಉಪಯೋಗ ಇತ್ಯಾದಿ ವಿಚಾರಗಳನ್ನು ಗಾಂಧೀಯವರಿಗಿಂತ ಚೆನ್ನಾಗಿ ತಿಳಿದವರು ಇಂದು ಸರ್ಕಾರಗಳಲ್ಲಿ ಇಲ್ಲ. ಇಲ್ಲಿಯೇ ಇಂದಿನ ಇಂಗ್ಲಿಷ್ ವ್ಯಾಮೋಹದ ದುರಂತದ ಕಾರಣವಿದೆ. ಇಂಗ್ಲಿಷ್ ಭಾಷೆಗೂ ಸಾಮ್ರಾಜ್ಯಶಾಹಿ ಮನೋಭಾವಕ್ಕೂ ವಿವಾಹವೇರ್ಪಟ್ಟಿದೆ. ಯಾವ ರೀತಿ ಇಂಗ್ಲಿಷ್ ಭಾಷೆಯ ಕಾರಣದಿಂದ ಇಂದು ಅಮೇರಿಕಾ, ಇಂಗ್ಲೆಂಡ್ ಮುಂತಾದ ದೇಶಗಳು ಸಾಮ್ರಾಜ್ಯ ಶಾಹಿ ದೇಶಗಳಾದವೋ ಅದೇ ರೀತಿ ಇಂಗ್ಲಿಷ್ ಕಲಿಯುವ ಪ್ರತಿಯೊಬ್ಬನಲ್ಲೂ ಸಾಮ್ರಾಜ್ಯಶಾಹಿ ಮನೋಭಾವ ಬಂದು ಬಿಡುತ್ತದೆ. ಎಲ್ಲರೂ ಸಮಾನವಾಗಿ ಜೀವನ ನಡೆಸಬೇಕಾದ ಸಮಾಜದಲ್ಲಿ ಶೋಷಕ ಮತ್ತು ಶೋಷಿತ ಎಂಬ ವರ್ಗವನ್ನುಂಟುಮಾಡುತ್ತದೆ. ಅಲ್ಲದೆ, ಇದಕ್ಕೂ ಭೀಕರವಾದ ಇನ್ನೊಂದು ಪರಿಸ್ಥಿತಿಯುಂಟಾಗುತ್ತದೆ. ಇಂಗ್ಲಿಷ್ ಅಂದರೆ ವಿಜ್ಞಾನ ಹಾಗೂ ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನವೆಂದರೆ ವಿನಾಶಕಾರಿ ಶಸ್ತ್ರಾಸ್ತ್ರಗಳ ಹಾಗೂ ಅನಿಯಂತ್ರಿತ , ಪ್ರಚ್ಛನ್ನ ವೈಜ್ಞಾನಿಕ ಶೋಧನೆಗಳು; ಸರಳ ಜೀವನದ ವಿಸ್ಮೃತಿ, ಭೋಗ ಜೀವನದ ಆರಾಧನೆ; ಪ್ರಕೃತಿ-ಪರಿಸರಗಳ ವಸ್ತ್ರಾಪಹರಣ; ನಿಧಾನಗತಿಯ ಮೇಲೆ ವೇಗದ ಸವಾರಿ, ವೇಗದ ಸವಾರಿಗೆ ಹಣದಾಸೆಯ ಇಂಧನ, ದಾರಿಯುದ್ದಕ್ಕೂ ವಿನಾಶದ ಧೂಳು.

ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಮೇಲೆ ಪ್ರಜೆಗಳ ನಿಯಂತ್ರಣವಿರಬೇಕು. ನಿಯಂತ್ರಣ ಸಾಧಿತವಾಗಬೇಕಾದರೆ ಜನತೆ ತಿಳಿಯುವ, ವ್ಯವಹರಿಸುವ ಭಾಷೆಯಲ್ಲಿ ಆಡಳಿತ ನಡೆಯಬೇಕು. ಇಲ್ಲವಾದರೆ ನೂರಾರು ವರ್ಷಗಳ ಹಿಂದೆ ಪ್ಲೇಟೋ ಹೇಳಿದಂತೆ ಆಗುತ್ತದೆ. ಅಂದರೆ ಸರ್ಕಾರದ ಆಡಳಿತದಲ್ಲಿ ಭಾಗವಹಿಸದ ಬುದ್ಧಿವಂತರು ಅಯೋಗ್ಯ ಜನರ ಆಡಳಿತದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ನಮ್ಮ ಸಂವಿಧಾನವು ದೇಶದ ಎಲ್ಲ ಪ್ರಮುಖ ಭಾಷೆಗಳನ್ನು ರಾಷ್ಟ್ರಭಾಷೆಯೆಂದು ಅಂಗೀಕರಿಸಿದೆ. ಆದ್ದರಿಂದ ಎಲ್ಲ ಪ್ರಾದೇಶಿಕ ಭಾಷೆಗಳು ಸಮಾನ ಗೌರವ ಮತ್ತು ಉಪಯೋಗಕ್ಕೆ ಅರ್ಹವಾಗಿವೆ. ಅವು ನಿರಂತರ ವಿಕಾಸಶೀಲವಾಗಿರುವುದಕ್ಕೆ

ಅವಕಾಶವಿದೆ. ಅವು ವಿಕಾಸಗೊಳ್ಳಬೇಕಾದರೆ ಆಯಾ ಪ್ರದೇಶದ ಭಾಷೆ ಆಯಾ ಪ್ರದೇಶದಲ್ಲಿ ಶಿಕ್ಷಣದ, ಆಡಳಿತದ ಮತ್ತು ವ್ಯವಹಾರದ ಭಾಷೆಯಾಗಿರಬೇಕಾಗುತ್ತದೆ. ಪ್ರಾದೇಶಿಕ ಭಾಷೆಗಳ ಬೆಳವಣಿಗೆಯಲ್ಲಿ ಬೇರಿನ್ನಾವುದೇ ಭಾಷೆ ಅಡ್ಡಿಯಾಗಲು ಸಾಧ್ಯವಿಲ್ಲ. ಅದರೆ ನಮ್ಮ ಸರ್ಕಾರಗಳು ಇಂಗ್ಲಿಷ್‌ಗೆ ಹೆಚ್ಚು ಮಹತ್ವ ಕೊಡುತ್ತಿವೆ; ಇಂಗ್ಲಿಷನ್ನು ಎಲ್ಲ ಪ್ರಾದೇಶಿಕ ಭಾಷೆಗಳಿಗೆ ವಿರುದ್ಧವಾಗಿ ನಿಲ್ಲಿಸುತ್ತಿವೆ. ಈ ಪ್ರಯತ್ನ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ: ಕರ್ನಾಟಕ ಸರ್ಕಾರ ಕರ್ನಾಟಕದಲ್ಲಿ ರಾಜಾರೋಷವಾಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಲು ಹೊರಟಿವೆ. ಸಂವಿಧಾನದ ಮೂಲ ತತ್ವಗಳನ್ನು, ಆಶಯಗಳನ್ನು ರಕ್ಷಿಸಬೇಕಾದ ಸರ್ಕಾರವೇ ಸಂವಿಧಾನಕ್ಕೂ, ಪ್ರಾದೇಶಿಕ ಭಾಷೆಗೂ, ಆ ಭಾಷೆಯನ್ನಾಡುವ ಜನತೆಗೂ ವಿಶ್ವಾಸದ್ರೋಹ ಮಾಡುತ್ತಿದೆ. ಇಂಥದೇ ಕೆಲಸವನ್ನು ಕೇಂದ್ರ ಸರ್ಕಾರವೂ ಮಾಡುತ್ತಿದೆ. ಆಡಳಿತದ ಭಾಷೆಯನ್ನಾಗಿ ಹಿಂದಿಯನ್ನು ಹೇರಲು ಹೊರಟಿದೆ. ಇಂಗ್ಲಿಷ್ ಭಾಷೆಯ ಭಾರವನ್ನು ಹೊರುವುದರ ಜೊತೆಗೆ ಹಿಂದಿ ಭಾಷೆಯ ಭಾರವನ್ನೂ ಹೊರುವ ಸ್ಥಿತಿ ಬಂದಿದೆ. ಸಂಪರ್ಕ ಭಾಷೆಯಾಗಿ ಹಿಂದಿ ಇರಬೇಕಾದುದು ಸಮ್ಮತವಾದರೂ ಅದನ್ನು ಬಲವಂತವಾಗಿ ಗಂಟಲಲ್ಲಿ ತುರುಕುವುದು ಅಸಮ್ಮತವಾಗುತ್ತದೆ.

ಭಾರತದ ಪ್ರಾದೇಶಿಕ ಭಾಷೆಗಳು ಇಂಗ್ಲಿಷ್ ಭಾಷೆಯ ಕಾರಣದಿಂದ ಸಂಕಟದಲ್ಲಿವೆ, ಗಂಡಾಂತರದಲ್ಲಿವೆ, ಅವಸಾನದ ಸ್ಥಿತಿಯಲ್ಲಿವೆ. ಪ್ರಾದೇಶಿಕ ಭಾಷೆಗಳ ವಿನಾಶವೆಂದರೆ ಭಾರತ, ಭಾರತೀಯತೆ, ಭಾರತ ಸಂಸ್ಕೃತಿ ಇತ್ಯಾದಿಗಳೆಲ್ಲದರ ವಿನಾಶ.

ದೇಶದ ಎಲ್ಲ ಸರ್ಕಾರಗಳೂ ಎಚ್ಚೆತ್ತುಗೊಳ್ಳಬೇಕು. ಭಾಷಾ ವಿಷಯವಾಗಿ ಸರಿಯಾದ ರಾಷ್ಟ್ರೀಯ ನೀತಿಯನ್ನು ರೂಪಿಸಬೇಕು. ದೇಶದ ಅಖಂಡತೆ ಖಂಡಿತವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರಗಳ ಮೇಲೂ ಇದೆ, ಜನತೆಯ ಮೇಲೂ ಇದೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀ ತಮ್ಮ ಸತ್ಯದೊಂದಿಗೆ ಪ್ರಯೋಗವೆಂಬ ಹೆಸರಿನ ಆತ್ಮಚರಿತ್ರೆಯಲ್ಲಿ ಹೇಳಿದ ಈ ಕೆಳಗಿನ ಮಾತು ಎಲ್ಲರ ಹೃನ್ಮನಗಳಲ್ಲಿ ರಿಂಗಣಿಸಲಿ:-

"ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡುವುದರಿಂದ ಕೆಡುಕೆ, ಇಲ್ಲವೆ ಎಂಬ ವಿಷಯದಲ್ಲಿ ನನಗೂ ಪೋಷಕರಿಗೂ ಅನೇಕ ವೇಳೆ ತೀವ್ರ ವಾಗ್ವಾದ ಉಂಟಾಗುತ್ತಿತ್ತು. ಎಳೆ ಮಕ್ಕಳಿದ್ದಾಗಿನಿಂದಲೂ ಮಕ್ಕಳಿಗೆ ಇಂಗ್ಲಿಷ್‌ನಲ್ಲಿ ಯೋಚಿಸುವುದನ್ನು, ಮಾತನಾಡುವುದನ್ನು ಕಲಿಸುವ ಭಾರತೀಯ ಪೋಷಕರು ತಮಗೂ, ತಮ್ಮ ಮಕ್ಕಳಿಗೂ ದ್ರೋಹವೆಸಗುತ್ತಿದ್ದಾರೆಂಬುದು ನನ್ನ ದೃಢವಾದ ನಂಬಿಕೆ."

* * *

ಸನಾತನ ಧರ್ಮದ ಉಜ್ಜೀವಕ ಮದನ ಮೋಹನ ಮಾಲವೀಯ

(ಮದನ ಮೋಹನ ಮಾಲವೀಯರ ನೂರೈವತ್ತನೇ ಜನ್ಮವರ್ಷದ ನೆನಪಿನಲ್ಲಿ ಈ ಲೇಖನ. -ಸಂ)

– ಎಸ್.ಆರ್.ಆರ್

"ವಿನಮ್ರತೆ, ಶುಚಿತೆ, ರಾಷ್ಟ್ರಪ್ರೇಮ, ಭಾರತೀಯ ಸಂಸ್ಕೃತಿಯ ಬಗೆಗೆ ನಿತಾಂತ ನಿಷ್ಠೆ ಈ ಆದರ್ಶಗಳಿಗಾಗಿ ಮದನಮೊಹನ ಮಾಲವೀಯರು ತಮ್ಮ ಅಖಂಡ ಜೀವನವನ್ನು ಸಮರ್ಪಿಸಿಕೊಂಡಿದ್ದರು. ಆ ಆದರ್ಶಪಾಲನೆ ನಮ್ಮೆಲ್ಲರ ಜೀವನದಲ್ಲಿ ಅನುಕರಣಾರ್ಹವಾಗಿದೆ." ಹೀಗೆಂದಿದ್ದವರು, ಡಾ. ಸರ್ವಪಲ್ಲಿ ರಾಧಾಕೃಷ್ಣನ್.

"ದೇಶಭಕ್ತಿಯಲ್ಲಿ ಮದನಮೊಹನ ಮಾಲವೀಯರಿಗೆ ಸಮಗಟ್ಟುವವರು ಯಾರಿದ್ದಾರೆ? ಯೌವನಕಾಲದಿಂದ ಪ್ರೌಢದಶೆಯವರೆಗೆ ಅವರ ದೇಶಭಕ್ತಿಪ್ರವಾಹ ಅವಿಚ್ಛಿನ್ನವಾಗಿ ಹರಿದುಬಂದಿದೆ. ಕಾಶಿ ವಿಶ್ವವಿದ್ಯಾಲಯ ಮಾಲವೀಯರ ಪ್ರಾಣ; ಮತ್ತು ಮಾಲವೀಯರ ಪ್ರಾಣ ಕಾಶಿ ವಿಶ್ವವಿದ್ಯಾಲಯ. ನಮಗಾಗಿ ಈ ನರವೀರ ದೀರ್ಘಾಯುವಾಗಲಿ" ಎಂಬ ಆಶಂಸನೆಯನ್ನು ವ್ಯಕ್ತಪಡಿಸಿದ್ದವರು ಗಾಂಧಿ (೭-೯-೧೯೩೧).

"ಮದನಮೋಹನ ಮಾಲವೀಯರ ನಿಃಸ್ವಾರ್ಥ ಕಾರ್ಯ, ಜೀವನ ಸರಳತೆ, ಶಿಕ್ಷಣೋತ್ಸಾಹ, ಎಲ್ಲಕ್ಕಿಂತ ಮಿಗಿಲಾಗಿ ಅವರ ರಾಷ್ಟ್ರಪ್ರೇಮ – ಇವು ನನಗೆ ಸ್ಫೂರ್ತಿಯನ್ನಿತ್ತು ನನ್ನನ್ನು ಸಂಮೋಹನಗೊಳಿಸಿವೆ" ಎಂದಿದ್ದರು, ಡಾ. ರಾಜೇಂದ್ರಪ್ರಸಾದ್.

"ಮಾಲವೀಯರ ಸಮೀಪದಲ್ಲಿ ಕುಳಿತುಕೊಂಡಾಗ ನನಗೆ ಪವಿತ್ರ ಗೆಂಗೆಯಲ್ಲಿ ಸ್ನಾನಮಾಡಿ ಬಂದ ರೀತಿಯ ಅನುಭವವಾಗುತ್ತಿತ್ತು" – ಎಂದವರು ಜಯಪ್ರಕಾಶ ನಾರಾಯಣ್.

೨೦ನೇ ಶತಮಾನದ ಮೊದಲ ನಾಲ್ಕು ದಶಕಗಳಲ್ಲಿ ಇಡೀ ದೇಶದ ಅತ್ಯಂತ ಸಕ್ರಿಯ ನಾಯಕರಲ್ಲಿ ಒಬ್ಬರಾಗಿದ್ದವರು ಮಾಲವೀಯರು. ರಾಷ್ಟ್ರಮಟ್ಟದ ಯಾವ ಕಲಾಪವೂ ಅವರು ಇಲ್ಲದೆ ನಡೆಯುತ್ತಿರಲಿಲ್ಲ. ಕಾಂಗ್ರೆಸ್ ಸಭೆಗಳಾಗಲಿ, ಹಿಂದೂಮಹಾಸಭೆಯ ಸಮಾವೇಶಗಳಾಗಲಿ, ಶಿಕ್ಷಣಸಂಬಂಧಿ ಸಮ್ಮೇಳನಗಳಾಗಲಿ ಎಲ್ಲದರಲ್ಲಿಯೂ ಅವರ ಸಹಭಾಗಿತ್ವ ಇದ್ದೇ ಇರುತ್ತಿತ್ತು. ಹೀಗಿದ್ದೂ ಆಂತರ್ಯದಲ್ಲಿ ಸದಾ ಅವರಿಗೆ ಸ್ಫೂರ್ತಿಕೇಂದ್ರವಾಗಿದ್ದುದು ಸನಾತನಧರ್ಮವೇ.

ಅವರ ೭೫ನೇ ಜನ್ಮ ದಿನೋತ್ಸವ ಆಚರಣೆಯ ಸಂದರ್ಭದಲ್ಲಿ ಮಾಲವೀಯರು ಪುನರುಚ್ಚರಿಸಿದ ಸಂದೇಶ ಇದು: "ಸ್ನಾನದಿಂದ ಶರೀರವು

ಶುದ್ಧವಾಗುವಂತೆ ಭಗವತ್ಸಂಕೀರ್ತನದಿಂದ ಹೃದಯವು ಶುದ್ಧವಾಗುತ್ತದೆ. ಎಲ್ಲರ ಮೊದಲ ಕರ್ತವ್ಯವೆಂದರೆ ಧರ್ಮದ ಅನುಸರಣೆ ಮತ್ತು ಪರಮಾತ್ಮನ ಸ್ಮರಣೆ; ಎರಡನೆಯದು ತಂದೆ-ತಾಯಿಗಳ ಮತ್ತು ಗುರುಗಳ ಸೇವೆ; ಮೂರನೆಯದು ಪ್ರಾಣಿದಯೆ; ನಾಲ್ಕನೆಯದು ದೇಶಸೇವೆ ಮತ್ತು ಜಗತ್ತಿನ ಸೇವೆ."

"ಇದು ನಮ್ಮ ಮಾತೃಭೂಮಿ, ಪಿತೃಭೂಮಿ, ಸುಕೃತಿಲಬ್ಧ ಕರ್ಮಭೂಮಿ (ರಾಮ, ಕೃಷ್ಣ, ಬುದ್ಧಿ ಇತ್ಯಾದಿ ಮಹಾಪುರುಷರ, ಆಚಾರ್ಯರ, ಬ್ರಹ್ಮರ್ಷಿಗಳ, ರಾಜರ್ಷಿಗಳ, ಧರ್ಮವೀರರ, ಶೂರವೀರರ, ದಾನವೀರರ, ಸ್ವಾತಂತ್ರ್ಯಪ್ರೇಮಿ ದೇಶಭಕ್ತರ ಸಾಧನೆಯಿಂದ ಉಜ್ಜ್ವಲಗೊಂಡ ಕರ್ಮಭೂಮಿ ಇದು.) ಇದ-ರಿಂದಾಗಿ ಈ ದೇಶ ನಮ್ಮ ಆತ್ಯಂತಿಕ ಭಕ್ತಿಗೆ ಅರ್ಹವಾದದ್ದು. ನಮ್ಮ ಪ್ರಾಣದಿಂದಲೂ ಧನದಿಂದಲೂ ಸೇವ್ಯವಾದ ದೇಶ ಇದು.

ಎಲ್ಲ ಪ್ರಾಣಿಗಳ ಹಿತಕ್ಕಾಗಿಯೂ ದುಷ್ಟರ ದಮನಕ್ಕಾಗಿಯೂ ಧರ್ಮಸ್ಥಾಪನೆಗಾಗಿಯೂ ಪರಮೇಶ್ವರನಿಗೆ ಪ್ರಣಾಮ ಸಲ್ಲಿಸಿ ಆ ಉದ್ದೇಶಗಳ ಈಡೇರಿಕೆಗಾಗಿ ಹಳ್ಳಿಗಳಲ್ಲಿ ಸಂಘಟಿತ ಸಭೆಗಳನ್ನೂ ಶುಭಕರ ಕಥಾಪ್ರಸಂಗಗಳನ್ನೂ ಪಾಠಶಾಲೆ ವ್ಯಾಯಾಮಶಾಲೆಗಳನ್ನೂ ಏರ್ಪಡಿಸಿ ಪ್ರತಿಸಂದರ್ಭದಲ್ಲಿಯೂ ಉತ್ಸವಾಚರಣೆ ಮಾಡಬೇಕು.

ಒಳ್ಳೆಯ ಕರ್ಮಕ್ಕೆ ಸತ್ಫಲ, ಕೆಟ್ಟ ಕರ್ಮಕ್ಕೆ ದುಷ್ಫಲ ಎಂಬುದನ್ನೂ ಪೂರ್ವಕರ್ಮಾನುಸಾರ ಪುನರ್ಜನ್ಮವೂ ಸಾಧನಾನುಗುಣವಾಗಿ ಮೋಕ್ಷವೂ ಲಭಿಸುತ್ತದೆ ಎಂಬುದನ್ನೂ ಎಂದೂ ಮರೆಯಬಾರದು.

ನಮ್ಮ ನಂಬಿಕೆಯಲ್ಲಿ ದೃಢತೆ ಇರಬೇಕು. ಇತರರನ್ನು ಎಂದೂ ನಿಂದಿಸಬಾರದು. (ಧಾರ್ಮಿಕ ಅಥವಾ ಲೌಕಿಕ) ಮತಭೇದವಿದ್ದಲ್ಲಿ ಸಹನಶೀಲರಾಗಿಬೇಕು. ಎಲ್ಲ ಪ್ರಾಣಿಗಳಲ್ಲಿಯೂ ಮೈತ್ರೀಭಾವ ಇರಿಸಿಕೊಳ್ಳಬೇಕು.

ನಮಗೆ ಅಹಿತವೆನಿಸುವ ಆಚರಣೆಯನ್ನು ಅನ್ಯರ ವಿಷಯದಲ್ಲಿ ನಡೆಸಬಾರದು. ನಮಗೆ ಮನಃಕ್ಲೇಶ ಬರುವಂತೆ ಇತರರಿಗೂ ಬರುತ್ತದೆಂದು ಅರಿತು ಸಂಯಮದಿಂದಿರಬೇಕು.

ಹಿಂದುಸ್ಥಾನವೆಂದು ಪ್ರಸಿದ್ಧವಾಗಿರುವ ಈ ಭಾರತವರ್ಷ ಅತ್ಯಂತ ಪವಿತ್ರವಾದದ್ದು. ನಮಗೆ ಧನ-ಧರ್ಮ-ಸೌಖ್ಯಗಳನ್ನು ನೀಡಿರುವ ಈ ದೇಶ ಜಗತ್ತಿನಲ್ಲಿಯೇ ಉತ್ತಮವಾದದ್ದು."

ತಮ್ಮ ದೃಷ್ಟಿಯ ಆದರ್ಶಭಾರತದ ಕಲ್ಪನೆಯನ್ನು ಮಾಲವೀಯರು ಇನ್ನೊಂದು ಶ್ಲೋಕಪಂಚಕದಲ್ಲಿ ನಿರೂಪಿಸಿದ್ದರು: "ಅನಾಶ್ರಿತರು, ವಿಧವೆಯರು ಇವರು ಸದಾ ರಕ್ಷಣೀಯರು; ಅಂತಯೇ ಮಂದಿರಗಳು ಮತ್ತು ಗೋವುಗಳು. ಈ ಉದ್ದೇಶಗಳಿಗಾಗಿ ಸಾತ್ತ್ವಿಕರೆಲ್ಲ ಸಂಘಟಿತರಾಗಬೇಕು. ಎಲ್ಲರೂ ಇದಕ್ಕಾಗಿ ಉದಾರವಾಗಿ ಧನದಾನ ಮಾಡಬೇಕು.

ಮಹಿಳೆಯರಿಗೆ ಸದಾ ಸಂಮಾನ ಸಲ್ಲಬೇಕು. ದುಃಖಿಗಳಲ್ಲಿ ದಯೆ ತೋರಬೇಕು. ಸಜ್ಜನರಿಗೆ ಜೀವಹಾನಿಯಾಗಬಾರದು. ಆದರೆ ಅನ್ಯರ ಮೇಲೆ ಹಲ್ಲೆ ನಡೆಸುವವರಿಗೆ ಮರಣದಂಡನೆ ವಿಧಿಸಬೇಕು.

ನಿರ್ಭಯ, ಸತ್ಯನಿಷ್ಠೆ, ಅಪಹರಿಸದಿರುವುದು, ಬ್ರಹ್ಮಚರ್ಯ, ಧೈರ್ಯ,

ಕ್ಷಮಾಗುಣ-ಈ ಶ್ರೇಷ್ಠಗುಣಗಳನ್ನು ಅಮೃತಪ್ರಾಯವೆಂದು ಭಾವಿಸಿ ಸ್ವಭಾವಗತ ಮಾಡಿಕೊಳ್ಳಬೇಕು".

ಒಂದು ಸಂದರ್ಭದಲ್ಲಿ ಗಾಂಧಿಯವರು ಮಾಡಿದ ಉದ್ಗಾರ ಇದು: "ನಾನು ಕಾರ್ಯಗತನಾಗಲು ಸಂಕಲ್ಪಿಸಿ ಮಾರ್ಗದರ್ಶನಕ್ಕಾಗಿ ಮೊದಲಿಗೆ ಲೋಕಮಾನ್ಯ ತಿಲಕರ ಬಳಿಗೆ ಹೋದೆ. ಅವರಾದರೊ ನನ್ನ ದೃಷ್ಟಿಗೆ ಹಿಮಾಲಯದಷ್ಟು ಎತ್ತರದ ವ್ಯಕ್ತಿಯಾಗಿ ಕಂಡರು. ನಾನು ಅಷ್ಟು ಎತ್ತರಕ್ಕೆ ಏರಲಾರೆನೆನಿಸಿತು. ಅನಂತರ ನಾನು ಹೊದುದು ಗೋಪಾಲಕೃಷ್ಣ ಗೋಖಲೆಯವರಲ್ಲಿಗೆ. ಅವರು ನನಗೆ ಸಾಗರದಷ್ಟು ಗಂಭೀರವಾಗಿ ಕಂಡರು. ಅಷ್ಟು ಗಾಢತೆ ಇರುವ ವ್ಯಕ್ತಿಯೊಡನೆ ನಾನು ಬಯಸಿದಷ್ಟು ಸಲಿಗೆ ಸಿಗಲಾರದೇನೋ ಎನಿಸಿತು. ಅದಾದ ಮೇಲೆ ನಾನು ಹೋದುದು ಮಹಾಮನಾ ಪಂ. ಮದನಮೋಹನ ಮಾಲವೀಯರಲ್ಲಿಗೆ. ಅವರು ನನಗೆ ಕಂಡದ್ದು ಪ್ರಶಾಂತವಾಗಿ ಹರಿಯುತ್ತಿರುವ ಗಂಗಾಧಾರೆಯಂತೆ. ಈಪವಿತ್ರ ಧಾರೆಯಲ್ಲಿ ನಾನು ಬಹುಶಃ ಸ್ನಾನ ಮಾಡಬಲ್ಲೆ ಎನಿಸಿತು."

ಎಲ್ಲರನ್ನೂ ಆಕರ್ಷಿಸಬಲ್ಲ ಮಾಲವೀಯರ ವ್ಯಕ್ತಿಗುಣವನ್ನು ಗಾಂಧಿಯವರ ಈ ಮಾತುಗಳು ಸುಂದರವಾಗಿ ಸಂಗ್ರಹಿಸಿವೆ. ಅಲೌಕಿಕ ವ್ಯಕ್ತಿಮತ್ತ್ವ, ರಾಷ್ಟ್ರೋತ್ಥಾನಕ್ಕೆ ಪ್ರೇರಕಶಕ್ತಿ, ಸಾಂಸ್ಕೃತಿಕ ನವಜಾಗೃತಿಯ ಪ್ರಚಾರ-ಪ್ರಸಾರ, ಹಿಂದುತ್ವಾನುಗುಣ ಜೀವನಶೈಲಿಯ ಪ್ರತ್ಯಕ್ಷೀಕರಣ, ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆ, ಪತ್ರಿಕೋದ್ಯಮದ ಉದಾತ್ತ ಆದರ್ಶದ ದರ್ಶನ - ಇಂತಹ ಬಹುಮುಖ ಸಾಧನೆಯ ಹಿನ್ನೆಲೆ ಇದ್ದರೂ ಎಂದೂ ಕುಸಿಯದ ಸ್ನೇಹಶೀಲ ಸ್ವಭಾವ-ಇದು ಮಾಲವೀಯರನ್ನು ಅಸಾಧಾರಣ ನಾಯಕನಾಗಿಸಿದ ಗುಣಸಮುಚ್ಚಯ.

ಮೇಲ್ನೋರಿಕೆಗೆ ವಿರುದ್ಧವೆನಿಸುವ ಪ್ರವೃತ್ತಿಗಳು ಅವರಲ್ಲಿ ಕಂಡರೂ ಅದೆಲ್ಲ ಅವರ ಸ್ವಭಾವವೈಶಾಲ್ಯದ ಪ್ರಕಾಶನವಷ್ಟೆ ಆಗಿದ್ದಿತು. ಸದಾ ಶುದ್ಧ ಧವಳ ಉಡುಪು. ಹಣೆಯಲ್ಲಿ ತಿಲಕ. ಎಂದೂ ತಪ್ಪಿಸದ ಸಂಧ್ಯಾವಂದನೆ ನಿಷ್ಠೆ. ಇಂಗ್ಲೆಂಡಿಗೆದುಂಡುಮೇಜು ಪರಿಷತ್ತಿಗೆ ಹೋದಾಗಲೂ ಅವರು ಗಂಗಾಜಲವನ್ನು ಜೊತೆಯಲ್ಲಿ ಒಯ್ದಿದ್ದರು. ಹೀಗೆ 'ಸಾಂಪ್ರದಾಯಿಕ'ರಾಗಿದ್ದ ಮಾಲವೀಯರೇ ತಥಾಕಥಿತ 'ಅಸ್ಪೃಶ್ಯ'ರಿಗೆ ದೀಕ್ಷೆ ನೀಡಬೇಕೆಂದೂ ಮಂದಿರಗಳಲ್ಲಿ ಅವರಿಗೆ ಪ್ರವೇಶಾವಕಾಶವಿರಬೇಕೆಂದೂ ವರ್ಷಗಳುದ್ದಕ್ಕೂ ಅಭಿಯಾನ ನಡೆಸಿದರು. ೧೯೩೬ರಲ್ಲಿ ಹರಿದ್ವಾರದಲ್ಲಿ ನಡೆದ ಅರ್ಧಕುಂಭ ಸಂದರ್ಭದಲ್ಲಿ ಸಾವಿರಾರು ಜನ ಹರಿಜನರಿಗೆ ಅವರೇ ನಿಂತು ಪವಿತ್ರಸ್ನಾನ ಮಾಡಿಸಿದರು.

"ಗಾಂಧಿಯವರನ್ನು 'ಮಹಾತ್ಮ' ರೆಂದು ಕರೆಯಬಹುದಾದರೆ ಪಂಡಿತ ಮದನಮೋಹನ ಮಾಲವೀಯರನ್ನು 'ಧರ್ಮಾತ್ಮ' ರೆಂದು ಕರೆಯುವುದು ಉಚಿತವಾಗುತ್ತದೆ" - ಎಂದಿದ್ದರು, ಸಿ.ವೈ. ಚಿಂತಾಮಣಿ.

ಅಸಮತೋಲಿತ ಇತಿಹಾಸಲೇಖನಪ್ರಾಚುರ್ಯದ ಕಾರಣದಿಂದಾಗಿ ಭಾರತದ ಸ್ವಾತಂತ್ರ್ಯ ಹೋರಾಟವೆಂದರೆ ಗಾಂಧಿಯವರ ಅಭಿಯಾನ ಎಂಬ ಕಲ್ಪನೆ ಅಧಿಕಸಂಖ್ಯೆಯ ಭಾರತೀಯರ ಮನಸ್ಸಿನಲ್ಲಿ ಅಚ್ಚೊತ್ತಿದೆ. ವಾಸ್ತವವೆಂದರೆ ಭಾರತದ ಸ್ವಾತಂತ್ರ್ಯ ಸಂಘರ್ಷಕ್ಕೆ ಇನ್ನೂರು ವರ್ಷಗಳ ದೀರ್ಘ ಇತಿಹಾಸವಿದೆ. ಈ ಇನ್ನೂರು ವರ್ಷಗಳಲ್ಲಿ ಗಾಂಧಿಯವರು ಭಾರತದ ರಾಜಕಾರಣದಲ್ಲಿ ಸಕ್ರಿಯರಾಗಿದ್ದ ಕಾಲಾವಧಿ

ಮೂವತ್ತು ವರ್ಷಕ್ಕೂ ಕಡಮೆಯದು. ಸ್ವಾತಂತ್ರ್ಯ ಸಂಘರ್ಷ ಆರಂಭವಾದದ್ದು ಹದಿನೆಂಟನೇ ಶತಮಾನದ ಅಂತ್ಯದಲ್ಲಿ, ಭಾರತದ ಸ್ವಾಭಿಮಾನಜಾಗೃತಿಗಾಗಿ ರಾಜಾ ರಾಮಮೋಹನರಾಯ್ ಅವರು ನಡೆಸಿದ ಸ್ವಧರ್ಮಪ್ರಸಾರ ಅಂದೋಲನದಿಂದಲೇ. ಅದಕ್ಕೂ ಹಿಂದೆಯೂ ೧೭೬೦ರ ದಶಕದಲ್ಲಿ ಪೂರ್ವಭಾರತದಲ್ಲಿ ಚರಿತ್ರಾರ್ಹ 'ಸಂನ್ಯಾಸಿ ಆಂದೋಲನ' ನಡೆದಿತ್ತು. ವಾರನ್ ಹೇಸ್ಟಿಂಗ್ಸ್‌ನ ದುರಾಡಳಿತದ ವಿರುದ್ಧ ಹಲವಾರು ಸಂಘರ್ಷಗಳು ನಡೆದಿದ್ದವು. ಕಾಶಿಯ ರಾಜ ಚೈತನ್ಯಸಿಂಹನ ಬಂಡಾಯ, ೧೮ನೇ ಶತಮಾನದ ಅಂತ್ಯದಲ್ಲಿ ಮಲಬಾರಿನಲ್ಲಿ ಕೇರಳವರ್ಮನ ಬಂಡಾಯ, ತಿರುವಾಂಕೂರಿನಲ್ಲಿ ವೇಲುತಂಬಿಯ ಬಂಡಾಯ, ಮಲಪ್ರಭಾ ದಡದ ಯುದ್ಧದಲ್ಲಿ ವೀರಗತಿ ಪಡೆದ ಧೋಂಡಿಯಾ ವಾಘನ ಸಂಘರ್ಷ, ೧೯ನೇ ಶತಮಾನದ ಆರಂಭದ ದಶಕಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಅತುಲ್ಯಶೌರ್ಯೋದ್ಯಮ, ಇವೆಲ್ಲ ನಡೆದದ್ದು ೧೮೫೭ಕ್ಕಿಂತ ಬಹಳ ಹಿಂದೆಯೇ. ೧೮೫೭ರಿಂದ ಆಚೆಗಂತೂ ತೊಂಭತ್ತು ವರ್ಷ ಕಾಲ ಆಂಗ್ಲಾಧಿಕಾರವಿರೋಧಿ ಸಂಘರ್ಷಗಳು ಸತತವಾಗಿ ಮುಂದುವರಿದವು. ೧೯೪೩-೪೫ರ ಸುಭಾಷ್‌ಚಂದ್ರಬೋಸರ ಐ.ಎನ್.ಎ. ಅಭಿಯಾನದವರೆಗೆ. ಎರಡು-ಮೂರು ದಶಕಗಳ ಕಾಲ ರಾಜಕೀಯ ನಾಯಕತ್ವ ವಹಿಸಿ ಒಂದು ಇಡೀ ಪೀಳಿಗೆಯನ್ನು ಗಾಂಧಿಯವರು ಪ್ರಭಾವಗೊಳಿಸಿದರೆಂಬುದು ನಿಸ್ಸಂಶಯ. ಆದರೆ ಸ್ವಾತಂತ್ರ್ಯಂದೋಲನವನ್ನು ಸಜೀವವಾಗಿ ಇರಿಸಿದವರು ಅಸಂಖ್ಯ ಜ್ಞಾತ ಹಾಗೂ ಅಜ್ಞಾತ ಸಾಧಕರೆಂಬುದೂ ಅಷ್ಟೇ ವಾಸ್ತವ. ಅವರಲ್ಲನೇಕರು ಪ್ರಾಣಾರ್ಪಣೆಯಂತಹ ಆತ್ಯಂತಿಕ ತ್ಯಾಗವನ್ನೂ ಮಾಡಿದರು. ಗಾಂಧಿಯವರು ಅನುಸರಿಸಿದ ವೈಧಾನಿಕ ಪಂಥವನ್ನಷ್ಟೆ ಗಮನಿಸಿದರೂ ಬಿಪಿನಚಂದ್ರಪಾಲ್, ಸುರೇಂದ್ರನಾಥ ಬ್ಯಾನರ್ಜಿ, ರವೀಂದ್ರನಾಥ ಠಕೂರ್, ಸಿ.ಶಂಕರನ್ ನಾಯರ್, ಲಾಲಾ ಲಜಪತ್‌ರಾಯ್, ಗೋಪಾಲಕೃಷ್ಣ ಗೋಖಲೆ, ವಿ.ಎಸ್.ಶ್ರೀನಿವಾಸಶಾಸ್ತ್ರಿ, ಆ್ಯನಿಬೆಸೆಂಟ್, ಚಿತ್ತರಂಜನದಾಸ್ ಮೊದಲಾದವರ ಕೊಡುಗೆ ಗಾಂಧಿಯವರದಕ್ಕಿಂತ ಕಡಮೆಯದೇನಲ್ಲ. ಗಾಂಧಿಯವರ ಸಮಕಾಲೀನ ಸ್ವಾತಂತ್ರ್ಯೋದ್ಯಮಿಗಳ ಈ ಸರಣಿಯ ಅಗ್ರಗಣ್ಯರಲ್ಲೊಬ್ಬರು ಪಂಡಿತ್ ಮದನಮೋಹನ ಮಾಲವೀಯ (೧೮೬೧-೧೯೪೬). ಈ ವರ್ಷ (೨೦೧೧) ಮಾಲವೀಯರ ನೂರೈವತ್ತನೇ ಜನ್ಮದಿನೋತ್ಸವದ ವರ್ಷ.

ಅಖಿಲ ಭಾರತ ಕಾಂಗ್ರೆಸ್‌ನ ಸ್ಥಾಪನೆಯಾದದ್ದು ೧೮೮೫ರಲ್ಲಿ. ಮರುವರ್ಷದಿಂದಲೇ ಎಂದರೆ ೧೮೮೬ ರಿಂದಲೇ ಮಾಲವೀಯರು ಕಾಂಗ್ರೆಸ್‌ನ ಅಗ್ರಣಿಗಳಲ್ಲಿ ಒಬ್ಬರಾದರು. ಹಿರಿಯರಾದ ದಾದಾಭಾಯಿ ನವರೋಜಿಯವರ ಆಶೀರ್ವಾದಕ್ಕೆ ಪಾತ್ರರಾಗಿದ್ದ ಆ್ಯನಿಬೆಸೆಂಟ್ ಮತ್ತು ತಿಲಕರೊಡನೆ ಹೋಮ್‌ರೂಲ್ ಲೀಗ್ ಚಳವಳಿಯ ನೇತೃತ್ವ ವಹಿಸಿದರು. ೧೯೦೯, ೧೯೧೮ರಲ್ಲಿಯೂ ಅನಂತರ ೧೯೩೨ ಮತ್ತು ೧೯೩೩ರಲ್ಲಿಯೂ ಅವರು ಕಾಂಗ್ರೆಸಿನ ಅಧ್ಯಕ್ಷರಾದರು.

೨೦ನೇ ಶತಮಾನದ ಪೂರ್ವಾರ್ಧದಲ್ಲಿ ಮಾಲವೀಯರಿಂದ ಪೋಷಣೆ ಪಡೆಯದ ಆಂದೋಲನ ಯಾವುದೂ ಇರಲಿಲ್ಲ. ಸನಾತನಧರ್ಮಪ್ರಚಾರ, ಗೋಸೇವೆ, ಅಸ್ಪೃಶ್ಯೋದ್ಧಾರ, ಸ್ವದೇಶಿ, ಹಿಂದೀಭಾಷೆಯ ಪ್ರಸಾರ, ಸಂಸ್ಕೃತಭಾಷೆಯ ಮತ್ತು ಸಾಹಿತ್ಯದ ಹಾಗೂ ಶಾಸ್ತ್ರಾಧ್ಯಯನದ ಪ್ರವರ್ತನೆ ಈ ನಾಲ್ಕಾರು ಕಾರ್ಯಕ್ಷೇತ್ರಗಳಲ್ಲಿ

ಮಾಲವೀಯರು ಸತತವಾಗಿ ಶ್ರಮಿಸಿದರು. ಈ ಎಲ್ಲ ಪ್ರಯಾಸಗಳ ತಳದಲ್ಲಿದ್ದುದು ಅವರ ಪ್ರಖರ ರಾಷ್ಟ್ರಪ್ರೇಮ ಎಂದು ಹೇಳುವ ಅಗತ್ಯವಿಲ್ಲ.

ಕಾಂಗ್ರೆಸ್ ಸ್ಥಾಪನೆಗೆ ಅರ್ಧದಶಕ ಹಿಂದಿನಿಂದಲೇ (೧೮೮೧) ಮಾಲವೀಯರು ಸ್ವದೇಶಿ ವ್ರತಾವಲಂಬಿಯಾಗಿದ್ದರು. ಹೀಗೆ ಗಾಂಧಿಯವರಿಗೂ ಹಿಂದಿನ ಕಾಲದಿಂದ ನೆಹರು–ಬೋಸ್ ಕಾಲದವರೆಗೆ ದೇಶನಾಯಕಶ್ರೇಷ್ಠರಾಗಿದ್ದವರು ಮಾಲವೀಯರು.

ಮಾಲವೀಯರ ಕಾರ್ಯವೈವಿಧ್ಯವನ್ನು ಶಕ್ಯವಾಗಿಸಿದ್ದ ಸೂತ್ರವೆಂದರೆ ದೇಶಭಕ್ತಿ, ಈಶಭಕ್ತಿ. ಎರಡೂ ಅವರ ದೃಷ್ಟಿಯಲ್ಲಿ ಅಭಿನ್ನವಾಗಿತ್ತು. ಸನಾತನಧರ್ಮಕ್ಕೆ ವ್ಯಾವಹಾರಿಕ ಅನ್ವಯದ ರೂಪವನ್ನು ಕೊಟ್ಟದ್ದು ಅವರ ಅನನ್ಯತೆ. ಅವರ ಚಿಂತನೆಯ ಅಡಿಪಾಯವಾಗಿದ್ದುದು ಅಂಧಶ್ರದ್ಧೆಯಲ್ಲ, ಅನ್ಯಮತದ್ವೇಷ ಮೊದಲೇ ಅಲ್ಲ. ಸರ್ವಸಮುದಾಯ ಪ್ರೇಮವು ಅವರ ಮನೋರಚನೆಯಲ್ಲಿ ಹಾಸುಹೊಕ್ಕಾಗಿದ್ದಿತು.

ಅಭ್ಯುದಯ–ನಿಃಶ್ರೇಯಸ ಸಿದ್ಧಿಯೇ ಧರ್ಮ ಎಂಬುದು ಭಾರತದ ಪ್ರಾಚೀನ ನಿರ್ವಚನ. ಅದಕ್ಕೆ ಸಂವಾದಿಯೆಂಬಂತೆ ಮಾಲವೀಯರು ಕಾಶಿ ಹಿಂದೂ ವಿಶ್ವವಿದ್ಯಾಲಯದ ಪ್ರಣಾಳಿಯಲ್ಲಿ ಸಂಸ್ಕೃತ ಮತ್ತು ಆಧುನಿಕ ಜ್ಞಾನಶಾಖೆಗಳನ್ನೂ ಮಾನವಿಕ–ವೈಜ್ಞಾನಿಕಗಳನ್ನೂ ಪ್ರಾಚ್ಯ–ಪಾಶ್ಚಾತ್ಯಗಳನ್ನೂ ಸಮನ್ವಿತಗೊಳಿಸಿದರು. ವಿಶ್ವವಿದ್ಯಾಲಯಸ್ನಾತಕರಿಂದ ಅವರು ನೈತಿಕ ಸಮುನ್ನತಿ ಮತ್ತು ದೇಶಭಕ್ತಿಗಳನ್ನೂ ಇನ್ನೊಂದೆಡೆ ಭೌತಿಕ–ಆರ್ಥಿಕ ಅಭ್ಯುದಯಕ್ಕೆ ಯೋಗದಾನವನ್ನೂ ನಿರೀಕ್ಷಿಸಿದರು. ಮಾಲವೀಯರ ಮಟ್ಟಿಗೆ ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಪ್ರಗತಿಯು ಸ್ವಾತಂತ್ರ್ಯ ಸಂಗ್ರಾಮದ ಒಂದು ಮುಖವೇ ಆಗಿದ್ದಿತು.

ಮಾಲವೀಯರದು ವಿಶಾಲ ದೃಕ್‌ಪಥವಾಗಿದ್ದಿತು. ಹೀಗೆ ಅವರು ಏಕಕಾಲದಲ್ಲಿ ಗಾಂಧೀ ಪಂಥಾನುಯಾಯಿಗಳಿಗೂ ಭೂಗತ ಕ್ರಾಂತಿಕಾರಿ ಕಾರ್ಯಕರ್ತರಿಗೂ ಆದರಣೀಯರಾಗಿದ್ದರು.

ತಮ್ಮ ಪ್ರತಿಭೆಯಷ್ಟೂ ದೇಶಹಿತದ ಸಾಧನೆಗೆ ವಿನಿಯೋಗವಾಗಬೇಕೆಂಬುದು ಅವರ ಮೂಲ ಜೀವನಸೂತ್ರವಾಗಿದ್ದಿತು. ರೌಲೆಟ್ ಮಸೂದೆಯ ವಿರುದ್ಧವೂ ಇನ್‌ಡೆಮ್ನಿಟಿ ಮಸೂದೆಯ ವಿರುದ್ಧವೂ ಅವರು ಮಾಡಿದ ಭಾಷಣಗಳು ಅವರ ಪ್ರತಿಭೆಯ, ಸಮಾಜತಾದಾತ್ಮ್ಯದ, ವಿಷಯ ಪರಿಜ್ಞಾನದ ಹಾಗೂ ನಿರ್ಭೀತಿಯ ದ್ಯೋತಕಗಳು.

ಆಂಗ್ಲಶಾಸನಕ್ಕೆ ಬಗೆಬಗೆಯಾಗಿ ವಿರೋಧವನ್ನು ವ್ಯಕ್ತಪಡಿಸುತ್ತಿರುವುದಷ್ಟೆ ಅನೇಕರ ದೃಷ್ಟಿಯಲ್ಲಿ ದೇಶಭಕ್ತಿ ಎನಿಸಿತ್ತು. ಆದರೆ ಮಾಲವೀಯರ ಕಲ್ಪನೆಯ ದೇಶಭಕ್ತಿಯು ರಚನಾತ್ಮಕ ಆಯಾಮವನ್ನೂ ಒಳಗೊಂಡಿತ್ತು. ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳಿಂದಲೇ ಮಾಲವೀಯರು ಭಾರತದ ವೈಜ್ಞಾನಿಕ–ತಾಂತ್ರಿಕ ಪ್ರಗತಿಯ ಬಗೆಗೆ ಗಂಭೀರ ಚಿಂತನೆ ನಡೆಸಿದ್ದರು.

೧೯೧೬ರಲ್ಲಿ ಆಂಗ್ಲಪ್ರಭುತ್ವವು ಸರ್ ಟಿ.ಎಚ್.ಹಾಲೆಂಡ್ ಅವರ ಅಧ್ಯಕ್ಷತೆಯಲ್ಲಿ 'Indian Industrial Commission' ಆಯೋಗವನ್ನು ರಚಿಸಿತು. ಆಲ್‌ಫ್ರೆಡ್ ಚಾಟರ್‌ಸನ್, ಸಿ.ಇ.ಲೋ, ಪಂಡಿತ ಮದನಮೋಹನ ಮಾಲವೀಯ, ಸರ್ ರಾಜೇಂದ್ರನಾಥ ಮುಖರ್ಜಿ, ಸರ್ ಹಾರೇಸ್ ಕರ್ಜನ್ ಪ್ಲಂಕೆಟ್,

ಸರ್ ಫ್ರಾನ್ಸಿಸ್ ಹ್ಯೂಂ ಸ್ಟುವರ್ಟ್, ಸರ್ ದೊರಾಬ್ಜೀ ಜೆಮ್‌ಶೆಟ್ ಜೀ ಟಾಟಾ ಇವರನ್ನು ಆ ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿತ್ತು.

ಆ ಆಯೋಗದ ವರದಿಗೆ ಸಂಬಂಧಿಸಿ ಮಾಲವೀಯರು ನೀಡಿದ ಸುದೀರ್ಘವಾದ ಭಿನ್ನಾಭಿಪ್ರಾಯ ನಿವೇದನೆಯಲ್ಲಿ ಭಾರತದ ಇತಿಹಾಸವನ್ನು ಕುರಿತೂ ಭಾರತದ ಸ್ವಾವಲಂಬನೆಯ ಮೇಲೆ ಆಂಗ್ಲಪ್ರಭುತ್ವದ ದುಷ್ಪರಿಣಾಮವನ್ನು ಕುರಿತೂ ಭಾರತದ ಆರ್ಥಿಕ-ತಾಂತ್ರಿಕ ಅವನತಿಯ ನಿಜಕಾರಣಗಳನ್ನು ಕುರಿತೂ ಮಾಲವೀಯರಿಗೆ ಎಷ್ಟು ಗಹನವಾದ ಪರಿಜ್ಞಾನ ಇದ್ದಿತೆಂಬುದು ಪ್ರತಿಫಲಿತವಾಗಿದೆ. ಭಾರತವು ಆಂಗ್ಲ ಪ್ರಚಾರಕರು ಕಲ್ಪಿಸಿಕೊಂಡುಬಂದಂತೆ ಕೃಷಿ ಪ್ರಧಾನ ದೇಶ ಮಾತ್ರವೇ ಅಗಿರಲಿಲ್ಲವೆಂದೂ ಅಲೆಗ್ಸಾಂಡರನ ಆಗಮನಕ್ಕೆ ಹಿಂದಿನಿಂದ ಮೊಗಲ ಆಳ್ವಿಕೆಯ ಅವನತಿಯ ಎಂದರೆ ಹದಿನೆಂಟನೇ ಶತಮಾನದವರೆಗು ಭಾರತವು ಜಗತ್ತಿನಲ್ಲಿಯೇ ಸಮೃದ್ಧ ದೇಶವಾಗಿದ್ದಿತೆಂದೂ ಮಾಲವೀಯರು ಹೇರಳ ಪುರಾವೆಗಳನ್ನು ಕ್ರೋಢೀಕರಿಸಿದ್ದಾರೆ. ಕಂಪನಿ ಆಳ್ವಿಕೆಯ ಕಾಲದಲ್ಲಿ ಭಾರತದ ಉದ್ಯಮಗಳನ್ನು ಹೇಗೆ ಬುದ್ಧಿಪೂರ್ವಕವಾಗಿ ನಾಶಗೊಳಿಸಲಾಯಿತು ಎಂಬುದನ್ನೂ ಹತ್ತೊಂಭತ್ತು-ಇಪ್ಪತ್ತನೇ ಶತಮಾನದ ಭಾರತದ ಆರ್ಥಿಕ ಸ್ಥಿತಿಯನ್ನೂ ಉದ್ಯಮ ತಂತ್ರಜ್ಞಾನ ಶಿಕ್ಷಣಾದಿ ಕ್ಷೇತ್ರಗಳಲ್ಲಿ ಭಾರತದ ಪ್ರಗತಿಯ ದೃಷ್ಟಿಯಿಂದ ಆಗಬೇಕಾದ ಸುಧಾರಣೆಗಳನ್ನೂ ಕುರಿತು ಮಾಲವೀಯರು ತಮ್ಮ ವಾಙ್ಮೂಲದಲ್ಲಿ ವಿವರವಾಗಿ ಬರೆದಿದ್ದಾರೆ.

ಮಾಲವೀಯರ ಒಂದೊಂದು ಕಾರ್ಯಾಚರಣೆಯಲ್ಲಿಯೂ ರಚನಾತ್ಮಕ ನಿಲುವನ್ನು ಕಾಣಬಹುದು. ಅನೇಕ ವಿಷಯಗಳಲ್ಲಿ ಕಾಂಗ್ರೆಸ್‌ನ ಅಧಿಕೃತ ಧೋರಣೆಯೊಂದಿಗೆ ಪೂರ್ಣ ಸಹಮತವಿರದಿದ್ದರೂ ಜೀವನದುದ್ದಕ್ಕೂ ಕಾಂಗ್ರೆಸಿನ ಬಗೆಗೆ ಅವರ ನಿಷ್ಠೆ ಅಸ್ಖಲಿತವಾಗಿತ್ತು. ಐದಾರು ದಶಕಗಳ ಕಾಲದಲ್ಲಿ ಎಲ್ಲ ಕಾಂಗ್ರೆಸ್ ಅಧಿವೇಶನಗಳಲ್ಲಿ ತಪ್ಪದೆ ಭಾಗವಹಿಸಿದರು. ಭಿನ್ನಾಭಿಪ್ರಾಯಗಳಿದ್ದರೂ ಅವರು ಎಂದೂ ಕಾಂಗ್ರೆಸಿನಿಂದ ದೂರ ಸರಿಯಲಿಲ್ಲ; ಅಂತಹ ಚಿಂತನೆಯೇ ಅವರಿಗೆ ಅಕಲ್ಪನೀಯವಾಗಿತ್ತು. ಲಾಲ್-ಬಾಲ್-ಪಾಲ್ ತ್ರಯರ ಮತ್ತು ಅವರ ಓರಗೆಯ ಕಾರ್ಯಕರ್ತರೊಡನೆ ಗಾಢ ಮೈತ್ರಿ ಇದ್ದರೂ ಮಾಲವೀಯರು ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ, ಫಿರೋಜ್‌ಷಹಾ ಮೆಹತಾ ಮೊದಲಾದ ಹಳಬರ ಬಣದೊಡನೆ ತಮ್ಮನ್ನು ಗುರುತಿಸಿಕೊಂಡರು. ಹೀಗಿದ್ದೂ ಮಾಲವೀಯರು ತಮ್ಮ ಸ್ವತಂತ್ರ ಚಿಂತನೆಯನ್ನು ಯಾರಿಗೂ ಒತ್ತೆಯಿಟ್ಟವರಲ್ಲ. ಉದಾಹರಣೆಗೆ: ಆಂಗ್ಲಾಧೀನ ಶಾಸನ ಸಭೆಗಳನ್ನು ಕಾಂಗ್ರೆಸ್ (ಅಸಹಕಾರ ಆಂದೋಲನದ ಭಾಗವಾಗಿ) ಬಹಿಷ್ಕರಿಸಿದುದರ ಬಗೆಗೆ ಮಾಲವೀಯರು ಅಸಮ್ಮತಿಯನ್ನು ತಳೆದರು. ಅವರ ನಿಲುವು ಸದಾ ವಸ್ತುನಿಷ್ಠವಾಗಿಯೂ ರಚನಾತ್ಮಕವಾಗಿಯೂ ಇರುತ್ತಿತ್ತು. 'ಕೌನ್ಸಿಲ್ ಬಾಯ್ಕಾಟ್' ನೀತಿಯನ್ನು ತೀಕ್ಷ್ಣವಾಗಿ ವಿರೋಧಿಸಿ ಚಿತ್ತರಂಜನ್‌ದಾಸ್, ಮೋತಿಲಾಲ್ ನೆಹರು ಮೊದಲಾದವರು ಪ್ರವರ್ತಿಸಿದ 'ಸ್ವರಾಜ್‌ಪಕ್ಷ'ಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರಾದರೂ ಆ ಪಕ್ಷದ ವ್ಯವಸ್ಥಾ ಭಂಜಕ ಕಾರ್ಯಾವಳಿಯನ್ನು ವಿರೋಧಿಸಿದರು. ಗಾಂಧೀಯವರ ಹಿಂದೂ-ಮುಸ್ಲಿಂ ಐಕ್ಯ ಪ್ರಯತ್ನಗಳನ್ನು ಅವರು ಬೆಂಬಲಿಸಿದರು; ಆರಂಭ ಹಂತದಲ್ಲಿ ಖಿಲಾಫತ್ ಆಂದೋಲನಕ್ಕೂ

ಅವರು ಆಕ್ಷೇಪಿಸಲಿಲ್ಲ. ಆದರೆ ಭಯಾನಕ ಮೋಪ್ಲಾಕಾಂಡದ ಅನುಭವದ ತರುವಾಯ ಅವರು ಭ್ರಮನಿರಸನಗೊಂಡರು, ಹಿಂದೂ ಸಮಾಜದ ಸಂಘಟನೆಯ ಮುಖ್ಯತೆಯನ್ನು ಹಿಂದಿಗಿಂತ ಹೆಚ್ಚು ಪ್ರಖರವಾಗಿ ಪ್ರತಿಪಾದಿಸತೊಡಗಿದರು. ಸಹಜವಾಗಿಯೇ ಹಿಂದೂ ಮಹಾಸಭೆಯ ಕಾರ್ಯಾವಳಿಯ ಮುಂಚೂಣಿಯ ನಾಯಕರಾದರು. ಆ ಸಂಘಟನೆಯ ಸ್ಥಾಪಕರಲ್ಲಿ ಅವರು ಪ್ರಮುಖರಾಗಿದ್ದುದು ಸುವಿದಿತ.

"ಪ್ರಾಚೀನ ಭಾರತದ ಋಷಿಗಳು ಯಾವ ಜೀವನಧ್ಯೇಯವನ್ನು ಇರಿಸಿಕೊಂಡಿದ್ದರೋ ಅದಕ್ಕೆ ಆಧುನಿಕ ಕಾಲದಲ್ಲಿ ಒಂದು ಮಾದರಿಯೆಂದು ನಾವು ತೋರಿಸಬಹುದಾದವರು ಮಾಲವೀಯರು" ಎಂದರು ದೀನಬಂಧು ಸಿ.ಎಫ್.ಆ್ಯಂಡ್ರೂಸ್.

ಮಾಲವೀಯರು ಇಡೀ ದೇಶದಲ್ಲಿಯೇ ಅತ್ಯಂತ ಪ್ರಭಾವೀ ವಾಗ್ಮಿಗಳಾಗಿದ್ದರು; ಜೊತೆಗೆ ಅವರ ಪ್ರಾಮಾಣಿಕತೆ-ಸತ್ಯನಿಷ್ಠೆಗಳಂತೂ ಜನಜನಿತವಾಗಿದ್ದವು. ಈ ಎರಡೂ ಕಾರಣಗಳಿಂದ ಅವರ ಭಾಷಣ-ಮಾತು-ಬರಹಗಳಿಗೆ ದೇಶದಾದ್ಯಂತ ಸಹಜ ಸ್ಪಂದನ ದೊರೆಯುತ್ತಿತ್ತು. ಅವರನ್ನು ಗೌರವಿಸದ ವ್ಯಕ್ತಿ ಯಾರೂ ಇರಲಿಲ್ಲ.

ಅವರ ನಿಃಸ್ಪೃಹತೆ ಮತ್ತು ರಚನಾತ್ಮಕ ಧೋರಣೆಗಳಿಂದಾಗಿ ವರ್ಷಗಳುದ್ದಕ್ಕೂ ಅವರು ಗಾಂಧಿಯವರ ಮಾರ್ಗವನ್ನು ಸುಗಮಗೊಳಿಸಿದರು. ಇಲ್ಲಿ ಸ್ಮರಿಸಬೇಕಾದ ಸಂಗತಿಯೆಂದರೆ ಗಾಂಧಿಯವರು ಭಾರತದ ರಾಜಕಾರಣವನ್ನು ಪ್ರವೇಶಿಸುವುದಕ್ಕೆ ೨೫-೩೦ ವರ್ಷಗಳ ಹಿಂದಿನಿಂದಲೇ ಮಾಲವೀಯರು ಸ್ವದೇಶೀ ದೃಕ್‌ಪಥವನ್ನೂ ಗ್ರಾಮೋದ್ಯೋಗಗಳನ್ನೂ ಪ್ರವರ್ತನೆ ಮಾಡುತ್ತಾ ಬಂದಿದ್ದರು; ಹೆಚ್ಚು ಜನರಿಗೆ ಉದ್ಯೋಗಗಳನ್ನು ಕಲ್ಪಿಸುವಂತಹ ಕೈಗಾರಿಕೆ-ಉದ್ಯಮಗಳ ಅವಶ್ಯಕತೆಯನ್ನು ಒತ್ತಿಹೇಳುತ್ತಿದ್ದರು. ಭಾರತದೊಳಗಿನ ಉತ್ಪನ್ನಗಳ ಮಾರುಕಟ್ಟೆಗೆ ಭಂಗತಾರದ ಮತ್ತು ನೆರವಾಗುವ ದಿಶೆಯಲ್ಲಿ ಸರ್ಕಾರದ ತೆರಿಗೆ ನೀತಿ ಇರಬೇಕೆಂಬ ಅವರ ಪ್ರಭಾವೀ ಮಂಡನೆ ಗಾಂಧಿಯವರ ಅತಿಶಯ ಮೆಚ್ಚಿಕೆಯನ್ನು ಪಡೆದುಕೊಂಡಿತ್ತು.

ಅವರ ವಿಷಯಪರಿಜ್ಞಾನ, ವಾದಕೌಶಲ ಮತ್ತು ಜನಪರ ದೃಷ್ಟಿಯಿಂದಾಗಿ ಆಗಿನ ಸಾಂಸದರಲ್ಲಿ ಅವರು ಅಗ್ರಗಣಿಗಳೆನಿಸಿದ್ದರು. ಅಲ್ಲದೆ ಅವರ ವೈಧಾನಿಕ ಬುದ್ಧಿವೃತ್ತಿಯಿಂದಾಗಿ ಅವರು ಬ್ರಿಟಿಷ್ ಸರ್ಕಾರದ ವರಿಷ್ಠರ ಪ್ರಶಂಸೆಗೂ ಪಾತ್ರರಾಗಿದ್ದರು. ಭಾರತದ ಆಯವ್ಯಯಗಳ ಪರಿಶೀಲನೆಗೆ ಸಂಬಂಧಿಸಿದಂತೆ ಇಂಗ್ಲೆಂಡಿನ ಸಂಸತ್ತಿನ ನಿಯಮಾವಳಿಗಳಲ್ಲಿ ಕೆಲವು ಮುಖ್ಯ ಬದಲಾವಣೆಗಳ ಅಗತ್ಯವಿದೆಯೆಂದು ೧೮೮೯ರಲ್ಲಿಯೇ ಅವರು ಪ್ರತಿಪಾದಿಸಿದ್ದರು. ಭಾರತದ ಕೇಂದ್ರ ಶಾಸನಸಭೆಯ ನಡಾವಳಿಗಳು ಹೆಚ್ಚು ಸಮರ್ಥವಾಗುವಂತೆ ಸೂಚನಾವಳಿಗಳನ್ನು ಅವರು ೧೮೯೪ರಿಂದಲೇ ಮಂಡಿಸಿದ್ದರು.

ಭಾರತದ ಹಣಕಾಸು ವಿನಿಯೋಗ ಕುರಿತು ೧೮೯೭ರಲ್ಲಿ ವೆಲ್‌ಬೀ ಆಯೋಗವನ್ನು ಉದ್ದೇಶಿಸಿ ಅವರು ಮಾಡಿದ ಭಾಷಣ ವಿದ್ವತ್‌ಪೂರ್ಣವೂ ಪ್ರೌಢಮಟ್ಟದ್ದೂ ಆಗಿತ್ತು. ವ್ಯಾಪಕವಾದ ಗಮನ ಸೆಳೆದ ಅವರ ಇನ್ನೊಂದು ಭಾಷಣ ಇಂಗ್ಲೆಂಡಿನ ಸಂಸತ್ತಿನಲ್ಲಿಯೂ ಭಾರತದ ಕೇಂದ್ರ ಶಾಸನಸಭೆಯಲ್ಲಿಯೂ ಭಾರತೀಯರ ಪ್ರಾತಿನಿಧ್ಯವನ್ನು ಕುರಿತದ್ದು(೧೯೦೪). ನಿಃಶುಲ್ಕ ಪ್ರಾಥಮಿಕ ಶಿಕ್ಷಣ,

ಕೃಷಿಪೋಷಕ ಶಿಕ್ಷಣ, ತಾಂತ್ರಿಕ-ಔದ್ಯಮಿಕ ಶಿಕ್ಷಣ ಮೊದಲಾದ ಅಂಶಗಳನ್ನು ಕುರಿತು ಅವರು ೧೯೧೦ರಲ್ಲಿ ಮಾಡಿದ ಭಾಷಣ ಪಥದರ್ಶಕವೆನಿಸಿತು. ಮಾಲವೀಯರ ಇಂತಹ ತಲಸ್ಪರ್ಶಿ ಚಿಂತನೆಗಳೇ ಉತ್ತರೋತ್ತರ ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಪರ್ಯವಸಾನಗೊಂಡವು. ಶಿಕ್ಷಣಕ್ರಮವು ಆಶ್ರಮ ರೀತಿಯ ಮೌಲ್ಯಗಳನ್ನು ಒಳಗೊಂಡಿದ್ದರೂ ತಂತ್ರಜ್ಞಾನ ವಾಣಿಜ್ಯಾದಿ ಪ್ರಗತಿಗೂ ಪೂರಕವಾಗಿರಬೇಕೆಂಬುದು ಅವರ ದೃಷ್ಟಿಯಾಗಿತ್ತು.

ದುಂಡುಮೇಜು ಪರಿಷತ್ತು ಮೊದಲಾದ ಪ್ರಮುಖ ಸಂದರ್ಭಗಳಲ್ಲೆಲ್ಲ ಗಾಂಧೀಯವರು ಮಾಲವೀಯರ ಸಲಹೆ-ಸೂಚನೆಗಳನ್ನು ತಪ್ಪದೆ ಕೋರುತ್ತಿದ್ದರು. ಗಾಂಧಿಯವರಿಗಿಂತ ಎಂಟು ವರ್ಷ ಹಿರಿಯರಾದ ಮಾಲವೀಯರು ಗಾಂಧಿಯವರನ್ನು ಕಿರಿಯ ಸೋದರನೆಂದು ಪರಿಗಣಿಸಿ ದಶಕಗಳುದ್ದಕ್ಕೂ ವಿಶೇಷ ವಾತ್ಸಲ್ಯ ತೋರುತ್ತಿದ್ದರು.

ಮಾಲವೀಯರು ಮೃದುಭಾಷಿಯಾದರೂ ಪ್ರಭಾವೀ ವ್ಯಕ್ತಿತ್ವ ಇದ್ದವರು. ಅವರದು ಸ್ಫುಟವಾದ ವಾಕ್ಕು. ಅವರ ಒಂದೊಂದು ಮಂಡನೆಯೂ ಕರಾರುವಾಕ್ಕಾದ ಮಾಹಿತಿಯ ಮತ್ತು ಸತರ್ಕ ವಿಶ್ಲೇಷಣೆಯ ಮೇಲೆ ಆಧಾರಗೊಂಡಿರುತ್ತಿತ್ತು. ಈ ಕಾರಣದಿಂದ ಅವರು ಆ ದಶಕಗಳ ಅತ್ಯಂತ ಓಜಸ್ವಿ ಭಾಷಣಕಾರರೆನಿಸಿದ್ದರು. ಅವರ ಹೇಳಿಕೆಗಳನ್ನು ಇಡೀ ದೇಶವೇ ಅತ್ಯಂತ ಆಸಕ್ತಿಯಿಂದ ಎದುರುನೋಡುತ್ತಿತ್ತು. ನಾಲ್ಕು ಬಾರಿ ಅವರು ಕಾಂಗ್ರೆಸಿನ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು.

ಮಾಲವೀಯರು ವೈಧಾನಿಕ ಮಾರ್ಗದಲ್ಲಿ ವಿಶ್ವಾಸ ತಳೆದಿದ್ದವರಾದರೂ ಸಂದರ್ಭ ಬಂದಾಗ ಹೋರಾಟಗಳ ನೇತೃತ್ವ ವಹಿಸಲು ಹಿಂದೆಗೆಯುತ್ತಿರಲಿಲ್ಲ. ಹೀಗೆ ಹಲವು ಬಾರಿ ಬಂಧನಕ್ಕೆ ಒಳಗಾದರು.

೧೯೦೫ರಲ್ಲಿ ಆಂಗ್ಲ ಸರ್ಕಾರ ನಡೆಸಿದ್ದ ಅಮಾನವೀಯ ದಮನಾಚರಣೆಯನ್ನು ಮಾಲವೀಯರು ಪ್ರಖರವಾಗಿ ಖಂಡಿಸಿದರು. ವಿದೇಶಗಳಲ್ಲಿ ನೆಲಸಿದ್ದ ಭಾರತಮೂಲದ ಪ್ರಜೆಗಳ ದುರವಸ್ಥೆಯನ್ನು ಕುರಿತು ೧೯೧೨ರ ಕಾಂಗ್ರೆಸ್ ಅಧಿವೇಶನದಲ್ಲಿ ಮಾಲವೀಯರು ಮಾಡಿದ ಭಾಷಣ ಅತ್ಯಂತ ಮಾರ್ಮಿಕವಾಗಿದ್ದು ವ್ಯಾಪಕ ಗಮನ ಸೆಳೆಯಿತು.

ಜನಾಂಗಾಧಾರಿತ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ದುಂಡುಮೇಜಿನ ಪರಿಷತ್ತಿನ ಅಧ್ಯಕ್ಷ ರ್‍ಯಾಮ್ಸೇ ಮೆಕ್‌ಡಾನಲ್ಡ್ ಸೂಚಿಸಿದಾಗ ಅದಕ್ಕೆ ಮಾಲವೀಯರು ತೀಕ್ಷ್ಣ ಪ್ರತಿಭಟನೆ ತೋರಿದರು. ಅಂತಹ ವ್ಯವಸ್ಥೆಯು ಹಿಂದೂ ಜನತೆಯ ಹಿತಾಸಕ್ತಿಗಳಿಗೆ ಅತ್ಯಂತ ಬಾಧಕವಾಗುತ್ತದೆಂಬುದು ಅವರ ಖಚಿತ ಅಭಿಮತವಾಗಿತ್ತು. ಆ ಹಿನ್ನೆಲೆಯಲ್ಲಿ ಗಾಂಧೀಯವರು ಉಪವಾಸ ಕೈಗೊಂಡದ್ದು, ಅಂತಿಮವಾಗಿ 'ಪೂನಾ ಪ್ಯಾಕ್ಟ್' ಏರ್ಪಟ್ಟದ್ದು ಇದೆಲ್ಲ ಸುವಿದಿತ. ಆ ಸಂಧಾನವನ್ನು ಸುಮುಖಗೊಳಿಸಿದ ಒಂದು ಅಂಶ ಅಂಬೇಡ್ಕರರ ಮೇಲೆ ಮಾಲವೀಯರಿಗೆ ಇದ್ದ ಪ್ರಭಾವ.

ಪ್ರಮುಖ ಅಭಿಪ್ರಾಯಭೇದಗಳು ಇದ್ದರೂ ವೈಯಕ್ತಿಕ ವಿಶ್ವಾಸಾದರಗಳು ಸದಾ ಅಕುಂಠಿತವಾಗಿ ಮುಂದುವರಿದ ಉದಾತ್ತತೆಗೆ ಉತ್ತಮ ನಿದರ್ಶನ ಗಾಂಧೀ-ಮಾಲವೀಯರ ನಡುವಣ ಸಂಬಂಧ.

(ಸಾಭಾರ : ಉತ್ಥಾನ)

ರಾಷ್ಟ್ರಕವಿ ಕುವೆಂಪುಗೆ ನುಡಿ ನಮನ

– ಡಾ|| ಕೆ.ಸಿ.ಶಿವಾರೆಡ್ಡಿ

(ರಾಷ್ಟ್ರಕವಿ ಕುವೆಂಪುರವರ ೧೧೭ನೇ ವರ್ಷದ ಜನ್ಮದಿನೋತ್ಸವದ ನಿಮಿತ್ತ ಈ ಲೇಖನ.)

ಕುವೆಂಪು ಕಾವ್ಯ ನಾಮದ ಕೆ.ವಿ.ಪುಟ್ಟಪ್ಪ (ಕುಪ್ಪಳಿ ವೆಂಕಟಪ್ಪಗೌಡ ಪುಟ್ಟಪ್ಪ) ಕನ್ನಡ ಸಾಹಿತ್ಯದ ಶ್ರೇಷ್ಠ ಕವಿ, ಕಾದಂಬರಿಕಾರ, ವಿಮರ್ಶಕ ಹಾಗೂ ಸಾಂಸ್ಕೃತಿಕ ಚಿಂತಕ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ (೨೯.೧೨.೧೯೦೪) ಜನಿಸಿದ ಇವರು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ತಂದುಕೊಟ್ಟವರಲ್ಲಿ ಪ್ರಮುಖರು. ತಮ್ಮ ಕೃತಿಗಳ ಮೂಲಕ ಪಾರಂಪರಿಕ ಚಿಂತನೆಗಳಿಗೆ ಆಧುನಿಕ ವೈಚಾರಿಕ ಹಾಗೂ ವೈಜ್ಞಾನಿಕ ಆಯಾಮಗಳನ್ನು ಮುಖಾಮುಖಿಯಾಗಿಸಿದವರು. ಹಾಗೆಯೇ ಪಾರಂಪರಿಕವಾಗಿ ಅಪವ್ಯಾಖ್ಯಾನಕ್ಕೆ ಒಳಗಾದ ಪುರಾಣ, ದರ್ಶನಗಳನ್ನು ಮರುವ್ಯಾಖ್ಯಾನಕ್ಕೆ ಗುರಿಪಡಿಸಿ ಹೊಸ ಮೌಲ್ಯಗಳ ಆವಿಷ್ಕಾರದ ಶೋಧಕ್ಕೆ ತೊಡಗಿದವರು. ಆಯಾ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ನೆಲೆಗಳಿಗೆ ನಿರಂತರವಾಗಿ ಪ್ರತಿಕ್ರಿಯಿಸುವುದು ಅವರ ಒಟ್ಟು ಸಾಹಿತ್ಯದ ಕೇಂದ್ರ ಚಿಂತನಾನೆಲೆ.

ಅವೈಚಾರಿಕ ಅವೈಜ್ಞಾನಿಕ ನೆಲೆಗಳನ್ನು ವಿಮರ್ಶಿಸಿ ಮಾನವೀಯ ಮೌಲ್ಯಗಳ ಶೋಧನೆಗೆ ತೊಡಗಿದ್ದು ಕುವೆಂಪು ಅವರ ಸಂವೇದನೆಯ ವೈಶಿಷ್ಟ್ಯವಾಗಿದೆ. ಹೀಗಾಗಿ ಪ್ರಾದೇಶಿಕ ಪರಿಸರ ಹಾಗೂ ರಾಷ್ಟ್ರೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಅವರ ಕೃತಿಗಳಿಂದ ಉತ್ಪನ್ನವಾಗುವ, ಪ್ರಕಟವಾಗುವ, ಧ್ವನಿಸುವ ವೈಚಾರಿಕ ಆಕೃತಿಗಳು, ಚಿಂತನೆಗಳು ನಿರಂತರ ಅಭ್ಯಾಸ ಯೋಗ್ಯವಾದವೂ, ಚಿಂತನಶೀಲವೂ ಆಗಿವೆ. ಅಂತೆಯೇ ಪುರೋಹಿತಶಾಹಿ, ಸಾಮ್ರಾಜ್ಯಶಾಹಿ ವ್ಯವಸ್ಥೆಗಳು ಸೃಷ್ಟಿಸಿದ ಕ್ರೌರ್ಯಕ್ಕೆ ಇವರ ಕೃತಿಗಳು ತೋರುವ ಪ್ರತಿರೋಧ ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಅನನ್ಯವಾದದ್ದಾಗಿದೆ. ಈ ಎಲ್ಲ ಅಂಶಗಳು ಕುವೆಂಪು ಅವರ ಸಮಗ್ರ ಕೃತಿ ಸಮೂಹದ ಮೂಲಕ ನಮ್ಮ ಅನುಭವಕ್ಕೆ ಬರುತ್ತವೆ. ಹೀಗಾಗಿ ಅವರ ಕೃತಿಗಳ ಪ್ರತಿಯೊಂದು ಓದು ಕೂಡ ಸಮಕಾಲೀನವಾಗುತ್ತಾ ಹೋಗುವುದರೊಂದಿಗೆ ಸಾಂಸ್ಕೃತಿಕ ತಲ್ಲಣಗಳಿಗೆ ಪ್ರತಿಕ್ರಿಯಿಸುತ್ತಾ ಹೊಸ ದರ್ಶನವೊಂದನ್ನು ನಿರಂತರವಾಗಿ ಕಟ್ಟಿಕೊಡುತ್ತದೆ. ಇಂಥ ಹೊಸದರ್ಶನ ಕೇವಲ ಸಾಹಿತ್ಯದ ವಲಯಕ್ಕೆ ಮಾತ್ರ ಸೀಮಿತವಾಗದೆ, ಅದರಾಚೆಗಿನ ಅನೇಕ ಅಧ್ಯಯನ ವಲಯಗಳ ಕಡೆಗೆ ವಿಸ್ತರಿಸಿ ಬೀರುವ ಪ್ರಭಾವ ಪರಿಣಾಮಗಳು ಅನೇಕ. ಇಂಥ ವೈಚಾರಿಕತೆಯು ಕುವೆಂಪು ಸಮಗ್ರ ಕೃತಿಗಳಲ್ಲಿ ಪ್ರಖರವಾಗಿ ಅಭಿವ್ಯಕ್ತಗೊಂಡಿದೆ.

* * *

ಪ್ರಜಾಪ್ರಭುತ್ವದ ಅಪಹರಣ

– ದೇವಿಂದರ್ ಶರ್ಮಾ

ಚಿನ್ನದ ಬೆಲೆ ಗಗನದೆತ್ತರಕ್ಕೆ ಹೋಗುತ್ತಿರುವುದಕ್ಕೆ ಕಾರಣವೇನೆಂದು ಓರ್ವ ತರುಣಿ ಅಂಗಡಿಯವನನ್ನು ಕೇಳಿದಳು. ಆತ ಉತ್ತರಿಸುವ ಮೊದಲೇ ಆ ಯುವತಿಯೇ 'ಊಹಾ ವ್ಯಾಪರ'ವೇ ಇದಕ್ಕೆ ಕಾರಣವೆಂದು ಹೇಳಿದಳು. ದಾಖಲೆ ಮೀರಿದ ಚಿನ್ನದ ಈ ಬೆಲೆಗಳಿಗೆ ಬಂಡವಾಳ ಹೂಡಿಕೆದಾರಲ್ಲಿ ಶೇ.೦೧ರಷ್ಟು ಹೂಡಿಕೆದಾರರು ಅಗಾಧ ಪ್ರಮಾಣದ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಶೇ.೯೯ರಷ್ಟು ಜನರು ತಮ್ಮ ಹೊಟ್ಟೆ ಕಟ್ಟಿ ಖರೀದಿಸುತ್ತಿದ್ದಾರೆ ಎಂಬ ವಿಷಯ ಆ ತರುಣಿಗೆ ಗೊತ್ತಿರಲಿಲ್ಲ. ನಾವು ಈ ಶೇ.೯೯ರಲ್ಲಿ ಒಬ್ಬರು ಎಂಬುವುದಕ್ಕೆ ಇದು ಸಂಕ್ಷಿಪ್ತವಾದ ಕಾರಣ. ಈ ಆರ್ಥಿಕ ವಿಷಮತೆ ಖಂಡಾಂತರ ವ್ಯಾಪಿಯಾಗಿದೆ. ೮೨ದೇಶಗಳಲ್ಲಿಯ ೯೫೦ಕ್ಕೂ ಹೆಚ್ಚು ನಗರಗಳಲ್ಲಿ ಸಾವಿರಾರು ಜನರು ಬೀದಿಗಳಿಗೆ ಮುಖ್ಯ ಚೌಕಿಗಳಿಗೆ ಮತ್ತು ನಗರ ಮಧ್ಯದಲ್ಲಿರುವ ಉದ್ಯಾನಗಳಿಗೆ ನುಗ್ಗುತ್ತಿರುವುದಕ್ಕೆ ಕಾರಣ ಅವರೆಲ್ಲರು ಆರ್ಥಿಕ ಅಸಮಾನತೆಯ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. (ಜಗತ್ತಿನ ಹಣಕಾಸಿನ ರಾಜಧಾನಿಯಾದ) ವಾಲ್‌ಸ್ಟ್ರೀಟ್‌ನಲ್ಲಿ ಕೆಲವೇ ಜನ ಮೌನವಾಗಿ ಧರಣಿನಡೆಸಿದ್ದು ಈಗ ಅದು ಕಾಡ್ಗಿಚ್ಚಿನಂತೆ ಹಬ್ಬುತ್ತಿದೆ. 'ವಾಲ್‌ಸ್ಟ್ರೀಟ್ ಆಕ್ರಮಿಸಿ' ಎಂಬ ಚಳುವಳಿ ಪ್ರಚಲಿತ ಅಸಮಾನತೆಗಳ ಬಗ್ಗೆ ಮೂಲಭೂತ ಪ್ರಶ್ನೆಯನ್ನು ಎತ್ತಿವೆ. ಅಲ್ಲದೆ ಅಸಮಾನತೆಗೆ ಕಾರಣವಾಗಿರುವ ತಳಪಾಯವನ್ನೇ ಅಲ್ಲಾಡಿಸಿವೆ. ೨೦೦೮ರಲ್ಲಿ ಆರ್ಥಿಕ ಕುಸಿತವಾದಾಗ ಸಾರ್ವಜನಿಕ ಹಣಕಾಸಿನಿಂದ ಬ್ಯಾಂಕ್‌ಗಳು ದೊಡ್ಡ ಪ್ರಮಾಣದಲ್ಲಿ ಗಳಿಸುವಂತೆ ಮಾಡಿದ್ದು ಅಮೇರಿಕನ್ನರ ಕೋಪಕ್ಕೆ ಕಾರಣ. ಆ ಸಮಯದಲ್ಲಿ ಸಾಮಾನ್ಯ ಅಮೇರಿಕನ್ನರು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದರು. ಜಗತ್ತಿನಾದ್ಯಂತ ಭಾರತವೂ ಸೇರಿದಂತೆ ೩೦ ಟ್ರಿಲಿಯನ್ ಡಾಲರ್‌ಗಳ ಮೊತ್ತವನ್ನು ಸಂಭವಿಸುತ್ತಿರುವ ಆರ್ಥಿಕ ಕುಸಿತವನ್ನು ತಡೆಯಲು ವಿವಿಧ ದೇಶಗಳು ಹೂಡಿದ್ದವು. ಯಾರು ಈ ಆರ್ಥಿಕ ಗಂಡಾಂತರಕ್ಕೆ ಕಾರಣರಾಗಿದ್ದರೋ ಅಂಥವರಿಗೆ ದೊಡ್ಡ ಮೊತ್ತದ ಬೋನಸ್ ಚೆಕ್‌ಗಳನ್ನು ಮತ್ತು ಇತರೆ ಆರ್ಥಿಕ ಸವಲತ್ತುಗಳನ್ನು ಕೊಟ್ಟು ಗೌರವಿಸಲಾಯಿತು. ಈ ರೀತಿಯ ವ್ಯವಸ್ಥೆ ಹೆಚ್ಚು ಹೆಚ್ಚು ಲಾಭದ ಖಾಸಗೀಕರಣ ಮತ್ತು ಬೆಲೆಗಳ ಸಾಮಾಜಿಕರಣಕ್ಕೆ ಕಾರಣವಾಗುತ್ತದೆಂದು ನನ್ನ ಅಭಿಪ್ರಾಯ. ಒಂದು ದೃಶ್ಯ ಇಲ್ಲಿದೆ. ರೋನಾಲ್ಡ್ ರೇಗನ್ ಅಧ್ಯಕ್ಷರಾಗಿ ಅವರು ತೆರಿಗೆ ವಿನಾಯಿತಿಗಳನ್ನು ಪ್ರಾರಂಭಿಸಿದ ದಿನದಿಂದ ಅಮೇರಿಕಾದಲ್ಲಿ ಶ್ರೀಮಂತರು ಮತ್ತು ಸಾಮಾನ್ಯ ನಾಗರೀಕನ ಮಧ್ಯದಲ್ಲಿಯ ಕಂದಕ ದೊಡ್ಡದಾಗುತ್ತಾ ಹೋಯಿತು. ತೆರಿಗೆ ರಿಯಾಯ್ತಿಯ ಕಾರಣದಿಂದಾಗಿ ಶ್ರೀಮಂತರು ಕಂಪನಿಯ ಲಾಭಗಳನ್ನು ಎಷ್ಟು ಬೇಕೋ ಅಷ್ಟು ಮನೆಗೆ ತೆಗೆದುಕೊಂಡು ಹೋಗಲು ಸಾಧ್ಯಮಾಡಿತು. ಆದ್ದರಿಂದ ಶೇ.೪೨ರಷ್ಟು ಜನರು ಶ್ರೀಮಂತರಾಗಿದ್ದರೆ ಜನಸಂಖ್ಯೆಯ ೮೦ರಷ್ಟು ಜನರು ಕೇವಲ ೭ರಷ್ಟು ಶ್ರೀಮಂತಿಕೆಯನ್ನು ಹೊಂದಿದ್ದಾರೆ ಎಂಬುದು ಆಶ್ಚರ್ಯವಲ್ಲ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಶೇ.೩೦ರಷ್ಟು ಅಮೇರಿಕನ್ನರು ಶೇ.೯೦ರಷ್ಟು ಶ್ರೀಮಂತಿಕೆಯನ್ನು ಹೊಂದಿದ್ದಾರೆ. ವಿಪರ್ಯಾಸವೇನೆಂದರೆ ಜಗತ್ತಿನ ಅತ್ಯಂತ ಶ್ರೀಮಂತ ದೇಶದಲ್ಲಿ ೫೨ ವರ್ಷದ ದಾಖಲೆ ಮೀರಿ ಆ ದೇಶದ ಜನಸಂಖ್ಯೆಯ ಶೇ.೧೫.೧ರಷ್ಟು ಜನರು ಬಡತನದಲ್ಲಿ ಬಳಲುವಂತಾಯಿತು. ಹಸಿವು ತನ್ನ ಎಲ್ಲ ಮಿತಿಯನ್ನು ಮೀರಿತು.

ಆರು ಜನರಲ್ಲಿ ಒಬ್ಬ ವ್ಯಕ್ತಿ ಆಹಾರ ವಿತರಣಾ ವ್ಯವಸ್ಥೆಯ ಲಾಭ ಪಡೆಯಲು ಸರದಿಯ ಸಾಲಿನಲ್ಲಿ ನಿಲ್ಲಬೇಕಾಯಿತು. ೨೦೦೯ರಲ್ಲಿ ಉಂಟಾಗಿದ್ದ ಆರ್ಥಿಕ ಮುಗ್ಗರಿಕೆಗೂ ಮತ್ತು ೧೯೩೦ರಲ್ಲಿ ಆಗಿದ್ದ ಆ ಮಹಾ ಮುಗ್ಗರಿಕೆಗೂ ಕಣ್ಣಿಗೆ ರಾಚುವಷ್ಟು ಸಮಾನಾಂಶಗಳಿವೆ. ೧೯೨೯ರಲ್ಲಿ ಅಮೇರಿಕಾದ ಮೇಲ್ವರ್ಗದ ಶೇ.೧ರಷ್ಟು ಜನರು ರಾಷ್ಟ್ರದ ಶೇ.೬೦ರಷ್ಟು ಆದಾಯವನ್ನು ನಿಯಂತ್ರಿಸಿದ್ದರು. ಅದು ಆರ್ಥಿಕ ಮುಗ್ಗಟ್ಟಿನಿಂದ ತಕ್ಷಣವೇ ಬಹಳಷ್ಟು ಅಧೋಗತಿಗೆ ಇಳಿಯಿತು.

ನೋಬೆಲ್ ಪಾರಿತೋಷಕ ವಿಜೇತ ಪಾಲ್‌ಕ್ರುಗ್‌ಮನ್ ಹೇಳಿದಂತೆ ಯಾವಾಗ ಆದಾಯದ ಅಂತರ ೧:೧೦೦ ಅನುಪಾತವನ್ನು ದಾಟುತ್ತದೋ ಅದು ಆರ್ಥಿಕ ನೀತಿಗಳು ಭಯಾನಕವಾಗಿ ತಪ್ಪಿರುವ ಸುಳಿವು. ಆದರೆ ಕಾರ್ಪೊರೇಟ್ ಕ್ಷೇತ್ರ ನೀತಿ ನಿರ್ಧಾರಕರು, ಶಿಕ್ಷಣತಜ್ಞರು ಮತ್ತು ಮಾಧ್ಯಮದ ಮೇಲೆ ಎಷ್ಟೊಂದು ಹಿಡಿತವನ್ನು ಇರಿಸಿಕೊಂಡಿದೆ ಎಂದರೆ ಬದಲಾವಣೆಗಾಗಿ ಯಾರಾದರೂ ಧ್ವನಿ ಎತ್ತಿದಲ್ಲಿ ಅದನ್ನು ಅಪಹಾಸ್ಯಗೊಳಿಸುತ್ತದೆ.

ಭಾರತದಲ್ಲಿ ಆರ್ಥಿಕ ಅಂತರ ಶ್ರೀಮಂತರು ಮತ್ತು ಬಡವರ ಮಧ್ಯೆ ಶೇ.೯೦ ಸಾವಿರಕ್ಕಿಂತಲೂ ಹೆಚ್ಚಾಗಿದೆ. ಭಾರತದಲ್ಲಿರುವ ತುಂಬಾ ಮೇಲ್ವರ್ಗದ ೫೦ ಕುಟುಂಬಗಳು ಹೊಂದಿರುವ ಶ್ರೀಮಂತಿಕೆ ದೇಶದ ಒಂದು ಟ್ರಿಲಿಯನ್ ಶ್ರೀಮಂತಿಕೆಯಾಗುತ್ತದೆ. ಈ ಕುಟುಂಬಗಳೇನಾದರೂ ವಲಸೆ ಹೋದಲ್ಲಿ ಭಾರತದ ಆರ್ಥಿಕ ಶ್ರೀಮಂತಿಕೆ ನೆಲಕಚ್ಚುವುದು. ಒಂದು ದಶಲಕ್ಷ ಡಾಲರ್‌ಗಿಂತಲೂ ಹೆಚ್ಚು ಹಣವನ್ನು ಹೂಡಬಲ್ಲವರ ಸಂಖ್ಯೆ ೨೦೦೯ರಲ್ಲಿ ೧,೨೬,೭೦೦ ಇದ್ದದ್ದು ೨೦೧೧ರ ವೇಳೆಗೆ ೧,೫೩,೩೦೦ಕ್ಕೆ ಏರಿದೆ. ಅಂದರೆ ಶೇ.೨೦.೮ರಷ್ಟು. ಇದೇ ಸಮಯದಲ್ಲಿ ವಿಶ್ವಸಂಸ್ಥೆಯ ಅಂದಾಜಿನಂತೆ ೪೫೬ ದಶಲಕ್ಷ ಜನರು ದಿನಕ್ಕೆ ೧.೨೫ ಡಾಲರ್‌ಗಿಂತಲೂ ಕಡಿಮೆ ಆದಾಯದಲ್ಲಿ ಜೀವಿಸುತ್ತಿದ್ದಾರೆ. ೨೦೧೧ರಲ್ಲಿ ಅಂತರಾಷ್ಟ್ರೀಯ ಆಹಾರ ಸಂಶೋಧನಾ ಸಂಸ್ಥೆಯು ತಿಳಿಸಿದಂತೆ ಜಾಗತಿಕ ಹಸಿವು ಎಂಬುವ ೮೧ದೇಶಗಳ ಪಟ್ಟಿಯಲ್ಲಿ ಭಾರತವು ೬೭ನೇ ಸ್ಥಾನದಲ್ಲಿದೆ. ಕಳೆದ ಐದು ದಶಕಗಳಿಂದ ಭಾರತ ಬಡತನವನ್ನು ಕೃತಕವಾಗಿ ಕಡಿಮೆ ಇರುವಂತೆ ನೋಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ಸಾರ್ವಜನಿಕ ದೃಷ್ಟಿಯಿಂದ ಬಡವರನ್ನು ಮತ್ತು ಹಸಿವನ್ನು ಮುಚ್ಚಿಡುವುದು ಆದಾಯದಲ್ಲಿಯ ವೈರುಧ್ಯವನ್ನು ಕಡಿಮೆಮಾಡುವ ಖಚಿತ ಉಪಾಯಗಳಲ್ಲಿ ಒಂದಾಗಿದೆ. ಹಸಿದವರಿಗೆ ಸಾಕಷ್ಟು ಆಹಾರವನ್ನು ಕೊಡುವ ವಿಷಯ ಬಂದಾಗ ಯಾವಾಗಲೂ ಹಣದ ಕೊರತೆ ಇರುತ್ತದೆ. ಆದರೆ ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಹಣದ ಅಭಾವ ಎಂದೂ ಇರುವುದಿಲ್ಲ. ಬಡತನದ ರೇಖೆ ೩೨ರೂ ಇರಬೇಕೆ ಅಥವಾ ೨೬ರೂ ಇರಬೇಕೆ ಎಂಬ ವಿಷಯವಾಗಿ ಬಿಸಿ ಚರ್ಚೆ ನಡೆಯುತ್ತಿದ್ದಾಗ ವಾಣಿಜ್ಯ ಮಂತ್ರಾಲಯವು ೧೭೦೦ ಕೋಟಿ ರುಪಾಯಿಗಳಷ್ಟು ಹಣವನ್ನು ರಫ್ತು ಮತ್ತು ಮಾರುಕಟ್ಟೆಯ ವಿಸ್ತರಣೆಗಾಗಿ ಸದ್ದಿಲ್ಲದೆ ಕೊಟ್ಟಿತು. ೨೦೦೪ರಿಂದ ೨೨ಲಕ್ಷ ಕೋಟಿ ಹಣವನ್ನು ಕಾರ್ಪೊರೇಟ್ ಮತ್ತು ವಾಣಿಜ್ಯ ಪ್ರಭುಗಳಿಗೆ ತೆರಿಗೆ ರೂಪದಲ್ಲಿ ವಿನಾಯಿತಿ ನೀಡಿದೆ. ಈ ಮೊತ್ತ ಎರಡು ವಾರ್ಷಿಕ ಬಜೆಟ್‌ಗಳಲ್ಲಿ ಮೀಸಲಾಗಿಟ್ಟ ಹಣಕ್ಕೆ ಸಮವಾಗಿದೆ. ಈ ಪ್ರಕಾರದ ಮಹಾ ಉದಾರ ಸಹಾಯ ಕೈಗಾರಿಕೆಗಳಲ್ಲಿಯ ಕೆಳಹಂತದ ರೇಖೆಯಿಂದ ಬಲಪಡಿಸುತ್ತದೆ ಹಾಗೂ ವ್ಯಕ್ತಿಗತವಾಗಿ ಶ್ರೀಮಂತರಾದರವರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ 'ವಾಲ್‌ಸ್ಟ್ರೀಟ್ ಧರಣಿ' ಶ್ರೀಮಂತರಿಂದ ನಡೆಯುವ ಒಂದು ಖಾಸಗಿ ಕ್ಲಬ್ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ನಡೆಸುವ ಸಾರ್ವಜನಿಕ ನೀತಿಯ ವಿರುದ್ಧ ಪ್ರದರ್ಶನವಾಗಿದೆ. ಜನರು ಪುನಃ ತಮ್ಮ ಆರ್ಥಿಕ ಶಕ್ತಿಯನ್ನು ಪಡೆಯುವಂಥ ದಿನಗಳು ದೂರವಿಲ್ಲವೆಂದು ಆಶಿಸೋಣ.

(ಅನು: ಸು.ಕೌ)

ಗಾಂಧೀಜಿಯವರ ದೃಷ್ಟಿಯಲ್ಲಿ ಅಹಿಂಸಾಮಾರ್ಗ

- ಡಾ. ಎಂ.ಡಿ.ಉಮೇಶ

ಸತ್ಯ, ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು: ಸಮಾಜ, ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೇ ಆಗಲಿ, ಅದಂತೂ ನನ್ನ ಕನಸು. ನನ್ನ ಬಯಕೆಯೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೆ. ನನ್ನ ಸಾವೂ ಅದರಲ್ಲಿಯೆ. ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೆ ಅಹಿಂಸೆ: ಆದುದರಿಂದಲೆ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ ಎಂಬುದು ಗಾಂಧೀಜಿಯವರ ನಿಲುವಾಗಿದೆ.

ನಮ್ಮ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ ಎರಡರ ಹೊರತು, ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ಮುಂದಿಟ್ಟರೂ ಈ ಎರಡನ್ನು ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯ ಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥ್ಯ ಇಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಕೊಟ್ಟು ಭಾರತಕ್ಕೆ ಸೇವೆಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ ಸತ್ಯವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ. ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮ ಸೂತ್ರಗಳನ್ನು ಸಾರುತ್ತಾ ಹೋಗುತ್ತೇನೆ ಎಂದು ಗಾಂಧೀಜಿಯವರು ಹೇಳಿದ್ದಾರೆ.

ಸತ್ಯ, ಅಹಿಂಸೆಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸತ್ಯ, ಅಹಿಂಸೆಗಳ ಪ್ರಸಾರ ಸಾಧ್ಯ. ಅವುಗಳನ್ನು ಅನುಷ್ಠಾನಕ್ಕೆ ತಂದರೆ ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ. ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟಣೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ. ಅವು ಅನಿವಾರ್ಯವೇನಲ್ಲ ಎಂದಷ್ಟೆ ನನ್ನ ಅಭಿಪ್ರಾಯ. ನಾವು ಸತ್ಯ, ಅಹಿಂಸೆಗಳ ನಿಜವಾಗಿ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೆ ನಮಗೆ ದಯಪಾಲಿಸುತ್ತಾನೆ. ಪ್ರತಿ ಪಕ್ಷದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಇಚ್ಛೆ ಅಂತಹ ಶ್ರದ್ಧೆಯ ಪೂರ್ವಾಂಗವಾಗಿಯೇ ಉಳಿದಿದೆ. ಪ್ರತಿಪಕ್ಷಿಯ ಮನಸ್ಸನ್ನು ಹೊಕ್ಕು ಆತನ ದೃಷ್ಟಿ ಏನೆಂದು ಅರಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಹಿಂಸೆಯ ಬಾಯನ್ನೇ ಅಹಿಂಸೆ ನೇರವಾಗಿ ನುಂಗುತ್ತದೆ ಎಂಬುದರ ಅರ್ಥ ಇದೇ.

ಅಂತಹ ಮನೋಧರ್ಮದ ಕವಚ ನಮಗಿದ್ದರೆ ಅಹಿಂಸೆಯ ತತ್ವಗಳನ್ನು ಪ್ರಸಾರ ಮಾಡುವ ವಿಶ್ವಾಸ ನಮಗೆ ಬರುತ್ತದೆ. ಅದಿಲ್ಲದೆ ಪುಸ್ತಕಗಳ, ಪತ್ರಿಕೆಗಳ ಪ್ರಚಾರ ವ್ಯರ್ಥ ಎಂದಿದ್ದಾರೆ ಗಾಂಧೀಜಿ.

ಜನರು ಹಿಂಸೆಯ ದಾರಿಯನ್ನು ಹಿಡಿದರೆ, ಅದಕ್ಕೆ ತಾತ್ಕಾಲಿಕ ಗೆಲುವು ದೊರೆಯಬಹುದು. ಆದರೆ ಅದು ಸತ್ಯವಾದ ಮಾರ್ಗವಲ್ಲ. ಹಿಂಸಾ ಮಾರ್ಗದಿಂದ ಶಾಶ್ವತ ನೆಮ್ಮದಿ ದೊರೆಯುವುದಿಲ್ಲ. ಪ್ರೇಮ ಇಲ್ಲವೆ ಅಹಿಂಸೆಯನ್ನು ನಮ್ಮ ಜೀವನ ಧರ್ಮವನ್ನಾಗಿ ನಾವು ಮಾಡಿಕೊಳ್ಳದಿದ್ದರೆ ಒಂದಕ್ಕಿಂತ ಹೆಚ್ಚು ಘನಘೋರ ಯುದ್ಧಗಳ ಪರಂಪರೆಯಲ್ಲಿ ಸಿಲುಕಿ ನಾವು ಒದ್ದಾಡಬೇಕಾಗುವುದು. ಗಾಂಧೀಜಿಯವರು ದೇಶವನ್ನು ದಾಸ್ಯದಿಂದ ವಿಮುಕ್ತಿಗೊಳಿಸಲು ಸತ್ಯ, ಅಹಿಂಸೆ ಮಾನವೀಯತೆ ಇವುಗಳನ್ನಾಧರಿತ ಕೆಲ ಸಾಧನಗಳನ್ನು ಪ್ರಯೋಗಿಸಿ ಯಶಸ್ಸನ್ನು ಪಡೆದರು. ಅವೇ ಸತ್ಯಾಗ್ರಹ, ಹಾಗೂ ಅಸಹಕಾರ ಮಾರ್ಗಗಳು.

ಅಹಿಂಸೆಗೆ ದುಷ್ಟಶಕ್ತಿಗಳನ್ನು ಮಣಿಸುವ ಸಾಮರ್ಥ್ಯವಿದೆ. ನಮ್ಮ ರಾಷ್ಟ್ರೀಯ ಅಥವಾ ರಾಜಕೀಯ ಜೀವನದಲ್ಲಿ ಸತ್ಯ, ಪ್ರೇಮ ಹಾಗೂ ಅಹಿಂಸೆ ಇವುಗಳ ಉಪಯೋಗವೇ ಸತ್ಯಾಗ್ರಹದ ಸಾರ ಸ್ವರೂಪವು. ೧೯೨೨ರ ಚೌರಿಚೌರಾ ಘಟನೆಯ ನಂತರ ಚಳುವಳಿಯನ್ನು ನಿಲ್ಲಿಸಲು ಆಜ್ಞೆಯನ್ನಿತ್ತಿದ್ದರು. ಜನರು ಸತ್ಯಾಗ್ರಹದ ಅರ್ಥ ಮಾಡಿಕೊಳ್ಳಲಿಲ್ಲವಲ್ಲ ಎಂದು ಗಾಂಧೀಜಿ ನೊಂದುಕೊಂಡಿದ್ದುಂಟು. ಹಿಂಸೆಯ ವಾತಾವರಣದಲ್ಲಿ ಸತ್ಯಾಗ್ರಹವು ಬೆಳೆದು ಬೇರೂರಲಾರದು: ಎಂದು ಅವರು ಸ್ಪಷ್ಟವಾಗಿ ಅರಿತಿದ್ದರು. ಕೆಲಸಂದರ್ಭದಲ್ಲಿ ಅವರು ಸವಿನಯ ಕಾಯಿದೆ ಭಂಗ, ಅಸಹಕಾರದಂತಹ ಇತರ ಅಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸಿದರು.

ವ್ಯವಹಾರದಲ್ಲಿ ಅದರ ಅರ್ಥ ಪ್ರೇಮದಿಂದ ಪ್ರತಿಭಟನೆ, ಅದು ಒಂದು ಶಕ್ತಿ "ಅದನ್ನು ವ್ಯಕ್ತಿಗಳು, ಸಮುದಾಯಗಳು ಪ್ರಯೋಗಿಸಬಹುದು, ಗೃಹಕೃತ್ಯದ ವ್ಯವಹಾರಗಳಲ್ಲಿಯೇ ಅಲ್ಲದೆ ರಾಜಕೀಯ ವ್ಯವಹಾರಗಳಲ್ಲಿಯೂ ಅದನ್ನು ಪ್ರಯೋಗಿಸಬಹುದು. ಕತ್ತಲೆಗೆ ಬೆಳಕು ಹೇಗೋ ಹಾಗೆ ಎಲ್ಲ ಹಿಂಸೆ, ದಬ್ಬಾಳಿಕೆ, ಅನ್ಯಾಯಗಳಿಗೆ ಈ ಶಕ್ತಿ. ಇದನ್ನಾಚರಿಸಲು ಶ್ರದ್ಧೆ ಹಾಗೂ ತಾಳ್ಮೆ ಅಗತ್ಯ. ಇಂತಹ ಮನೋಭಾವನೆ ಮತ್ತು ಗುಣಗಳನ್ನು ಹೊಂದಿರುವವರೇ ಸತ್ಯಾಗ್ರಹಿಗಳಾಗಲು ಯೋಗ್ಯರೆನಿಸುವರು ಹಿಂಸಾಮಯ ಸಾಧನಗಳಿಂದ ಹಿಂಸಾಯುಕ್ತ ಸ್ವರಾಜ್ಯವೇ ಸಿಕ್ಕುವುದು. ಅದು ಭಾರತಕ್ಕಷ್ಟೇ ಅಲ್ಲ ಇಡೀ ಜಗತ್ತಿಗೆ ಒಂದು ಗಂಡಾಂತರವಾಗುವುದು. ಫ್ರಾನ್ಸ್ ದೇಶವು ತನ್ನ ಸ್ವಾತಂತ್ರ್ಯವನ್ನು ಹಿಂಸೆಯಿಂದ ದೊರಕಿಸಿತು. ಆ ಹಿಂಸೆಯ ಬೆಲೆಯನ್ನು ಆ ದೇಶವು ಇನ್ನೂ ಕೊಡುತ್ತಿರುವುದು ಸಾಧ್ಯ ಸಾಧನಗಳ ನಡುವೆ ಒಂದು ಕೃತ್ರಿಮ ಗೋಡೆ ಇಲ್ಲ ಎಂದು ಅವರೇ ಸ್ಪಷ್ಟಪಡಿಸಿರುವರು. ಗುರಿ ಮತ್ತು ಸಾಧನಗಳ ನಡುವೆ ಇರುವ ಸಂಬಂಧ ನಿಕಟವಾದದ್ದು, ದೈಹಿಕವಾದದ್ದು. ಬೀಜ ವೃಕ್ಷ ಸಂಬಂಧವೇ ಇಲ್ಲೂ ಕಂಡು ಬರುತ್ತದೆ. "ವಿಷ ಬೀಜಗಳನ್ನು ಬಿತ್ತಿ ಸುಮಧುರ ಫಲಗಳನ್ನು ಪಡೆಯುವುದು ಹೇಗೆ ಅಸಾಧ್ಯವೋ ಹಾಗೆಯೇ ದುರ್ಮಾರ್ಗವನ್ನನುಸರಿಸಿ ಸದುದ್ದೇಶವನ್ನು ಪಡೆಯುವುದೂ ಅಸಾಧ್ಯ" ಈ ನಂಬುಗೆಯ ಮೂಲಕ ಶಾಂತಿ ಹಾಗೂ ಯೋಗ್ಯ ಉಪಾಯಗಳಿಂದಲೇ ಸ್ವರಾಜ್ಯವನ್ನು ಪಡೆಯಬೇಕೆಂದೂ,

ಹಿಂಸಾಮಾರ್ಗದಿಂದ ದೊರೆಯುವುದಾದರೆ ಅಂತಹ ಸ್ವರಾಜ್ಯ ನನಗೆ ಬೇಡವೆಂದೂ ಗಾಂಧೀಜಿಯವರು ಸ್ಪಷ್ಟವಾಗಿ ಸಾರಿದ್ದರು. ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಕಂಡುಬರುವ ದ್ವೇಷಮಯ ವಾತಾವರಣವನ್ನು ಕಂಡು ಅವರು ಮರುಗುತ್ತಿದ್ದರು. ರಾಷ್ಟ್ರಗಳು ಹಿಂಸಾತ್ಮಕ ಮಾರ್ಗವನ್ನವಲಂಬಿಸುವುದನ್ನು ಅವರು ಕಟುವಾಗಿ ಟೀಕಿಸಿದರು. ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳಲ್ಲಿ ಸತ್ಯ, ಅಹಿಂಸೆ ಹೇಗೆ ತಾರಕವೋ ಹಾಗೆಯೇ ರಾಷ್ಟ್ರ-ರಾಷ್ಟ್ರಗಳ ಸಂಬಂಧಗಳಲ್ಲಿಯೂ ಸತ್ಯ ಮತ್ತು ಅಹಿಂಸೆಯ ಮಾರ್ಗ ಶಾಂತಿ ಸ್ಥಾಪನೆಗೆ ಸಹಾಯಕವಾಗಬಲ್ಲದು. ವಿಶ್ವಶಾಂತಿ ಸ್ಥಾಪನೆಗೆ ಗಾಂಧೀಜಿ ಕಂಡ ಮಾರ್ಗ ಸತ್ಯ. ಸತ್ಯ ಅಹಿಂಸೆಯ ಮಾರ್ಗ ಒಂದೇ ಅಂತೆಯೇ ಅವರು ಜರ್ಮನಿಯ ವಿರುದ್ಧಹೋರಾಡುತ್ತಿದ್ದ ಬ್ರಿಟೀಷರಿಗೆ ತಮ್ಮ ಆಯುಧಗಳನ್ನು ತ್ಯಜಿಸಲು ಬೋಧಿಸಿದರು. ಜರ್ಮನರು ನಿಮ್ಮ ಸಂಪತ್ತನ್ನು ನಾಶ ಮಾಡಿದರೂ ಚಿಂತೆಯಿಲ್ಲ. ನಿಮ್ಮ ಆತ್ಮವನ್ನು ರಕ್ಷಿಸಿಕೊಳ್ಳಿರಿ ಎಂದರು. ಜಪಾನಿಯರು ಭಾರತದ ಬಾಗಿಲಲ್ಲಿ ಹೋರಾಟ ಮಾಡುತ್ತಿದಾಗ ಭಾರತವನ್ನು ರಕ್ಷಿಸುತ್ತಿದ್ದ ಬ್ರಿಟೀಷರಿಗೆ "ಭಾರತ ಬಿಟ್ಟು ತೊಲಗಿ" ಎಂದು ಘರ್ಜಿಸಿದರು. ಭಯಾನಕ ಯುದ್ಧವನ್ನು ಕೊನೆಗೊಳಿಸುವ ಸದುದ್ದೇಶದಿಂದ ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಅಣುಬಾಂಬನ್ನು ಹಾಕಿದ ವಾರ್ತೆಯನ್ನು ಕೇಳಿ ಗಾಂಧೀಜಿಯವರು ದಿಗ್ಮೂಢರಾದರು. ಆಗ ಅವರು ಮಾನವ ಜನಾಂಗವು ಅಹಿಂಸಾತ್ಮಕ ಮಾರ್ಗವನ್ನು ಅನುಸರಿಸದೇ ಹೋದರೆ ಆತ್ಮಹತ್ಯೆಯ ಮಾರ್ಗವನ್ನವಲಂಬಿಸಿದಂತೆಯೇ ಎಂದರು.

ಭಗವಂತನ ಪಿತೃತ್ವ ಮತ್ತು ಮಾನವನ ಭ್ರಾತೃತ್ವದಲ್ಲಿ ವಿಶ್ವಾಸ ಹೊಂದಿದ್ದ ಗಾಂಧೀಜಿಯವರು ಜಗಗತ್ತಿನಾದ್ಯಾಂತ ಮಾನವೀಯತೆಯ ತತ್ವವನ್ನು ಭ್ರಾತೃತ್ವವನ್ನು ಸಾರಿದರು. ರಾಷ್ಟ್ರಗಳು ಯುದ್ಧ ಮಾರ್ಗವನ್ನು ತ್ಯಜಿಸದ ಹೊರತು ಮಾನವ ಜನಾಂಗಕ್ಕೆ ಮೋಕ್ಷವಿಲ್ಲ. ಈ ತತ್ವದ ಆಧಾರದ ಮೇಲೆ ಇಲ್ಲಾ ರಾಷ್ಟ್ರಗಳ ವಿದೇಶನೀತಿಗಳು ರೂಪಿತವಾಗಬೇಕು. ಆಗಲೇ ವಿಶ್ವಶಾಂತಿ ಸಾಧ್ಯ. ಭಾರತದ ವಿದೇಶಾಂಗ ನೀತಿಯಲ್ಲಿಯೂ ಸಹ ಪಂಚಶೀಲಗಳನ್ನವಡಿಸಿಕೊಳ್ಳುವುದರ ಮೂಲಕ ಗಾಂಧಿ ತತ್ವಗಳಾದ ಶಾಂತಿಯುತ ಸಹಬಾಳ್ವೆ, ಪರಸ್ಪರ ಸಹನೆ ಮುಂತಾದವುಗಳ ಆಧಾರದ ಮೇಲೆ ಇತರ ರಾಷ್ಟ್ರಗಳೊಡನೆ ನಮ್ಮ ಸಂಬಂಧಗಳನ್ನು ಹೊಂದಬಯಸಿದ್ದೇವೆ.

ರಾಷ್ಟ್ರಗಳ ನಡುವೆ ಉದ್ಭವಿಸಬಹುದಾದ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಂಡು ವಿಶ್ವಶಾಂತಿಯನ್ನು ಸ್ಥಾಪಿಸಬಹುದು. ಗಾಂಧೀಜಿಯವರು ಅಂತರಾಷ್ಟ್ರೀಯ ಸಾಮರಸ್ಯ, ತಿಳುವಳಿಕೆ ಮತ್ತು ಜಾಗತಿಕ ಶಾಂತಿಯನ್ನು ಸತ್ಯ ,ಅಹಿಂಸೆ ಮತ್ತು ಸಹಕಾರ ಮಾರ್ಗದಿಂದಲೇ ಸಾಧಿಸಬಹುದೆಂಬ ನಿರಾಶಾವಾದಿಗಳಾಗಿರಲಿಲ್ಲ. ಜಾಗತಿಕ ಶಾಂತಿಯ ವಿಷಯದಲ್ಲಿಯೂ ಅವರು ಆಶಾವಾದಿಗಳಾಗಿದ್ದರು. ಅಂತೆಯೇ ವಿಶ್ವದ ಮಹಾನ್ ವ್ಯಕ್ತಿಗಳೆನಿಸಿಕೊಂಡಿರುವ ಬರ್ಟ್ರಾಂಡ್ ರಸೆಲ್, ಅರ್ನಾಲ್ಡ್ ಟೊಯೆನ್ಬಿ ಮುಂತಾದವರು ಗಾಂಧೀ ಮಾರ್ಗವನ್ನು ಅನುಮೋದಿಸುತ್ತಾರೆ. ಮಾನವ ಸಂಸ್ಕೃತಿಯನ್ನು ರಕ್ಷಿಸಬೇಕಾದರೆ ಸತ್ಯ, ಅಹಿಂಸೆಯ ಮಾರ್ಗವೇ ನಮಗೆ ಇರುವ ಆಶಾಕಿರಣ. ಇದೇ ಗಾಂಧೀಜಿಯವರು ಜಗತ್ತಿಗೆ ನೀಡಿದ ಕಾಣಿಕೆ.

ಗಾಂಧೀಜಿಯವರ ದೃಷ್ಟಿಯಲ್ಲಿ ಅಹಿಂಸೆಯೆಂದರೆ ಪ್ರೇಮವೆಂದೂ

ಅರ್ಥ. ಹಿಂಸೆ, ದ್ವೇಷ, ಅಸೂಯೆ ಇತ್ಯಾದಿಗಳನ್ನೆಲ್ಲ ತೊಡೆಯುವಂತಹ ಅಸ್ತ್ರವೇ ಸತ್ಯ, ಅಹಿಂಸೆ, ಪಕ್ಷಪಾತಿಯಾದವನು ಅಹಿಂಸೆಯನ್ನು ಎಂದೂ ಕೈಬಿಡಕೂಡದು. ಹಿಂಸೆಂದ-ಹಿಂಸೆಹುಟ್ಟಿತಲ್ಲದೇ ಶಾಂತಿ ಲಭಿಸದು ಶಾಂತಿಗಾಗಿ ಯುದ್ಧ ಎನ್ನುವುದು ವಿರೋಧಾಭಾಸ, ಆದುದರಿಂದ ಮಾನವನು ಸುಖ-ಶಾಂತಿಯಿಂದ ಬಾಳಬೇಕಾದರೆ ಸತ್ಯ, ಅಹಿಂಸೆಗಳು ಅತಿ ಮುಖ್ಯ.

ಸತ್ಯ, ಅಹಿಂಸೆಗಳು ವ್ಯವಹಾರ ಯೋಗ್ಯವಾದವುಗಳಲ್ಲ ಎಂದು ತಿಳಿಯಕೂಡದು. ಇವು ಬರಿಯ ವ್ಯವಹಾರ ಯೋಗ್ಯವಾದವುಗಳು ಮಾತ್ರವೇ ಅಲ್ಲ ಬಹು ಪರಿಣಾಮಕಾರಿಯಾದವುಗಳು ಹೌದು. ಇವುಗಳಲ್ಲಿ ಅಚಲವಾದ ಶ್ರದ್ಧೆ, ಇವುಗಳನ್ನು ಉಪಯೋಗಿಸುವಲ್ಲಿ ತಾಳ್ಮೆ ಹಾಗೂ ಎಚ್ಚರಿಕೆ ಇದ್ದರೆ ಇವು ಹೇಗೆ ವ್ಯವಹಾರ ಯೋಗ್ಯವೆಂಬುದು ತಿಳಿಯುತ್ತದೆ. ಸಮಾಜ ಕಲ್ಯಾಣ ಕ್ಷೇತ್ರದಲ್ಲಂತೂ ಹಿಂಸೆಗೆ ಎಳ್ಳಷ್ಟು ಸ್ಥಳವಿಲ್ಲ. ಅಲ್ಲಿ ಪ್ರೇಮ ಎಂದರೆ ಅಹಿಂಸೆಯೇ ಪ್ರಮುಖ ಆಯುಧವಾಗಿದೆ.

ಅಹಿಂಸೆಯೆಂಬುದು ಅಂಜುಗುಳಿಗಳ ಅಸ್ತ್ರವಲ್ಲ ಎಂದು ಗಾಂಧೀಜಿ ಪದೇ-ಪದೇ ಹೇಳುತ್ತಿದ್ದರು. ಕೇವಲ ಶೂರರಾದವರೇ ಅಹಿಂಸೆಯ ಅಸ್ತ್ರವನ್ನು ಹಿಡಿಯಬಲ್ಲರು. ಅಹಿಂಸಾವಾದಿಗೆ ಕ್ರಿಯಾ ಹಿಂಸೆಯಿಲ್ಲ. ಮನಸಾ ಹಿಂಸೆಯೂ ಇಲ್ಲ. ಅವನು ವಿಶ್ವಾತ್ಮ ಪ್ರೇಮಿ. ಸಕಲ ಜೀವಗಳಿಗೆ ಲೇಸನೇ ಬಯಸುವ ಶರಣ. ಸರ್ವಪ್ರೇಮಿ, ಸರ್ವತ್ರ, ಭಯ ವರ್ಜಿತ, ಸತ್ಯ, ಅಹಿಂಸೆ ಆದರ್ಶದ ಎರಡು ಭುಜಗಳಿದ್ದಂತೆ, ಅಹಿಂಸೆಯ ಬಗೆಗೆ ಗಾಂಧೀಜಿಯವರು ಹೀಗೆ ಹೇಳಿದರು ಅಹಿಂಸಾವಾದಿಗೆ ಭಯವಿಲ್ಲ. ಕ್ರೋಧವಿಲ್ಲ.

ಭಯೋತ್ಪಾದನೆ ಪ್ರಸ್ತುತ ರುದ್ರನರ್ತನ ಮಾಡುತ್ತಿರುವ ಇಂದಿನ ದಿನಮಾನದಲ್ಲಿ ಜಾಗತಿಕ ಮಟ್ಟದಲ್ಲಿ ಇದರ ವಿರುದ್ಧ ದನಿ ಕೇಳಿಸುತ್ತಿದೆ. ಅದು ಅಮೆರಿಕದಲ್ಲಿನ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಕಟ್ಟಡದ ಮೇಲೆ ನಡೆದ ಅತ್ಯಂತ ಭೀಕರ ದಾಳಿಯಿರಬಹುದು. ಇಲ್ಲವೇ ಕಾಶ್ಮೀರ ಕಣಿವೆಯಲ್ಲಿ ದೈನಂದಿನ ದೃಶ್ಯವಾಗುತ್ತಿರುವ ಮಾರಣಹೋಮವಾಗಿರಬಹುದು. ದೆಹಲಿಯ ಉಚ್ಚನ್ಯಾಲಯದ ಸಮೀಪ ನಡೆದಂತಹ ಇತ್ತಿಚಿನ ಭೀಕರ ಸ್ಫೋಟ ಇವುಗಳು ದೇಶದ ಭದ್ರತೆಯನ್ನು, ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಹಾಳು ಗೆಡುವುವಂತವುಗಳಾಗಿವೆ. ಇವುಗಳಿಗೆಲ್ಲಾ ಮಾರ್ಗ ಎಂದರೆ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆ.

* * *

ಬಹುಗುಣ ತಮ್ಮ ಜೀವನ ಸಂಗಾತಿ ಪಡೆದರು

– ಮೂಲ : ಜಾರ್ಜ್ ಆಲ್‌ಫ್ರೆಡ್ ಜೇಮ್ಸ್ – ಕನ್ನಡಕ್ಕೆ : ಸುರೇಂದ್ರ ಕೌಲಗಿ

ತೆಹರಿಯಲ್ಲಿ ಪ್ರಜಾಮಂಡಲದ ಕೆಲಸದೊಂದಿಗಿನ ಸಂಬಂಧದ ಕಾರಣದಿಂದ ಸುಂದರಲಾಲರು ಆಗತಾನೆ ಹೊರಹೊಮ್ಮುತ್ತಿದ್ದ ಕಾಂಗ್ರೆಸ್ ಪಕ್ಷದ ಸಂಪರ್ಕಕ್ಕೆ ಬಂದರು. ರಾಜಕೀಯ ಕ್ಷೇತ್ರದಲ್ಲಿ ಸುಂದರಲಾಲರ ಬಗ್ಗೆ ಅನೇಕರು ಆಶಾದಾಯಕ ಅಪೇಕ್ಷೆಗಳನ್ನು ಇಟ್ಟುಕೊಂಡಿದ್ದರು. ಆದರೆ ಪ್ರಜಾಮಂಡಲದ ಕಾರ್ಯದರ್ಶಿಯಾಗಿ ಎಂಟು ವರ್ಷ ಕೆಲಸ ಮಾಡಿದ್ದರ ಅನುಭವ ಬಹುಗುಣರಿಗೆ ಬೇರೆತೆರನದ್ದಾಗಿತ್ತು. ಅವರಿಗೆ ಪಕ್ಷ ರಾಜಕೀಯ ಗಾಂಧೀಯವರು ಬಯಸಿದ್ದ ಸಮಾಜವನ್ನು ನಿರ್ಮಿಸಬಹುದೆಂಬ ಬಗ್ಗೆ ಮನವರಿಕೆಯಾಗಿರಲಿಲ್ಲ. ಪರ್ವತ ಪ್ರದೇಶದಲ್ಲಿರುವ ಜನಸಮುದಾಯಕ್ಕೆ ಸ್ಥಾನೀಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಬಹುಗುಣರು ಗಾಂಧೀಯವರ ರಚನಾತ್ಮಕ ಕೆಲಸವನ್ನು ಹಾಗೂ ಸಾಮಾಜಿಕ ಸುಧಾರಣೆಯ ಸಂದೇಶವನ್ನು ಪ್ರಚಾರಮಾಡುವುದಕ್ಕಾಗಿ ಸಭೆಗಳನ್ನು ಆಯೋಜಿಸಲು ಪ್ರಾರಂಭಿಸಿದರು. ಇದರ ಇನ್ನೊಂದು ಉದ್ದೇಶ ಈ ಕೆಲಸಕ್ಕಾಗಿ ಹೆಚ್ಚು ಯುವಕರನ್ನು ಆಕರ್ಷಿಸುವುದಾಗಿತ್ತು. ಹೀಗೆ ಕೆಲಸಮಾಡುತ್ತಿರುವಾಗಲೆ ಅವರು ತಮ್ಮ ಭಾವಿ ಪತ್ನಿ ವಿಮಲಾ ನೌತಿಯಾಲ್ ಎಂಬ ೨೩ ವರ್ಷದ ತರುಣಿಯನ್ನು ಭೇಟಿಯಾದರು. ಆಗ ವಿಮಲಾರವರು ಗಾಂಧೀಯವರ ಸುಪ್ರಸಿದ್ಧ ಐರೋಪ್ಯ ಶಿಷ್ಯೆ ಸರಳಾ ಬೆಹನ್‌ರ ಮಾರ್ಗದರ್ಶನದಲ್ಲಿ ಪರ್ವತ ಪ್ರದೇಶದಲ್ಲಿ ಕೆಲಸಮಾಡುತ್ತಿದ್ದರು. ವಿಮಲಾರವರ ಜೀವನದ ಮೇಲೆ ಸರಳಾ ಬೆಹನ್‌ರ ಗಾಢ ಪ್ರಭಾವ ಉಂಟಾಗಿತ್ತು. ವಿಮಲಾರವರಲ್ಲಿ ಉಂಟಾದ ಈ ಪ್ರಬಾವ ಸುಂದರಲಾಲರ ಮೇಲೆಯೂ ಆಯಿತು. ಸುಂದರಲಾಲರ ಜೀವನದಲ್ಲಿ ಒಂದು ನಿರ್ಣಾಯಕ ಬದಲಾವಣೆ ಆಗುವುದರಲ್ಲಿತ್ತು. ಸರಳಾ ಬೆಹನ್ ಇಂಗ್ಲೆಂಡಿನಿಂದ ಬಂದಿದ್ದರು. ಅವರ ಉದ್ದೇಶವೂ ಕೂಡ ಮೀರಾ ಬೆಹನ್‌ರಂತೆ ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧೀಯವರೊಂದಿಗೆ ಕೆಲಸಮಾಡುವುದಾಗಿತ್ತು. ಆದರೆ ಸರಳಾ ಬೆಹನ್‌ರ ಜೀವನದ ಹಿನ್ನೆಲೆ ಮೀರಾ ಬೆಹನ್‌ರ ಜೀವನಕ್ಕಿಂತ ಭಿನ್ನವಾಗಿತ್ತೆಂದು ಸುಂದರಲಾಲ್ ವಿವರಿಸುತ್ತಾರೆ. ಮೀರಾ ಬೆಹನ್ ಶ್ರೀಮಂತ ಕುಟುಂಬದಿಂದ ಬಂದವರಾಗಿದ್ದರೆ ಸರಳಾ ಬೆಹನ್ ಸಾಮಾನ್ಯ ಮಹಿಳೆಯಾಗಿದ್ದರು. ಅವರು ೧೯೦೧ರಲ್ಲಿ ಗುಡ್ ಫ್ರೈಡೇ ದಿನ ಲಂಡನ್ ನಗರದಲ್ಲಿ ಜನಿಸಿದರು. ಅವರಿಗೆ ಕೆತರಿನ್ ಮೇರಿ ಹಿಲ್‌ಮನ್ ಎಂದು ನಾಮಕರಣ ಮಾಡಲಾಯಿತು. ಅವರು ತಮ್ಮ ಆತ್ಮಚರಿತ್ರೆಯಲ್ಲಿ ತಿಳಿಸಿದಂತೆ ಅವರ ತಾಯಿ ಬ್ರಿಟಿಷ್‌ಳವಳಾಗಿದ್ದರೆ ಅವಳ ಅಜ್ಜಿ ಜರ್ಮನ್ ದೇಶದವರಾಗಿದ್ದರು. ಅವರ ತಂದೆ ಸ್ವಿಟ್ಸರ್‌ಲ್ಯಾಂಡ್‌ನಲ್ಲಿ ಹುಟ್ಟಿ ಫ್ರಾನ್ಸ್ ಮೂಲಕ ಇಂಗ್ಲೆಂಡಿಗೆ ವಲಸೆ ಬಂದಿದ್ದರು. ಈ ಕಾರಣದಿಂದಾಗಿ ಅವರು ಯಾವುದೇ ಒಂದು ನಿರ್ದಿಷ್ಟ ಸಮುದಾಯದೊಂದಿಗೆ

ತಾದ್ಯಾತ್ಮ ಭಾವನೆಯಿಂದ ಬೆಳೆಯಲಿಲ್ಲ. ಅಂತೆಯೇ ಯಾವುದೇ ದೇಶದೊಂದಿಗೆ ದೃಢವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬದಲಿಗೆ ಅವರು ಏಸುವಿನ ಬೋಧನೆಗಳಿಂದ ಬಹಳಷ್ಟು ಪ್ರಭಾವಿತರಾದರು. ಮುಖ್ಯವಾಗಿ ಏಸುವಿನ ಪ್ರೀತಿ ಮತ್ತು ಕರುಣೆ, ಅಹಿಂಸೆ ಮತ್ತು ನಿರ್ವೈರ ಬೋಧನೆಗಳಿಂದ ಪ್ರಭಾವಿತರಾದರು. ಮೊದಲನೇ ಮಹಾಯುದ್ಧ ಸಂದರ್ಭದಲ್ಲಿ ತನ್ನ ಹಳ್ಳಿಯ ಧರ್ಮದ ಗುರುಗಳು ಶತ್ರುಗಳ ಮೇಲೆ ಜಯಸಾಧಿಸುವಂತೆ ದೇವರಲ್ಲಿ ಪ್ರಾರ್ಥನೆಮಾಡುತ್ತಿದ್ದುದು ಅದೇ ಕಾರಣಕ್ಕಾಗಿ ಶತ್ರುಬಣದಲ್ಲಿಯ ಧಾರ್ಮಿಕ ಗುರುಗಳು ಕೂಡ ಪ್ರಾರ್ಥಿಸುತ್ತಿದ್ದುದನ್ನು ನೋಡಿ ಅವರು ಭ್ರಮಿತರಾದರು. ಓರ್ವ ಯುವತಿಯಾಗಿ ಆ ಪ್ರಕಾರದ ಕಿರಿಕಿರಿ ಉಂಟುಮಾಡುವ ಮನೋಭಾವದಿಂದ ಅವರಿಗೆ ಬೇಸರವಾಯಿತು. ಆದ್ದರಿಂದ ಅಂತಿಮವಾಗಿ ಬೇರೊಂದು ಸಮುದಾಯವನ್ನು ಸೇರಿಕೊಂಡರು. ಆ ಸಮುದಾಯದಲ್ಲಿ ವಿವಿಧ ಬಗೆಯ ಹಿನ್ನೆಲೆಯ ಜನರು ಒಟ್ಟಿಗೆ ವಾಸಿಸುತ್ತಿದ್ದರು. ಅಲ್ಲಿ ಸರಳಾರವರು ಭಾರತದಿಂದ ಬಂದಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಭೇಟಿಮಾಡಿದರು. ಆ ವಿದ್ಯಾರ್ಥಿಗಳು ಸರಳಾರ ಮೇಲೆ ಸದ್‌ಪ್ರಭಾವನ್ನು ಬೀರಿದರು. ಅವರ ಮೂಲಕ ಭಾರತ ದೇಶದ ಬಗ್ಗೆ ಅದರ ಇತಿಹಾಸ ಮತ್ತು ಸಂಸ್ಕೃತಿ ಹಾಗೂ ಅದರ ಸ್ವಾತಂತ್ರ್ಯ ಚಳವಳಿಯ ಬಗ್ಗೆ ತಿಳಿದುಕೊಳ್ಳಲಾರಂಭಿಸಿದರು. ಅಲ್ಲದೇ ಅವರು ರಾಜಾರಾಮ್ ಮೋಹನ್‌ರಾಯ್, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಗೋರ್ ಮತ್ತು ಗಾಂಧೀಯವರಂಥ ವ್ಯಕ್ತಿಗಳ ಸಾಹಿತ್ಯವನ್ನು ಓದಿದರು. ಒಂದು ದಿನ 'ಸರಿಯಾ' ಕಾಡಿನಲ್ಲಿ ಓಡಾಡಿಕೊಂಡಿರುವಾಗ ತಾನು ಭಾರತಕ್ಕೆ ಹೋಗಬೇಕೆಂಬ ವಿಚಾರ ಅವರಿಗೆ ಬಂದಿತು. ಸ್ವಲ್ಪ ಆತ್ಮಾವಲೋಕನ ಮಾಡಿಕೊಂಡ ನಂತರ ಗಾಂಧೀಯವರಿಗೆ ಪತ್ರ ಬರೆದರು. ಗಾಂಧೀಯವರ ಸಹವರ್ತಿ ಒಬ್ಬರಿಂದ ಉತ್ತರ ಬಂದಿತು. ಅನೇಕ ಜನರು ಗಾಂಧೀಯವರ ಆಶ್ರಮಕ್ಕೆ ಬರುತ್ತಾರಾದರೂ ಅವರು ಅಲ್ಲಿಯ ಕಠಿಣ ಜೀವನ ವಿಧಾನಗಳೊಂದಿಗೆ ಹೊಂದಿಕೊಳ್ಳಲು ಅಸಮರ್ಥರಾಗಿ ಬೇರೆಯವರಿಗೆ ಸಮಸ್ಯೆಯಾಗುತ್ತಾರೆಂದು ಆ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಅವರು ಬರಕೂಡದೆಂಬ ಸಲಹೆ ಗಾಂಧೀಜಿಯವರದಾಗಿತ್ತು. ಆನಂತರ ಇತರ ಪ್ರಮುಖ ನಾಯಕರಿಗೆ ಪತ್ರ ಬರೆದರು. ಅವರಿಂದ ಸಹ ಅದೇ ಪ್ರಕಾರದ ಉತ್ತರಗಳು ಬಂದವು. ಆಗ ಸರಳಾರವರು ತಾವು ಯಾವುದಾದರೊಂದು ಉಪಯುಕ್ತಕರವಾದ ನೈಪುಣ್ಯತೆಯನ್ನು ಪಡೆಯಬೇಕೆಂದು ತೀರ್ಮಾನಿಸಿದರು. ನರ್ಸ್ ಕೆಲಸದಲ್ಲಿ ಪ್ರಶಿಕ್ಷಣ ಪಡೆದರು. ಅಲ್ಲದೆ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಮನಃಶಾಸ್ತ್ರದಲ್ಲಿ ಅಧ್ಯಯನ ಮಾಡಿದರು. ಅಂತಿಮವಾಗಿ ರಾಜಸ್ತಾನದಲ್ಲಿಯ ಉದಯಪುರ ಗ್ರಾಮದ ಮೋಹನ್‌ಸಿಂಗ್ ಎಂಬುವವರಿಂದ ಒಂದು ಪತ್ರವನ್ನು ಸರಳಾರವರು ಪಡೆದರು. ಅವರು ತಮ್ಮ ಹೊಸ ಮತ್ತು ಕ್ರಾಂತಿಕಾರಿ ಶಾಲೆಯಲ್ಲಿ ತನ್ನೊಂದಿಗೆ ಕೆಲಸಮಾಡಲು ಆ ಪತ್ರದಲ್ಲಿ ಆಹ್ವಾನಿಸಿದ್ದರು. ತಮಗೆ ಶಿಕ್ಷಣ ಕ್ಷೇತ್ರದಲ್ಲಿ ಅನುಭವವಿಲ್ಲವೆಂದು ಸರಳಾರವರು ಮೋಹನ್‌ಸಿಂಗ್‌ರಿಗೆ ತಿಳಿಸಿದರು. ಆದರೆ ಅವರ ನೈಪುಣ್ಯತೆಗಳು ತಮಗೆ ಅಗತ್ಯವಿದೆಯೆಂದು ಮೋಹನ್‌ಸಿಂಗ್ ಪ್ರತಿಯಾಗಿ ಉತ್ತರ ಬರೆದರು. ಬಹಳ ಕಷ್ಟದಿಂದ ವೀಸಾ ಪಡೆದು ೧೯೩೨ರಲ್ಲಿ ಲಿವರ್‌ಪೂಲ್‌ನಿಂದ ಭಾರತಕ್ಕೆ ಹಡಗಿನಲ್ಲಿ

ಪ್ರಯಾಣ ಹೊರಟರು. ಉದಯಪುರದಲ್ಲಿ ಅವರನ್ನು ಜನ ಸರಳಾ ಬೆಹನ್ ಅಥವಾ ಸರಳಾದೇವಿ ಎಂದು ಕರೆಯಲಾರಂಭಿಸಿದರು. ಮೋಹನ್‌ಸಿಂಗ್‌ರವರ ಜೊತೆ ಕೆಲಸಮಾಡುತ್ತಿದ್ದಾಗ ಸರಳಾರವರು ನಾಗಪುರ ಬಳಿಯ ವಾರ್ಧಾದಲ್ಲಿಯ ಶೈಕ್ಷಣಿಕ ಸಂಸ್ಥೆಯೊಂದರಲ್ಲಿ ಹೆಣ್ಣುಮಕ್ಕಳು ತೊಡಗಿರುವ ಬಗ್ಗೆ ಗೊತ್ತಾಯಿತು. ಆದ್ದರಿಂದ ೧೯೩೨ ಅಕ್ಟೋಬರ್‌ನಲ್ಲಿ ಶಾಲೆಗೆ ರಜೆ ಇದ್ದಾಗ ಈ ಸ್ಥಳಕ್ಕೆ ಭೇಟಿ ಕೊಡಲು ಸರಳಾ ತೀರ್ಮಾನಿಸಿದರು. ತಾವು ಬರುವುದನ್ನು ತಿಳಿಸಿ ಆ ಸಂಸ್ಥೆಗೆ ಬರೆದಿದ್ದ ಕಾಗದಕ್ಕೆ ಉತ್ತರ ಬರದೆ ಇದ್ದುದರಿಂದ ಅವರೊಂದು ತಂತಿ ಕಳುಹಿಸಿ ಅಲ್ಲಿಗೆ ಹೋದರು. ವಾರ್ಧಾ ನಿಲ್ದಾಣವನ್ನು ತಲುಪಿದಾಗ ಅ ಸಂಸ್ಥೆಯ ಕಾರ್ಯಕರ್ತರೊಬ್ಬರು ಅವರನ್ನು ಕರೆದುಕೊಂಡು ಹೋಗಲು ಬಂದಿರುವುದನ್ನು ನೋಡಿ ಸರಳಾರವರಿಗೆ ತುಂಬಾ ಸಂತೋಷವಾಯಿತು.

ದುಂಡು ಮೇಜಿನ ಪರಿಷತ್‌ಗಾಗಿ ಗಾಂಧೀ ಲಂಡನ್‌ಗೆ ಹೋದಾಗ ಅವರನ್ನು ನೋಡಲು ಸರಳಾ ಬೆಹನ್‌ರವರಿಗೆ ಸಾಧ್ಯವಾಗಿರಲಿಲ್ಲ. ಅದೇ ರೀತಿ ಗಾಂಧೀ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಮುಂಬಯಿಗೆ ಬಂದಿದ್ದಾಗ ನೋಡಲು ಸಾಧ್ಯವಾಗಿರಲಿಲ್ಲ. ಈಗ ವಾರ್ಧಾ ಬಳಿ ಇರುವ ಗಾಂಧೀಯವರ ಆಶ್ರಮಕ್ಕೆ ಸರಳಾ ಬೆಹನ್ ಇಷ್ಟರಲ್ಲಿಯೇ ಭೇಟಿ ಕೊಡುವ ಸಂಭವ ಒದಗಿ ಬಂತು. ಯಾರ ಆದರ್ಶಗಳ ಪ್ರೇರಣೆಯಿಂದ ಭಾರತಕ್ಕೆ ಪಯಣಿಸಲು ಕಾರಣವಾಗಿತ್ತೋ ಅಂಥ ವ್ಯಕ್ತಿಯನ್ನು ಮುಖತಃ ಭೇಟಿ ಮಾಡುವ ಅವಕಾಶ ಸಿಗುತ್ತದೆಂಬ ಕಲ್ಪನೆ ಅವರಿಗೆ ಇರಲಿಲ್ಲ. ಆದರೆ ಗಾಂಧೀ ಸರಳಾ ಬೆಹನ್‌ರವರ ತಂತಿಯನ್ನು ಓದಿದ್ದರು. ಅಲ್ಲದೇ ಅವರನ್ನು ಭೇಟಿ ಮಾಡಲು ಕಾಯುತ್ತಿದ್ದರು. ಗಾಂಧೀಯೊಂದಿಗಿನ ಅವರ ಭೇಟಿ ಸರಳಾರವರ ಜೀವನದಲ್ಲಿ ಒಂದು ಮಹತ್ವದ ಬದಲಾವಣೆ ತರುವಂಥದ್ದಾಗಿತ್ತು. ಅವರು ಆಶ್ರಮ ಜೀವನದ ಎಲ್ಲ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ಮುಖ್ಯವಾಗಿ ಗಾಂಧೀಯವರ ರಚನಾತ್ಮಕ ಕಾರ್ಯಕ್ರಮ. ಆದರೆ ಅವರಿಗೆ ವಾರ್ಧಾದಲ್ಲಿಯ ಬೇಸಿಗೆಯ ಬಿಸಿಲನ್ನು ಸಹಿಸುವುದು ಕಷ್ಟವಾಯಿತು. ಅದರಿಂದಾಗಿ ಆರೋಗ್ಯ ಕೆಟ್ಟಿತು. ಗಾಂಧೀಯವರಿಗೆ ಸರಳಾ ಬೆಹನ್‌ರ ಆರೋಗ್ಯದ ಬಗ್ಗೆ ಚಿಂತೆಯಾಯಿತು. ತಮ್ಮ ಕೆಲಸಕ್ಕಾಗಿ ಸೂಕ್ತ ಹವಾಮಾನ ಇರುವಂಥ ಸ್ಥಳ ಪರ್ವತದ ತಪ್ಪಲು ಪ್ರದೇಶ ಎಂದು ಸರಳಾ ಬೆಹನ್ ಅಂದುಕೊಂಡರು. ಆದ್ದರಿಂದ ಅವರು ತಮ್ಮ ಆರೋಗ್ಯದ ವಿಷಯದಲ್ಲಿ ಸಮಸ್ಯೆಯಾಗದಂಥ ಸ್ಥಳವನ್ನು ಹುಡುಕಲು ಪ್ರಾರಂಭಿಸಿದರು. ಸುಮಾರು ಆರು ಸಾವಿರ ಅಡಿ ಎತ್ತರದಲ್ಲಿರುವ ಕುಮೇನ್ ಬೆಟ್ಟ ಪ್ರದೇಶದಲ್ಲಿ ಹಲ್ಲೇಮಾರ ಬಳಿ ಇರುವ ಸುಂದರ ಕೌಸಾನಿ ಊರನ್ನು ಅವರು ಪತ್ತೆ ಹಚ್ಚಿದರು. ಪರ್ವತ ಪ್ರದೇಶಗಳಲ್ಲಿಯ ಮಕ್ಕಳ ಜೀವನ ಮತ್ತು ಅವರ ಕೆಲಸಗಳ ಸಂಬಂಧಿತವಾದ ಸಮಸ್ಯೆಗಳನ್ನೂ ಅವರು ಅರಿತುಕೊಂಡರು. ಗಾಂಧೀಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ಮುಖ್ಯವಾದ ಕಾರ್ಯಕ್ರಮ ಮಕ್ಕಳ ಶಿಕ್ಷಣವೂ ಒಂದಾಗಿತ್ತು. ಆದರೆ ಪರ್ವತ ಪ್ರದೇಶದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ ಅದರಲ್ಲಿಯೂ ಹುಡುಗಿಯರಿಗೆ ತುಂಬ ಕಡಿಮೆ ಅವಕಾಶ ಇದೆ ಎಂದು ಸರಳಾ ಬೆಹನ್‌ರಿಗೆ ಗೊತ್ತಾಯಿತು. ಗಾಂಧೀಯವರ ಜೀವನ ಶಿಕ್ಷಣದ ಕಲ್ಪನೆಯಂತೆ

ಹುಡುಗಿಯರಿಗೆ ಕಲಿಸಬೇಕೆಂಬುದು ಅವರ ಉದ್ದೇಶ್ಯವಾಗಿತ್ತು. ಈ ಮಧ್ಯೆ ಅವರು ಕಾರಾಗೃಹವಾಸ ಅನುಭವಿಸಿದ್ದ ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಭೇಟಿ ಮಾಡಿ ಅವರಿಗೆ ತಮ್ಮ ಬೆಂಬಲ ಸೂಚಿಸಿದರು. ಸ್ವಾತಂತ್ರ್ಯ ಆಂದೋಲನವನ್ನು ಇವರು ಬೆಂಬಲಿಸುತ್ತಿದ್ದಾರೆ ಎಂಬ ವಿಷಯ ತಿಳಿದು ಪೋಲೀಸರು ಸರಳಾ ಬೆಹನ್‌ರನ್ನು ಓರ್ವ ಅಪಾಯಕಾರಿ ಮನುಷ್ಯಳೆಂದು ಭಾವಿಸಿದರು. ಆದ್ದರಿಂದ ಸಂಸ್ಥೆ ಕಟ್ಟಬೇಕೆಂಬ ಅವರ ವಿಚಾರ ಮುಂದುವರಿಯುವ ಮೊದಲೇ ಸ್ಥಳೀಯ ಅಧಿಕಾರಿಗಳು ಅವರನ್ನು ಗೃಹ ಬಂಧನಕ್ಕೆ ಒಳಪಡಿಸಿದರು. ಆದರೆ ಅವರು ಅದನ್ನು ನಿರಾಕರಿಸಿ ತಮ್ಮ ಕಾರ್ಯಕ್ರಮಗಳನ್ನು ಎಂದಿನಂತೆ ನಡೆಸಿಕೊಂಡು ಹೋಗುವುದಾಗಿ ಘೋಷಿಸಿದರು. ಗೃಹಬಂಧನವನ್ನು ಉಲ್ಲಂಘಿಸಿದ್ದಕ್ಕಾಗಿ ಅಧಿಕಾರಗಳು ಅವರಿಗೆ ಅಲ್ಪಾವಧಿ ಶಿಕ್ಷೆಯನ್ನು ವಿಧಿಸಿ, ಜೈಲಿಗೆ ಕಳುಹಿಸಿದರು. ಭಾರತೀಯ ಸ್ವಾತಂತ್ರ್ಯ ಚಟುವಟಿಕೆಗಳಿಗಾಗಿ ಓರ್ವ ಇಂಗ್ಲಿಷ್ ಮಹಿಳೆ ಬಂಧಿತವಾದದ್ದು ಭಾರತೀಯ ಜೈಲ್ ಮುಖ್ಯಸ್ಥರ ಮೇಲೆ ವಿಶೇಷ ಪ್ರಭಾವವನ್ನು ಬೀರಿತು. ಕಾರಾಗೃಹದಲ್ಲಿ ಕೂಡ ಅವರು ಅನೇಕ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಪರಿಚಿತರಾದರು.

ಅವರ ಬಿಡುಗಡೆಯ ನಂತರ ಯಾವುದೇ ನಿರ್ಬಂಧವಿಲ್ಲದೆ ತಮ್ಮ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬಹುದೆಂದು ಅಧಿಕಾರಿಗಳು ತಿಳಿಸಿದರು. ಈ ಭರವಸೆಯ ಆದಾರದ ಮೇಲೆ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತಾವು ಕಟ್ಟಬೇಕೆಂದಿದ್ದ ಸಂಸ್ಥೆಯ ಯೋಜನೆಗಳನ್ನು ಮುಂದುವರಿಸಿದರು. ೧೯೪೮ರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಅಕ್ಕ-ತಂಗಿಯರು ಮತ್ತು ಮಕ್ಕಳನ್ನು ಹೊಂದಿದ ಆರು ಜನ ವಿದ್ಯಾರ್ಥಿನಿಯರಿಂದ ಸಂಸ್ಥೆ ಪ್ರಾರಂಭವಾಯಿತು. ಅವರು ಅದನ್ನು ಲಕ್ಷ್ಮೀ ಆಶ್ರಮ ಎಂದು ಕರೆದರು. ಗಾಂಧೀಯವರ ಶಿಕ್ಷಣ ವಿಚಾರ ಬ್ರಿಟಿಷರು ಜಾರಿಗೆ ತಂದಿದ್ದ ಶೈಕ್ಷಣಿಕ ಪದ್ಧತಿಗೆ ತೀರ ಭಿನ್ನವಾಗಿವಾಗಿತ್ತು. ಗಾಂಧೀಯವರ ಪ್ರಕಾರ ನಗರಗಳಲ್ಲಿ ಅಥವಾ ಗ್ರಾಮಗಳಲ್ಲಿ ಇರುವ ಮಕ್ಕಳನ್ನು ಭಾರತದ ಅತ್ಯುತ್ತಮವಾದ ಮತ್ತು ಬಹುಕಾಲ ಉಳಿಯುವಂಥ ವಿಚಾರದೊಂದಿಗೆ ಜೋಡಿಸುವುದಾಗಿತ್ತು. ಆ ಶಿಕ್ಷಣ ಶರೀರವನ್ನು ಶಾರೀರಿಕ ಮತ್ತು ಮಾನಸಿಕ ಅಭಿವೃದ್ಧಿಯೊಂದಿಗೆ ಮಗುವಿನ ಸಂಸ್ಕಾರ ಸ್ಥಳೀಯ ಮಣ್ಣಿನೊಂದಿಗೆ ಆಳವಾಗಿ ಹೋಗುತ್ತದೆ ಮತ್ತು ಶಾಲಾ ಜೀವನ ಪ್ರಾರಂಭವಾಗುತ್ತಿದ್ದಂತೆಯೇ ಉಜ್ವಲ ಭವಿಷ್ಯದ ಸಾಕಾರಕ್ಕಾಗಿ ತನ್ನ ಪಾತ್ರವನ್ನು ನಿಭಾಯಿಸಲು ಪ್ರಾರಂಭಿಸುತ್ತದೆ. ಅಂದರೆ ಗ್ರಾಮೀಣ ಮಕ್ಕಳನ್ನು ಆದರ್ಶ ಗ್ರಾಮಸ್ಥರನ್ನಾಗಿ ಮಾಡುವುದು. ಆ ಶಿಕ್ಷಣ ಮಕ್ಕಳಿಗಾಗಿಯೇ ರಚಿತವಾದದ್ದು. ಅಂಥ ಶಿಕ್ಷಣಕ್ಕಾಗಿ ಅಗತ್ಯವಾದ ಪ್ರೇರಣೆ ಹಳ್ಳಿಗಳಿಂದಲೇ ಬರಬೇಕೆಂಬುದಾಗಿ ಮತ್ತು ಅಂಥ ಶಿಕ್ಷಣದ ಲಾಭ ಗ್ರಾಮಗಳಿಗೆ ಲಾಭತರವಾದುದೆಂದು ಗಾಂಧೀ ಭಾವಿಸಿದ್ದರು. ತಮ್ಮದೇನೂ ಪಾತ್ರವಿಲ್ಲದೆ ಇರುವ ರೂಢಿಗಳು ಮತ್ತು ಕಾನೂನುಗಳ ಕಾರಣದಿಂದಾಗಿ ಭಾರತದಲ್ಲಿ ಸ್ತ್ರೀಯರು ದಮನಕ್ಕೆ ಒಳಗಾಗಿದ್ದಾರೆ ಎಂದು ಗಾಂಧೀ ಅಭಿಪ್ರಾಯಪಟ್ಟಿದ್ದರು. ಅಹಿಂಸೆಯಾಧಾರಿತ ಸರಳ ಜೀವನ ಪದ್ಧತಿಯಲ್ಲಿ ಪುರಷನಷ್ಟೇ ಮಹಿಳೆಗೂ ಕೂಡ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ಅವಕಾಶ ಇದೆ ಎಂಬುದು ಗಾಂಧೀಯವರ ವಿಚಾರವಾಗಿತ್ತು. ಈ ವಿಚಾರಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ

ಸರಳಾ ಬೆಹನ್ ಶೈಕ್ಷಣಿಕ ಕಲಿಕೆಯ ಜೊತೆಗೆ ವ್ಯಾವಹಾರಿಕ ತಿಳುವಳಿಕೆಯನ್ನು ಜೋಡಿಸಿಲ್ಪಟ್ಟ ಒಂದು ಶಿಕ್ಷಣ ಪದ್ಧತಿಯನ್ನು ಅಭಿವೃದ್ಧಿ ಪಡಿಸಿದರು. ಈ ಪ್ರಕಾರದ ಶಿಕ್ಷಣದಿಂದ ಒಂದು ಮುಕ್ತ ಸಮಾಜದ ಸ್ಥಾಪನೆ ನೆರವೇರುವಂತೆ ಮಾಡಲು ಮಹಿಳೆಯರಿಗೆ ಸಾಮರ್ಥ್ಯ ಬರುತ್ತದೆ. ಸರಳಾ ಬೆಹನ್ ರೂಪಿಸಿದ್ದ ಶಿಕ್ಷಣ ಪದ್ಧತಿ ಓದು ಬರಹದ ಜೊತೆಗೆ ಬಟ್ಟೆಯ ಉತ್ಪಾದನೆಗಾಗಿ ಅಗತ್ಯವಾದ ನೂಲುಗಾರಿಕೆ ಮತ್ತು ನೇಯ್ಗೆ ಒಳಗೊಂಡಿತ್ತಲ್ಲದೆ ಕೃಷಿ ಮತ್ತು ಗೋಸಂವರ್ಧನೆ ಕೂಡ ಒಳಗೊಂಡಿತ್ತು. ಇದರಿಂದಾಗಿ ಶಾಲಾ ವಿದ್ಯಾರ್ಥಿಗಳು ಬಿಡುವಿನ ಸಮಯದ ನಂತರ ಹಳ್ಳಿಗಳಿಗೆ ಹಿಂದಿರುಗುವ ಹುಡುಗಿಯರು ಆಹಾರ, ಬಟ್ಟೆ ಮತ್ತು ಆಶ್ರಮದ ವಿಷಯದಲ್ಲಿ ಸ್ವಾವಲಂಬಿತರಾಗುವಂತೆ ಮಾಡುತ್ತಿತ್ತು. ಸರಳಾ ಬೆಹನ್‌ರವರ ಈ ಶಿಕ್ಷಣ ಪದ್ಧತಿ ಬಗ್ಗೆ ಸುಂದರಲಾಲ್ ಅದೊಂದು ವಿದ್ಯಾರ್ಥಿಯ ಬುದ್ಧಿ, ಹೃದಯ ಮತ್ತು ಕೈಸಾಮರ್ಥ್ಯದ ಜೋಡಣೆಯಾಗಿತ್ತೆಂದು ಹೇಳುತ್ತಾರೆ. ಅಲ್ಲದೇ ಲಕ್ಷ್ಮೀ ಆಶ್ರಮ ಸ್ವಾವಲಂಬಿತವಾಗಿ ಸ್ಥಾನೀಯವಾಗಿಯೇ ನಿರ್ವಹಿತಗೊಳ್ಳುವುದು. ಅದರಿಂದಾಗಿ ತಮಗೆ ಬೇರೆ ಕಡೆಗೆ ಹೋಗಲು ಮತ್ತು ಕೆಲಸ ಮಾಡಲು ಅವಕಾಶವನ್ನು ಮಾಡಿಕೊಡುವುದೆಂದು ಸರಳಾ ಬೆಹನ್‌ರ ಚಿಂತನೆಯಾಗಿತ್ತು. ಅವರ ಶೈಕ್ಷಣಿಕ ಕಾರ್ಯಕ್ರಮ ಪ್ರಸಾರಾತ್ಮಕವಾಗಿಯೂ ಇತ್ತು. ಅವರು ವಿದ್ಯಾರ್ಥಿಗಳನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಕ್ಯಾಂಪ್‌ಫಯರ್, ಜನಪದ ಗೀತೆಗಳು ಮತ್ತು ನಾಟಕಗಳ ಮೂಲಕ ಶಿಕ್ಷಣ ಕೊಡುತ್ತಿದ್ದರು. ಇವೆಲ್ಲವೂ ಮಹಿಳೆಯರ ವಿಷಯವಾಗಿರುತ್ತಿದ್ದವು. ಮುಖ್ಯವಾಗಿ ಮಹಿಳೆಯರ ಸರಿಸಮಾನತೆ, ಮದ್ಯಪಾನದ ಅನಾಹುತಗಳು, ಅಸ್ಪೃಶ್ಯತೆಯಿಂದ ಆಗುವ ಅನ್ಯಾಯ, ವರದಕ್ಷಿಣೆ ಮತ್ತು ವಧುಗಳ ಮಾರಾಟ ಇತ್ಯಾದಿ. ಹುಡುಗಿಯರ ಶಿಕ್ಷಣ ಮತ್ತು ಶೈಕ್ಷಣಿಕ ಪ್ರಸಾರ ಕಾರ್ಯಕ್ರಮಗಳ ಮೂಲಕ ಲಕ್ಷ್ಮೀ ಆಶ್ರಮವು ಪರ್ವತ ಪ್ರದೇಶದಲ್ಲಿಯ ಹೆಣ್ಣು ಮಕ್ಕಳಲ್ಲಿ ಜಾಗೃತಿ ಉಂಟಾಯಿತು ಎಂಬುದಾಗಿ ಸುಂದರಲಾಲ್ ಹೇಳುತ್ತಾರೆ. ಕ್ರಮೇಣ ಲಕ್ಷ್ಮೀ ಆಶ್ರಮದ ವಿದ್ಯಾರ್ಥಿಗಳು ಮದ್ಯಪಾನ ನಿಷೇಧದ ಕಾರ್ಯಕರ್ತರಾಗಿ ಹೊರಹೊಮ್ಮಿದರು ಮತ್ತು ಅಂತಿಮವಾಗಿ ಚಿಪ್ಕೋ ಆಂದೋಲನದ ಕಾರ್ಯಕರ್ತರಾದರು. ತೆಹರಿಗಢವಾಲ್ ಹಳ್ಳಿಯ ವಿಮಲಾ ನೌತಿಯಾಲ್ ಸರಳಾ ಬೆಹನ್‌ರ ಲಕ್ಷ್ಮೀ ಅಶ್ರಮದ ಮೊದಲನೇ ವಿದ್ಯಾರ್ಥಿಯಾಗಿದ್ದರು. ಅವರು ೧೯೩೨ರಲ್ಲಿ ಹುಟ್ಟಿದರು. ತೆಹರಿಗಢವಾಲ್ ಪ್ರದೇಶದ ಅರಣ್ಯಾಧಿಕಾರಿಯ ಏಳು ಮಕ್ಕಳಲ್ಲಿ ಒಬ್ಬಳಾಗಿದ್ದರು. ಅವರಲ್ಲಿ ಐವರು ಹೆಣ್ಣು ಮಕ್ಕಳು. ಅವರ ತಂದೆ ಸಾಮಾಜಿಕ ವಿಷಯಗಳ ಬಗ್ಗೆ ಪ್ರಗತಿದಾಯಕ ಅಭಿಪ್ರಾಯ ಹೊಂದಿದ್ದರು. ಅವರು ಜಾತಿ ಆಧಾರದ ಮೇಲಿನ ವೈಷಮ್ಯತೆಯನ್ನು ವಿರೋಧ ಮಾಡುತ್ತಿದ್ದರು. ಮಹಿಳೆಯ ಸಮಾನತೆಯಲ್ಲಿ ನಂಬಿಕೆಯಿತ್ತು ತಮ್ಮ ಗಂಡು ಮತ್ತು ಹೆಣ್ಣುಮಕ್ಕಳನ್ನು ಸರಿಸಮವಾಗಿ ಬೆಳೆಸಲು ಬಯಸಿದ್ದರು. ವಿಮಲಾರವರ ತಾಯಿ ಮೇಲ್ವರ್ಗದ ಪುರೋಹಿತ ಕುಟುಂಬದವರಾಗಿದ್ದರು. ಆದರೆ ಅವರ ಯೋಚನಾ ಶೈಲಿ ಸಂಕುಚಿತವಾಗಿದ್ದರದೆ ವಿಶಾಲವಾಗಿತ್ತು. ಹಿರಿಯರಿಗೆ ಗೌರವ ಸೂಚಿಸಬೇಕೆಂದು ವಿಮಲಾಗೆ ತಾಯಿ ಕಲಿಸುವಾಗ ಕೆಳವರ್ಗದ ಜಾತಿಯ ಹಿರಿಯರನ್ನು ಕೂಡ ಗೌರವಿಸಬೇಕೆಂದು ತಿಳಿಸಿದರು.

ತಂದೆಯ ವೃತ್ತಿಯಿಂದಾಗಿ ವಿಮಲಾನ ಪರಿವಾರದವರಿಗೆ ಅಂದಿನ ರಾಜಕೀಯ ಸಂಗತಿಗಳೊಂದಿಗೆ ಸಂಪರ್ಕ ಉಂಟುಮಾಡಿತು. ಚಿಕ್ಕವಯಸ್ಸಿನಲ್ಲೇ ಅವರ ಸಹೋದರರಾದ ಬುದ್ಧಿಸಾಗರ್ ಮತ್ತು ವಿದ್ಯಾಸಾಗರ್ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕಾರಾಗೃಹಕ್ಕೆ ಹೋದರು. ಸ್ವಾತಂತ್ರ್ಯ ಹೋರಾಟಗಾರರ ಸಭೆಗಳು ನಡೆದಾಗ ವಿಮಲಾ ಮನೆ ಮನೆ ಅಲೆದು ಸಭೆಗಳಿಗಾಗಿ ಹಣವನ್ನು ಮತ್ತು ಆಹಾರವನ್ನು ಸಂಗ್ರಹಿಸುತ್ತಿದ್ದರು. ಅನೇಕ ಸ್ವಾತಂತ್ರ್ಯ ಹೋರಾಟಗಾರರಿಗೆ ಚಳವಳಿಯ ಜೊತೆಗೆ ಸಮಾಜವನ್ನು ಸುಧಾರಿಸಬೇಕು ಮತ್ತು ಬಡತನದ ಭಾರವನ್ನು ಕಡಿಮೆ ಮಾಡಬೇಕೆಂದಿನಿಸಿತು. ಆಗ ಮಹಿಳಾ ತಾರತಮ್ಯತೆ ಮತ್ತು ಅವರ ಜೀವಿತದಲ್ಲಿಯ ಕಷ್ಟದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕಾಯಿತು. ಆಗ ಈ ಕೆಲಸಕ್ಕಾಗಿ ಶ್ರದ್ಧೆಯುಳ್ಳ ಮಹಿಳಾ ಕಾರ್ಯಕರ್ತರು ಬೇಕಿತ್ತು. ಇಂಥ ಸಮಸ್ಯೆಗಳ ಪರಿಹಾರಕ್ಕಾಗಿ ಸರಳಾ ಬೆಹನ್ ಲಕ್ಷ್ಮೀ ಆಶ್ರಮ ಸ್ಥಾಪಿಸಿದರು. ಇದೇ ವೇಳೆಗೆ ಗಾಂಧೀಯವರ ಶಿಷ್ಯೆಯಾಗಿದ್ದ ಸರಳಾ ಬೆಹನ್ ಹೆಣ್ಣು ಮಕ್ಕಳಿಗಾಗಿ ಶಾಲೆ ಸ್ಥಾಪಿಸಿರುವ ವಿಷಯ ಅವರ ಸಹೋದರನಾದ ಬುದ್ಧಿಸಾಗರ್ ಮೂಲಕ ಗೊತ್ತಾಯಿತು. ೧೯೪೪ರಲ್ಲಿ ವಿಮಲಾ ತನ್ನ ಮೂವರು ಸ್ನೇಹಿತೆಯರೊಂದಿಗೆ ವಿದ್ಯಾರ್ಥಿನಿಯಾಗಿ ಆಶ್ರಮ ಸೇರಿದರು. ಆಶ್ರಮದ ಪರಿಶ್ರಮದ ಜೀವನಕ್ಕೆ ಅವರು ಹೊಂದಿಕೊಂಡರು. ವಿಮಲಾರ ಬುದ್ಧಿವಂತಿಕೆ ಅವರ ಪರಿಶ್ರಮ ನಿಷ್ಠತೆ ಮತ್ತು ಸಾಂಘಿಕ ಕುಶಲತೆ ಹಾಗೂ ಗಾಂಧೀಜಿಯವರ ವಿಚಾರಗಳ ಅರ್ಥವಂತಿಕೆ ಇತ್ಯಾದಿಗಳಿಂದ ಸರಳಾ ಬೆಹನ್ ಪ್ರಭಾವಿತರಾದರು. ಕಾಲಕ್ರಮೇಣ ಸರಳಾ ಬೆಹನ್ ವಿಮಲಾರವರಿಗೆ ಆಶ್ರಮಕ್ಕೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಹೆಚ್ಚು ಹೆಚ್ಚಾಗಿ ಕೊಡಲಾರಂಭಿಸಿದರು.

(ಮುಂದುವರಿಯುವುದು...)

* * *

ಸನ್ಮಾನ್ಯರಿಂದ...

ನವೆಂಬರ್ ತಿಂಗಳ ಜನಪದ ವಿಚಾರದಲ್ಲಿ ಪ್ರಕಟವಾದ 'ಜೋಳ ಜೋಳೇಶ್ವರಿ' ಲೇಖನ ನನಗೆ ತುಂಬ ಇಷ್ಟವಾಯಿತು. ನಾನು ಉತ್ತರ ಕರ್ನಾಟಕದ ಅಥಣಿ ಪ್ರದೇಶದವನು. ಅಲ್ಲಿಯ ಜೋಳದ ವೈಭವ ಮತ್ತು ರುಚಿಯನ್ನು ನೋಡಿದಂಥವನು. ಆ ಲೇಖನವನ್ನು ಓದುತ್ತಾ ಹೋದಂತೆ ಗತಿಸಿದ ನನ್ನ ಅಲ್ಲಿಯ ದಿನಗಳ ನೆನಪಿನ ಸುರುಳಿ ಬಿಚ್ಚುತ್ತಾ ಹೋಯಿತು. ಶಾಲಾ ಪಠ್ಯ ಪುಸ್ತಕದಲ್ಲಿ ಸ್ಥಾನ ಪಡೆಯಲು ಸೂಕ್ತವಾದ ಲೇಖನ. ಲೇಖಕರಿಗೆ ನನ್ನ ಅಭಿವಂದನೆ.

– ***ಸಂಜೀವ ಅಥಣೀಕರ್***, ಬೆಂಗಳೂರು

ವೇದದಲ್ಲಿಯ ಮುತ್ತುಗಳು

– *ವಿನೋಬಾ*

ವಿಶ್ವತಶ್ಚಕ್ಷುರೂತ ವಿಶ್ವತೋಮುಖಃ ವಿಶ್ವತೋಬಾಹುರೂತ ವಿಶ್ವತಸ್ಪಾತ್
ಸಂ ಬಾಹುಭ್ಯಾಮ್ ದಮತಿ ಸಂ ಪತತ್ರೈಃ ಧ್ಯಾವಾ ಭೂಮೀ ಜನಯನ್ ದೇವ ಏಕಃ

ಸರ್ವತ್ರ ಕಣ್ಣುಗಳು ಇರುವಂಥವ, ಸರ್ವತ್ರವೂ ಮುಖಗಳಿರುವಂಥವ ಸರ್ವತ್ರ ಕೈಗಳುಳ್ಳವ, ಸರ್ವತ್ರ ಕಾಲುಗಳುಳ್ಳವನಾದ ಈ ಒಬ್ಬ ದೇವ ಸ್ವರ್ಗ ಮತ್ತು ಪೃಥ್ವಿಗಳನ್ನು ನಿರ್ಮಾಣ ಮಾಡುತ್ತ ತನ್ನ ಎರಡು ಮುಖ್ಯ ಕೈಗಳಿಂದ ಹಾಗೂ ಅನೇಕ ಬೀಸಣಿಕೆಗಳಿಂದ ಗಾಳಿಯನ್ನು ಸೀಳುತ್ತಾ ಮುನ್ನಡೆಯುತ್ತಿದ್ದಾನೆ.

ನಮ್ಮ ಈ ಜಗತ್ತು ವಿಶ್ವದ ಸಣ್ಣ ಭಾಗ. ನಮಗೆ ಅದು ಬಹಳ ವಿಶಾಲವಾಗಿ ಕಾಣುತ್ತದೆ. ಆದರೆ ಇಡೀ ವಿಶ್ವದ ದೃಷ್ಟಿಯಿಂದ ನೋಡಿದಾಗ ಅದು ಅತಿಶಯವಾಗಿ ತುಚ್ಛವೆಂದೆನಿಸುತ್ತದೆ. ರಾತ್ರಿ ಆಕಾಶದಲ್ಲಿ ಅನಂತ ಗೋಲಗಳು ಕಂಡುಬರುತ್ತವೆ. ಲಕಲಕ ಹೊಳೆಯುವ ಚಿಕ್ಕ ಚಿಕ್ಕ ಲಕ್ಷಾಂತರ ತಾರಿಕೆಗಳು ಪ್ರಚಂಡ. ಅವುಗಳಲ್ಲಿ ಅನಂತ ಸೂರ್ಯಗಳು ಸಮಾವೇಶಗೊಂಡಿವೆ. ಅವು ತೇಜೋಮಯ ಜ್ವಲಂತ ಧಾತುಗಳಿಂದ ಉಂಟಾದ ದುಂಡನೆಯ ಪಿಂಡಗಳು. ಇಂಥ ಅನಂತ ಪಿಂಡಗಳ ಅಂತ್ಯವೂ ಇಲ್ಲ, ಕೊನೆಯೂ ಇಲ್ಲ. ಮೂರು ಕಾಲುಗಳಲ್ಲಿ ಮತ್ತು ಮೂರು ಸ್ಥಳಗಳಲ್ಲಿ, ಭೂತ–ಭವಿಷ್ಯ–ವರ್ತಮಾನಗಳಲ್ಲಿ ಹಾಗೂ ಮೇಲೆ ಕೆಳಗೆ ಅಲ್ಲಿ ಇಲ್ಲಿ ಎಲ್ಲ ಸ್ಥಳದಲ್ಲಿ ವ್ಯಾಪ್ತ ವಿರಾಟ ಪರಮೇಶ್ವರನ ದಿವ್ಯ ರೂಪದ *ವಿಶ್ವತಶ್ಚಕ್ಷುರೂತ* ಮುಂತಾದ ಶಬ್ದಗಳಲ್ಲಿ ವರ್ಣನೆ ಇದೆ. ಆ ಬಗ್ಗೆ ಬುದ್ಧಿ ಓಡಿಸುವುದು ಪಾಪ. ಪರಮೇಶ್ವರನ ಆ ದಿವ್ಯ ರೂಪ ವಿಶಾಲ ಮತ್ತು ಅನಂತ. ಅವನ ಈ ವರ್ಣನೆಯ ಶ್ಲೋಕಗಳನ್ನು ಹಾಡಿರಿ ಮತ್ತು ಹಾಡಿ ನಿಮ್ಮ ಮನವನ್ನು ನಿಶ್ಪಾಪ ಮತ್ತು ಪವಿತ್ರ ಮಾಡಿಕೊಳ್ಳಿ.

* * *

ವಾಚಸ್ಪತಿಂ ವಿಶ್ವಕರ್ಮಾಣಾ ಮೂತಯೇ ಮನೋಜುವಂ ವಾಜೆ ಅದ್ಯಾಹುವೇಮ
ಸ ನೋ ವಿಶ್ವಾನಿ ಹವನಾನಿ ಜೋಷತ್ ವಿಶ್ವ ಶಂಭೂರವಸೆ ಸಾಧುಕರ್ಮಾ

ನಮ್ಮ ಸಾಧನೆಯ ವೇಗದಿಂದ ವಿಕಾಸವಾಗಲಿ. ಆದ್ದರಿಂದ ನಾನು ಮನೋವೇಗ–ಸಂಪನ್ನ–ವಿಶ್ವಕರ್ಮಯೋಗಿ ವಾಚಸ್ಪತಿಯ ಪ್ರಾರ್ಥನೆ ಮಾಡುತ್ತೇನೆ. ಜಗತ್ ರಕ್ಷಣೆಗಾಗಿ ಅವನ ಅವತಾರವಾಗಿದೆ. ಆದ್ದರಿಂದ ಎಲ್ಲರ ಕೂಗಿಗೆ ಪ್ರತ್ಯುತ್ತರ ಕೊಡುವುದು ಅವನ ಕರ್ತವ್ಯ. ಇದು ಸರ್ವ–ಶಾಂತಿಯ ಸಾಗರ. ಸತ್ಕರ್ಮಗಳ ಆಗರ.

ಶಾಂತಿಯ ಸಮುದ್ರದ ಮೇಲೆ ಸತ್ಕರ್ಮದ ಸೌಮ್ಯ ಅಲೆಗಳು ಸದೈವ ಹರಿಯುತ್ತಿರುತ್ತವೆ. ಇದು ವೈದಿಕ ಋಷಿಗಳ ಅನುಭವ. ಆದ್ದರಿಂದ ಅವರು 'ಶಾಂತ ಆತ್ಮ' (ಶಂಭೂ)ವನ್ನು ವಿಶ್ವಕರ್ಮದ್ದೇ ಪ್ರಕಟರೂಪವೆಂದು ತಿಳಿದಿದ್ದಾರೆ. ಸಾರಾಂಶ, ನೈಷ್ಠಿಕ ಶಾಂತಿಯ ನಂತರ ಅದನ್ನು ಪಡೆಯುವುದಕ್ಕಾಗಿ ಕೂಡ ಕರ್ಮ ಆವಶ್ಯಕ. ಆದ್ದರಿಂದ ವಿಶ್ವ–ಕರ್ಮಾ ಋಷಿಗಳು ಕರ್ಮ ಶೂನ್ಯ ಶಾಂತಿಯ ಕಲ್ಪನೆ ಮಾಡಲಾರರು.

'ವಿಶ್ವ–ಕರ್ಮಾ' ಶಬ್ದದ ಅರ್ಥ 'ಎಲ್ಲ ಕರ್ಮ' ಮಾಡುವವ. ಆದರೂ ಕೂಡ 'ಎಲ್ಲ' ಶಬ್ದ ವ್ಯರ್ಥವೆಂದು ತಿಳಿದು ಅದರಲ್ಲಿ ಪಾಪ ಕರ್ಮ ಕೂಡ ಸಮಾವೇಶವಾಗದಿರಲೆಂದು ವಿಶ್ವ–ಕರ್ಮಾ ಸೂಕ್ತದಲ್ಲಿ ಋಷಿಗಳು ಸಾಧು–ಕರ್ಮಾ ವಿಶೇಷಣಾ ಸಾಭಿಪ್ರಾಯವಾಗಿ ಯೋಜಿಸಿದ್ದಾರೆ.

ನವೋ ನವೋ ಭವತಿ ಜಾಯಮಾನಃ

ಚಂದ್ರ ಪ್ರತಿ ದಿನ ಹೊಸತು. ಅದೇ ರೀತಿ ಮನುಷ್ಯ ದಿನ ಹೊಸತಾಗಬೇಕು. ಎದುರಿನಲ್ಲಿ ಕುಳಿತಿರುವವರು ಹೊಸಬರು ಮತ್ತು ನಾನು ಕೂಡ ಹೊಸಬ. ಅವರು ಹೊಸಜನ ಮತ್ತು ನಾನು ಅದೇ ಎಂಬುದಾಗಿ ಭಾಸವಾಗುತ್ತದೆ. ಆದರೆ ಈ ರೀತಿ ತಿಳಿಯುವುದರಿಂದ ವಿಕಾಸದಲ್ಲಿ ಅಡ್ಡಿಯಾಗುತ್ತದೆ.

ಹಳೆಯದನ್ನು ಕಿಂಚಿತ್ತೂ ಆಲೋಚಿಸಕೂಡದು. ಎಲ್ಲಿ ಹಳೆಯದು ನೆನಪಿಗೆ ಬರುತ್ತದೋ ಅಲ್ಲಿಂದ ವರ್ತಮಾನ ಕೈಜಾರಿ ಹೋಗುತ್ತದೆ. ಅನಂತರ ಉಳಿದುದೇನು? ನಮ್ಮ ಕೈಯಲ್ಲಿರುವ ವರ್ತಮಾನ ಕಳೆಯದಿರೋಣ. ನಾಳೆ ಎಂಬುದು ಇರುವುದು ದೇವರ ಕೈಯಲ್ಲಿ.

ನಿನ್ನೆಯ ಮನುಷ್ಯ ಇಂದಿಲ್ಲ, ಇಂದಿನವ ನಾಳಿಲ್ಲ ಮತ್ತು ನಾಳಿನವ ನಾಡಿದ್ದಿಲ್ಲ. ಹಳೆಯ ಬಟ್ಟೆ ಹರಿದು ಹೋಯಿತು. ನಿನ್ನೆಯ ದಿನ ಹೊರಟು ಹೋಯಿತು. ನಾಳೆಯ ದಿನ ಬಂತು. ಆದ್ದರಿಂದ ಹಳೆಯದ್ದನ್ನು ಯೋಚಿಸುವ ಅಗತ್ಯವಿಲ್ಲ. ಶಾಸ್ತ್ರಕಾರರು ಹೀಗೆ ಆಜ್ಞೆ ಕೊಟ್ಟಿದ್ದಾರೆ:-

ಅತೀತಾನುಸಂಧಾನಮ್ ಭವಿಷ್ಯದ್ವಿಚಾರಣಮ್ ನಿನ್ನೆಯವರೆಗೆ ಏನಾಯಿತೋ ಅದನ್ನು ಜ್ಞಾಪಿಸಿಕೊಳ್ಳಬೇಡ. ಭವಿಷ್ಯದ ವಿಚಾರ ಮಾಡಬೇಡ. ಮನಸ್ಸಿನ ಮೇಲೆ ಅದರ ಭಾರ ಬಿದ್ದೀತು. ಅದರಿಂದಾಗಿ ಆತ್ಮಸ್ಮೃತಿಯಲ್ಲಿ ಅಡಚಣೆ ಉಂಟಾದೀತು. ಭಾಗವತದಲ್ಲಿ ಸುಂದರ ವಾಕ್ಯವಿದೆ.

* * *

ಸೋಯಂ ದೀರ್ಪೋರ್ಪ್ಯಾಮ್ ಯದವತ್ ಸ್ರೋತ ಸಾಮ್ ತದಿಧಂ ಜಲಂ
ಸೋಯಂ ಪುಮಾನಿತಿ ನೃಣಾಂ ಮೃಷಾ ಗೀರ್ ಧೀರ್ ಮೃಷಾಯುಷಾಂ

ಅದೇ ದೀಪ ಉರಿಯುತ್ತಿದೆ ಎಂದು ಭಾಸವಾಗುತ್ತದೆ. ಆದರೆ ದೀಪ ಹೊಸ ಹೊಸದಾಗಿ ಉರಿಯುತ್ತಿದೆ. ಹಳೆಯ ಎಣ್ಣೆ ಮುಗಿಯಿತು. ಹೊಸ ಎಣ್ಣೆ ಉರಿಯುತ್ತಿದೆ. ಹಳೆಯ ಬತ್ತಿ ಮುಗಿಯಿತು, ಹೊಸ ಬತ್ತಿ ಉರಿಯುತ್ತಿದೆ. ಗಂಗಾನದಿ ಹರಿಯುತ್ತಿದೆ. ಹಳೆಯ ನೀರು ಹೋಯಿತು. ಪ್ರತಿಕ್ಷಣ ಹೊಸ ನೀರು ಬರುತ್ತಿದೆ. ಆದರೆ ಅದೇ ಹಳೆ ನೀರು ಇರುವಂತೆ ಭಾಸವಾಗುತ್ತದೆ. ಇದೇ ಪ್ರಕಾರ ಗಂಗೆ ಪ್ರತಿಕ್ಷಣ ಹೊಸತು. ಅದೇ ರೀತಿ ಹಳೆ ಮನುಷ್ಯ ಇರುವಂತೆ ಅನಿಸುತ್ತದೆ. ಆದರೆ ಮನುಷ್ಯ ಪ್ರವಾಹ ಹರಿಯುತ್ತಿದೆ.

* * *

ವಾಚಾಸ್ತೇನಂ ಶರವ ಕೃಛಂತು ಮರ್ಮನ್

ಯಾರು ವಾಣಿಯನ್ನು ಕದಿಯುತ್ತಾರೋ, ಹೇ ಪರಮೇಶ್ವರ! ಎಲ್ಲ ಬಾಣಗಳು ಅವನ ಮರ್ಮದ ಮೇಲೆ ಬೀಳಲಿ.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಕವನ ಸಿರಿ ಮಲ್ಲಿಗೆ**
ಲೇಖಕರು : ಡಾ॥ ಶಿವರಾಜಪ್ಪ
ಪ್ರಕಾಶಕರು : ಮಹರ್ಷಿ ಪ್ರಕಾಶನ, ನಂ ೩೮೧ ಬಿ, ೩ನೇ ಹಂತ, ವಿಶ್ವೇಶ್ವರನಗರ, ಮೈಸೂರು – ೫೭೦೦೦೮
ಪುಟಗಳು : ೮೪ ; ಬೆಲೆ : ೫೦ ರೂ.

ಈ ಪುಸ್ತಕದಲ್ಲಿ ಒಟ್ಟು ೨೮ ಕವನಗಳಿವೆ. ಕೆಲವು ಪ್ರಕೃತಿ ಆಧರಿಸಿ ರೂಪಿತಗೊಂಡಿದ್ದರೆ ಇನ್ನು ಕೆಲವು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದನವಾಗಿ ರೂಪಗೊಂಡಿವೆ. ಮಲೆ ಮಹದೇಶ್ವರನ ಕುರಿತಾಗಿಯೂ ಕೆಲವು ಕವನಗಳಿವೆ. ಕೆಲವು ವಿಡಂಬನಾತ್ಮಕ ಕವನಗಳಿವೆ. ಇದು ಡಾ॥ ಶಿವರಾಜಪ್ಪನವರ ಮೊದಲ ಕವನ ಸಂಕಲನ ವಾಗಿದ್ದರೂ ರಂಜನೀಯವಾಗಿ ಓದಿಸಿಕೊಂಡು ಹೋಗುತ್ತದೆ.

* * *

ಪುಸ್ತಕದ ಹೆಸರು : **ಆರೋಗ್ಯದ ಕೀಲಿಕೈ** (Key to Health)
ಲೇಖಕರು : ಮೋಹನದಾಸ ಕರಮಚಂದ ಗಾಂಧಿ
ಅನುವಾದ : ಆರೂರು ಮಂಜುನಾಥರಾವ್
ಪ್ರಕಾಶಕರು : ಶಾಂತಿವನ, ಆರೂರು ಅಂಚೆ – ೫೭೬೨೯೮, ಉಡುಪಿ ಜಿಲ್ಲೆ
ಪುಟಗಳು : ೫೨ ; ಬೆಲೆ : ೩೦ ರೂ.

ಗಾಂಧೀಯವರಿಂದ ರಚಿತವಾದ ಸಾಹಿತ್ಯ ಅಪಾರವಾದುದು. ಆ ಸಾಹಿತ್ಯ ಗಾಂಧೀಯವರ ಅಭಿಮಾನಿಗಳಿಂದ ದಿನನಿತ್ಯ ಬೆಳೆಯುತ್ತಲೇ ಇದೆ. ಅದು ವಿಮರ್ಶಾತ್ಮಕ ಸಾಹಿತ್ಯವಾಗಿರಬಹುದು, ಅನುವಾದವಾಗಿರಬಹುದು ಇಲ್ಲವೇ ಸ್ವಾನುಭವಾಧಾರಿತ ಸಾಹಿತ್ಯವಾಗಿರಬಹುದು. ಅಪಾರವಾದ ಗಾಂಧೀ ಸಾಹಿತ್ಯದ ಸಾಗರದಲ್ಲಿ ಮುಳುಗಿ ಒಬ್ಬೊಬ್ಬರೂ ತಮ್ಮ ಶಕ್ತ್ಯಾನುಸಾರ ಮುತ್ತು ರತ್ನಗಳನ್ನು ಹೊರತೆಗೆಯುತ್ತಾರೆ. ಇಲ್ಲಿ ಆರೂರು ಮಂಜುನಾಥರಾವ್ ಗಾಂಧೀ ಸಾಹಿತ್ಯ ಸಾಗರದಿಂದ ಜನಪ್ರಿಯ ಕೃತಿ 'ಕೀ ಟು ಹೆಲ್ತ್' ಎಂಬ ಮುತ್ತೊಂದನ್ನು ಹೊರತೆಗೆದು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಅನುವಾದ ಮುಖ್ಯವಾಗಿ ಸಾಮಾನ್ಯ ಓದುಗರನ್ನು ಮತ್ತು ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಮಾಡಿದುದಾಗಿದೆ. ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಮೂಲತಃ ಕನ್ನಡದಲ್ಲಿ ಬರೆದಿದ್ದರೆ ಎಷ್ಟು ಸರಳವಾಗಿರುತ್ತಿತ್ತೋ ಅಷ್ಟೇ ಸರಳವಾಗಿದೆ ಅನುವಾದ. ಆರೋಗ್ಯದ ವಿಷಯದಲ್ಲಿ ಆಸಕ್ತಿ ಮತ್ತು ಪ್ರೇಮ ಇರುವ ಕನ್ನಡಿಗರಿಗೆ ಈ ಪುಸ್ತಕ ತುಂಬಾ ಸಕಾಲಿಕವಾಗಿ ಹೊರಬಂದಿದೆ. ಆರೂರುರವರ ಅನುವಾದದಲ್ಲಿ ಶ್ರದ್ಧೆ ಇದೆ. ತಂದೆ ಚೇರ್ಕಾಡಿ ರಾಮಚಂದ್ರರಾಯರ ಮಗನಾಗಿ ಈ ಪುಸ್ತಕ ಪ್ರಕಟಿಸುವುದರ ಮೂಲಕ ತಂದೆಯ ಪರಂಪರೆಯನ್ನು ಮುಂದುವರಿಸಿದ್ದಾರೆ.

ನಗೆಗೊಂದು, ಬಗೆಗೊಂದು ಹೊಸ ಕುಸರು ಬೇಕು.

- ಗೋಪಾಲಕೃಷ್ಣ ಅಡಿಗ

ಹೊಸ ವರ್ಷದ ಸ್ವಾಗತಕ್ಕಾಗಿ ಹೊಸ ಜೀವನದಾರಿಗೆ ಬನ್ನಿ!

೨೦೧೧ ಮುಗಿಯಿತು. ಪ್ರತಿ ಹೊಸವರ್ಷ ಪ್ರಾರಂಭವಾಗುವ ಸಂಧಿಕಾಲವನ್ನು ಉತ್ಸಾಹ ಮತ್ತು ಸಂತೋಷದಿಂದ ಬರಮಾಡಿಕೊಳ್ಳುವ ವಾಡಿಕೆಯಿದೆ. ೨೦೧೨ರ ಹೊಸ ವರ್ಷವನ್ನು ನೀವು ಹೊಸ ರೀತಿಯಲ್ಲಿ ಆಚರಿಸಲು ಬಯಸುತ್ತಿದ್ದರೆ ನಿಮ್ಮ ಜನಪದ ಸೇವಾ ಟ್ರಸ್ಟ್ ನಿಮಗೆ ಅವಕಾಶ ಮಾಡಿಕೊಡುತ್ತಿದೆ. ಈ ವರ್ಷದ ತಿಂಗಳ ಕೊನೆಯ ದಿನವನ್ನು ಮತ್ತು ಹೊಸ ವರ್ಷದ ಮೊದಲನೇ ದಿನವನ್ನು ಅರ್ಥವತ್ತಾಗಿ ನೀವು ಆಚರಿಸುವುದಕ್ಕೆ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರ ಅಣಿಯಾಗಿದೆ. ನೀವು ಇತರೆಡೆ ಮನೋರಂಜನೆಗಾಗಿ ಜನಸಂದಣಿ ಪ್ರದೇಶಗಳಿಗೆ ಭೇಟಿಕೊಡುವ ಬದಲು ಪ್ರಕೃತಿಯ ಮಡಿಲಲ್ಲಿ, ಶಾಂತಿಯುತ ವಾತಾರವರಣದಲ್ಲಿ ಮತ್ತು ಸನ್ಮಿತ್ರರ ಸಂಗತಿಯಲ್ಲಿ ಹೊಸ ವರ್ಷದ ಸ್ವಾಗತಕ್ಕೆ ೨೦೧೧ ಡಿಸೆಂಬರ್ ೩೧ನೇ ಶನಿವಾರ ಸಂಜೆ ನೀವು ಹೊಸ ಜೀವನ ದಾರಿಗೆ ಬನ್ನಿ. ಆ ದಿನ ರಾತ್ರಿ ಹೊಸ ಸ್ನೇಹಿತರೊಂದಿಗೆ ಒಡನಾಡಿ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ. ವೈಚಾರಿಕ ಉಪನ್ಯಾಸ ಕೇಳಿರಿ. ಜನಪದ ಸೇವಾ ಟ್ರಸ್ಟ್‌ನ ಕಾರ್ಯಕ್ರಮಗಳ ಪರಿಚಯ ಮಾಡಿಕೊಳ್ಳಿ. ಹೊಸ ವರ್ಷದ ಬೆಳಿಗ್ಗೆ ಉಪಹಾರವನ್ನು ಮುಗಿಸಿ ಹೊಸ ವರ್ಷದ ಶುಭಾಷಯಗಳ ಸವಿನೆನಪಿನೊಂದಿಗೆ ನಿಮ್ಮ ಕಾರ್ಯಕ್ಷೇತ್ರಕ್ಕೆ ನವ ಉತ್ಸಾಹದಿಂದ ನಿರ್ಗಮಿಸಿ.

ಹೊಸ ವರ್ಷದ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಿಲಿಚ್ಛಿಸಿ ಬರುವುದಾದರೆ ವಿವರಗಳಿಗೆ ಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿಯವರಿಗೆ ದೂರವಾಣಿಯ ಮುಖಾಂತರ ದಯಮಾಡಿ ಸಂಪರ್ಕಿಸಿ.

ದೂರವಾಣಿ ಸಂಖ್ಯೆ : ೯೯೦೦೫೩೭೪೩೪

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮಕ್ಕಳು ಚಿಕ್ಕವರಾದರೇನಂತೆ ಅವರು ಕನ್ನಡ ನಾಡಿನ ಹಿರಿಯ ಕನಸಿನ ಮಕ್ಕಳು. ನವೆಂಬರ್ ಒಂದರಂದು ಶ್ರೀಕೃಷ್ಣ ಕನ್ನಡ ಶಿಶುವಿಹಾರದ ಮಕ್ಕಳೂ ಕೂಡ ತಮ್ಮದೇ ಪುಟ್ಟ ರೀತಿಯಲ್ಲಿ ಆದರೆ ದಿನದ ಮಹತಿಗೆ ಅನುಸಾರವಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ಅಂಬಿಕಾತನಯದತ್ತ ಮತ್ತು ಬಿ.ಎಂ.ಶ್ರೀಯವರ ಕನ್ನಡ ಮತ್ತು ಕರ್ನಾಟಕ ಕುರಿತಾದ ಹಾಡುಗಳನ್ನು ಹೇಳಿದರು. ನಂತರ ಕನ್ನಡ ಬಾವುಟದೊಂದಿಗೆ ಮೈದಾನದಲ್ಲಿ ಮೆರವಣಿಗೆ ನಡೆಸಿದರು. ಬಾಯಿ ಸಿಹಿಮಾಡಿಕೊಂಡು ಸಂತೋಷವಾಗಿ ಮನೆಗೆ ತೆರಳಿದರು.

ಜನಪದ ಸೇವಾ ಟ್ರಸ್ಟ್‌ನ ಐವತ್ತು ವರ್ಷಗಳ ಹಿಂದಿನ ಅಂಗರಚನೆ ಪ್ರಸ್ತುತ ಪರಿಸ್ಥಿತಿಗೆ ಅನುಸಾರವಾಗಿ ತಿದ್ದುಪಡಿಮಾಡಿಕೊಳ್ಳುವುದು ಅಗತ್ಯವಾಗಿತ್ತು. ಆದ್ದರಿಂದ ಇತ್ತೀಚೆಗೆ ನಡೆದ ಟ್ರಸ್ಟಿನ ಸರ್ವಸದಸ್ಯರ ಸಭೆಯಲ್ಲಿ ಟ್ರಸ್ಟಿನ ಮೂಲ ಧ್ಯೇಯೋದ್ದೇಶಗಳಿಗೆ ಯಾವುದೇ ಧಕ್ಕೆ ಬಾರದಂತೆ ಟ್ರಸ್ಟಿನ ಬಲವರ್ಧನೆಗೆ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡಲಾಯಿತು.

ಕರುಣಾಗೃಹದ ದತ್ತು ವಿಭಾಗ ಕೇಂದ್ರಕ್ಕೆ ಅವಧಿಗೆ ಮುನ್ನ ಹುಟ್ಟಿ ತಾಯಿಯಿಂದ ತ್ಯಜಿಸಲ್ಪಟ್ಟ ಒಂದು ದಿನದ ಮಗುವನ್ನು ಪಡೆಯಲಾಯಿತು. ಸದ್ಯಕ್ಕೆ ದತ್ತು ವಿಭಾಗದಲ್ಲಿ ಇಂಥ ಮಕ್ಕಳ ಯೋಗಕ್ಷೇಮಕ್ಕೆ ಇನ್ನೂ ವ್ಯವಸ್ಥೆ ಆಗದಿರುವುದರಿಂದ ಖಾಸಗಿ ಆಸ್ಪತ್ರೆಯೊಂದರಲ್ಲಿ ಕೆಲ ತಿಂಗಳ ಮಟ್ಟಿಗೆ ಇಡಲಾಗಿದೆ. ನಂತರ ಮಗುವನ್ನು ಕೇಂದ್ರಕ್ಕೆ ತರಲಾಗುವುದು. ದತ್ತು ಕೇಂದ್ರದ ಪರಿಶೀಲನೆಗಾಗಿ ಜಿಲ್ಲೆಯ ಮಕ್ಕಳ ಕ್ಷೇಮ ಸಮಿತಿಯ ಸದಸ್ಯರು ಭೇಟಿಕೊಟ್ಟರು. ಏತನ್ಮಧ್ಯೆ ಆಸ್ಪತ್ರೆಯೊಂದರಲ್ಲಿ ತಾಯಿ ಬಿಟ್ಟು ಹೋಗಿದ್ದ ಐದು ತಿಂಗಳ ಗಂಡು ಮಗುವನ್ನು ದತ್ತು ಕೇಂದ್ರಕ್ಕೆ ಸೇರಿಸಿಕೊಳ್ಳಲಾಗಿದೆ. ಈ ಮೊದಲು ದತ್ತು ಕೇಂದ್ರಕ್ಕೆ ಸೇರಿದ್ದ ಕಾರ್ತಿಕ್ ಎಂಬ ಮಗುವಿನ ಪೋಷಕರು ಸಿಕ್ಕಿದ್ದರಿಂದ ಆ ಮಗುವನ್ನು ಅವರ ವಶಕ್ಕೆ ಕೊಡಲಾಯಿತು.

ಟ್ರಸ್ಟಿನ ಕಾರ್ಯದರ್ಶಿ ಸಂತೋಷ ಕೌಲಗಿಯವರನ್ನು ಮಕ್ಕಳ ಹಕ್ಕು ಕಾಯ್ದೆ ಅಡಿ ರಚಿತವಾಗಿರುವ ಮಂಡ್ಯ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಚಿತ್ರನಟ ಮತ್ತು ನೃತ್ಯಕಲಾವಿದರಾದ ಶ್ರೀಧರ್ ಟ್ರಸ್ಟ್‌ಗೆ ಭೇಟಿಕೊಟ್ಟರು. ಶ್ರೀ ಶ್ರೀಧರ್‌ರವರು ಚಿಕ್ಕ ವಯಸ್ಸಿನಿಂದ ಟ್ರಸ್ಟ್‌ನೊಂದಿಗೆ ಸಂಪರ್ಕವಿರಿಸಿಕೊಂಡಿದ್ದಾರೆ.

ವಿನೋಬಾ ಸ್ಥಾಪಿತ ಪವನಾರ್ ಆಶ್ರಮದಲ್ಲಿ ನಡೆದ ಮಿತ್ರಮಿಲನದಲ್ಲಿ ಟ್ರಸ್ಟಿನ ಅಧ್ಯಕ್ಷರು ಮತ್ತು ಕಾರ್ಯಕರ್ತರಾದ ಜಯಣ್ಣನವರು ಭಾಗವಹಿಸಿದ್ದರು.

೨೦೧೧ – ನವೆಂಬರ್ ಮಾಹೆಯ ದಾನಿಗಳು

ಶ್ರೀ ವೇಣುಮಾಧವ, ಶ್ರೀ ಎಂ.ಜಿ.ಶಿವರಾಮು, ಶ್ರೀಮತಿ ಎ.ಎಸ್.ನೀಲಮ್ಮ, ಶ್ರೀ ಕೆ.ಎಸ್.ಪಾರ್ಥಸಾರಥಿ, ಶ್ರೀಮತಿ ಪದ್ಮಮ್ಮ, ಪಿ.ಶೇಷಾದ್ರಿ ಚಾರಿಟೆಬಲ್ ಟ್ರಸ್ಟ್, ಶ್ರೀ ಸಿ.ಪಿ.ಶೇಷಾದ್ರಿ, ಶ್ರೀ ಡಿ.ಎಸ್.ನಾಡಿಗ್, ಶ್ರೀ ಸಂಜೀವ ಅಥಣೀಕರ್,
ಶ್ರೀ ಎಸ್.ಜಿ.ಸುಂದರರಾಜು – ಬೆಂಗಳೂರು
ರಾಷ್ಟ್ರೋತ್ಥಾನ ಬಳಗ – ಮಂಡ್ಯ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೨

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ಯಾವ ಮನೆಯಲ್ಲಿ ಬೆಳೆಯಿತೋ ಮತ್ತು ಯಾವ ಮನೆ ಪರೋಕ್ಷವಾಗಿ ಟ್ರಸ್ಟಿನ ಆದರ್ಶಗಳನ್ನು ಎತ್ತಿಹಿಡಿದಿದೆಯೋ ಆ ಮನೆ ಇಂದು 'ಜನಪದ ನಿಲಯ'ವಾಗಿ ಟ್ರಸ್ಟಿನ ಆದರ್ಶಗಳಿಗೆ ಮತ್ತು ಕ್ರಿಯಾಶೀಲತೆಗೆ ಪ್ರೇರಣೆಯಾಗಿ ನಿಂತಿದೆ. ಈ ಪ್ರಕಾರದ ವಿಚಾರ ಅನುಭೂತಿಗೊಳ್ಳಲು ಸುಮಾರು ಐವತ್ತುವರ್ಷಗಳಾದವು. ಜನಪದ ನಿಲಯ ೧೯೬೦ರ ಮೊದಲು ಮೇಲುಕೋಟೆಯಲ್ಲಿಯ ಅನೇಕ ಮನೆಗಳಂತೆ ಒಂದಾಗಿತ್ತು. ಅದಕ್ಕೂ ಮೊದಲು ಕೂಡ ಆಂಧ್ರದ ಪೆನಗೊಂಡೆಯಿಂದ ಮೇಲುಕೋಟೆಗೆ ವಲಸೆ ಬಂದಿದ್ದ ಶ್ರೀವೈಷ್ಣವ ಕುಟುಂಬದ ಕಾರಣದಿಂದಾಗಿ ವಿಶೇಷವಾದ ಸ್ಥಾನವನ್ನೇ ಪಡೆದಿತ್ತೆಂದು ಹೇಳಬಹುದು. ಸುಮಾರು ನೂರು ವರ್ಷಗಳ ಹಿಂದೆ ಪೆನಗೊಂಡೆಯಿಂದ ವಲಸೆ ಬಂದ ಕುಟುಂಬ ಈ ಮನೆಯನ್ನು ಕಟ್ಟಿ, ಈ ಮನೆಯಲ್ಲಿ ವಾಸಮಾಡಿ ಶ್ರೀ ಪರಕಾಲಮಠ ಮತ್ತು ಶ್ರೀ ನಾರಾಯಣ ಸ್ವಾಮಿ ದೇವಸ್ಥಾನದ ನಿಕಟ ಸಂಪರ್ಕ ಇಟ್ಟುಕೊಂಡು ಶ್ರೀವೈಷ್ಣವ ಸಂಪ್ರದಾಯಸ್ಥರಲ್ಲಿ ವಿಶೇಷ ಮನ್ನಣೆ ಪಡೆದ ಮನೆ ಇದಾಗಿತ್ತು. ಕ್ರಮೇಣ ಭೂದಾನ ಆಂದೋಲನದ ಮೂಲಕ ದೇಶದ ಸರ್ವೋದಯ ಕ್ಷೇತ್ರದಲ್ಲಿ ಹೆಸರು ಮಾಡಿದ ಕುಟ್ಟಿ ಈ ಮನೆಗೆ ಸೇರಿದವರು. ಅವರು ಈ ಮನೆಯಲ್ಲಿ ಸರ್ವೋದಯ ವಿಚಾರದ ಕೆಲಸ ಮಾಡಿದವರು. ಅವರ ಕಾರಣದಿಂದಾಗಿ ಅನೇಕ ಸರ್ವೋದಯ ಕಾರ್ಯಕರ್ತರು ಈ ಮನೆಗೆ ಭೇಟಿ ಕೊಡುವಂತಾಯಿತು. ಕುಟ್ಟಿಯವರ ಅಣ್ಣ ದೇಶಿಕಾಚಾರ್ಯರು ಕೇವಲ ಪರಕಾಲಮಠ ಮತ್ತು ದೇವಸ್ಥಾನಗಳೊಂದಿಗೆ ಸಂಪರ್ಕವಿಟ್ಟುಕೊಂಡ ಶ್ರೀವೈಷ್ಣವರಾಗಿದ್ದರು. ಊರಿನ ಉಸಾಬರಿಗೆ ಎಂದೂ ಹೋದಂತವರಲ್ಲ. ಮೇಲುಕೋಟೆ ಪಕ್ಕದ ಕದಲಗೆರೆಯಲ್ಲಿದ್ದ ತಮ್ಮ ಪೂರ್ವಿಕರ ಜಮೀನಿನ ವ್ಯವಸಾಯಕ್ಕಾಗಿ ಹೋಗಿಬರುತ್ತಿದ್ದರು. ಅವರ ಹೆಂಡತಿ ರಂಗನಾಯಕಮ್ಮ. ಅವರನ್ನು ಸ್ಥಳೀಯರು ಹೆಚ್ಚಾಗಿ ಗುಂಡಮ್ಮ ಎಂದು ಕರೆಯುತ್ತಿದ್ದರು. ರಂಗನಾಯಕಮ್ಮ ಓದುವ ಹವ್ಯಾಸ ಇಟ್ಟುಕೊಂಡಿದ್ದರು. ಸಾಮಾನ್ಯ ತಿಳುವಳಿಕೆ ಹೆಚ್ಚಾಗಿತ್ತು. ಇಂಥ ಸಂಪ್ರದಾಯಸ್ಥ ಮತ್ತು ಸಜ್ಜನ ಹಾಗೂ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ಪಿ.ನರಸಿಂಹರಂಗನ್ ದಿನಾಂಕ ೮-೧೧-೨೦೧೧ರಂದು ತಮ್ಮ ೬೫ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿದು ಎಲ್ಲರಿಗೂ ಆಘಾತವಾಯಿತು. ನರಸಿಂಹರಂಗನ್‌ರವರನ್ನು ಹತ್ತಿರದವರೆಲ್ಲ ಬಾಬು ಎಂದು ಕರೆಯುತ್ತಿದ್ದರು. ಅವರು ವಿದ್ಯಾರ್ಥಿದೆಸೆಯಿಂದಲೇ ಮೇಧಾವಿಯಾಗಿದ್ದರು. ಇಂಜಿನಿಯರಿಂಗ್ ಪದವಿ ಪಡೆಯುವುದರ ಜೊತೆಗೆ ಕನ್ನಡದಲ್ಲಿಯೂ ಆಸಕ್ತಿ ಬೆಳೆಸಿಕೊಂಡರು. ಕನ್ನಡದಲ್ಲಿ ಅನೇಕ ಕಥೆಗಳನ್ನು ಕಾದಂಬರಿಗಳನ್ನು ಸಹ ಬರೆದರು. ಕನ್ನಡದ ಜನಪ್ರಿಯ ವಾರಪತ್ರಿಕೆ

ಸುಧಾದಲ್ಲಿ ಪ್ರತಿವಾರವೂ ಚಿಂತನ ಪ್ರದಾನ ಅಂಕಣವನ್ನು 'ಮನು' ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ಇವರು ಬರೆದ ಕಾದಂಬರಿಗಳು ಚಲನಚಿತ್ರವಾಗಿ ರೂಪಗೊಂಡಿವೆ. ಮಹಾಸಂಪರ್ಕವೆಂಬ ಮಹಾಭಾರತ ಕಥೆಯಾಧಾರಿತ ವೈಜ್ಞಾನಿಕ ಕೃತಿಯನ್ನು ರಚಿಸಿದ್ದಾರೆ. ಅದು ಇಂಗ್ಲಿಷ್‌ನಲ್ಲಿಯೂ ಅನುವಾದಿತಗೊಂಡಿದೆ. ಇವರ ತಮ್ಮ ಭಗವಾನ್ ಹಾಗು ಸಹೋದರಿಯರು ಒಮ್ಮತದಿಂದ ತಮ್ಮ ಪೂರ್ವಿಕರ ಮನೆಯನ್ನು ಜನಪದ ಸೇವಾ ಟ್ರಸ್ಟ್‌ಗೆ ಕೊಟ್ಟರು. ಈ ವಿಷಯದಲ್ಲಿ ನರಸಿಂಹರಂಗನ್ ತುಂಬ ಆಸಕ್ತಿ ವಹಿಸಿದರು. ಇವರು ಮೇಲುಕೋಟೆಗೆ ಬಂದಾಗಲೆಲ್ಲ ತಮ್ಮ ಮನೆಯಲ್ಲಿ ಬಹಳ ಸಮಯ ಕಳೆಯುತ್ತಿದ್ದರು. ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ತಮ್ಮ ಮನೆಯನ್ನು ತೋರಿಸುತ್ತಿದ್ದರು. ಅವರು ಬಂದಾಗಲೆಲ್ಲ ಟ್ರಸ್ಟ್ ಅವರಿಗೆ ಪ್ರೀತಿ ವಿಶ್ವಾಸದಿಂದ ಸ್ವಾಗತಿಸಿ ಆತಿಥ್ಯವನ್ನು ಮಾಡುತ್ತಿತ್ತು. ಹೀಗಾಗಿ ಬಾಬುರವರು ತಮ್ಮ ಈ ಪೂರ್ವಜರ ಮನೆಯನ್ನು ಟ್ರಸ್ಟಿಗೆ ಕೊಟ್ಟಿದ್ದಕ್ಕಾಗಿ ಎಂದು ಬೇಸರ ವ್ಯಕ್ತಪಡಿಸಲಿಲ್ಲ. ಅವರಿಗೆ ತೃಪ್ತಿಯೇ ಇತ್ತು. ಜನಪದ ಸೇವಾ ಟ್ರಸ್ಟ್ ನರಸಿಂಹರಂಗನ್‌ರವರಿಗೆ ಸದಾಕಾಲ ಆಭಾರಿಯಾಗಿರುತ್ತದೆ. ಅವರಿಗೆ ಕೃತಜ್ಞತೆಯನ್ನು ಟ್ರಸ್ಟಿನ ಶ್ರೀಕೃಷ್ಣ ಶಿಶುವಿಹಾರದ ಮಕ್ಕಳು ಮೌನವನ್ನು ಆಚರಿಸಿ ವ್ಯಕ್ತಪಡಿಸಿದ್ದಾರೆ. ವ್ಯಾವಹಾರಿಕವಾಗಿ ಅಲ್ಲದಿದ್ದರೂ ಭಾವನಾತ್ಮಕವಾಗಿ ಜನಪದ ನಿಲಯವು ನರಸಿಂಹರಂಗನ್ ಅವರದೇ ಆಗಿದೆ. ಟ್ರಸ್ಟಿನ ಮತ್ತು ರಂಗನ್‌ರವರ ಭಾವನೆಗಳು ಮತ್ತು ವಿಚಾರಗಳಲ್ಲಿ ಬಹಳಷ್ಟು ಸಾಮ್ಯವಿದೆ.

(ಮುಂದುವರಿಯುವುದು...)

* * *

ಸಂತಾಪ ...

ಸ್ವತಂತ್ರ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಗಾಂಧೀ ವಿಚಾರ ಅನುಯಾಯಿಗಳ ಹಿರಿಯ ತಲೆಮಾರಿನವರ ಸಂಖ್ಯೆ ಕಡಿಮೆಯಾಗುತ್ತಿದೆ. ಕಳೆದ ೩೦-೧೧-೨೦೧೧ರಂದು ಜಿ.ನಾರಾಯಣ ವಿಧಿವಶರಾದರು. ನಾರಾಯಣರು ತಮ್ಮ ೮೦ ವರ್ಷದಷ್ಟು ಜೀವನವನ್ನು ಸಾರ್ವಜನಿಕ ಕೆಲಸದಲ್ಲಿ ತೊಡಗಿಸಿಕೊಂಡು ಗಾಂಧೀ ವಿಚಾರವನ್ನು ಪ್ರತಿಪಾದಿಸಲು ಪ್ರಯತ್ನಿಸಿದರು. ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಕೆಲಸಮಾಡಿದವರು. ಈ ಹಿರಿಯ ಚೇತನದ ಅಗಲಿಕೆಗೆ ಜನಪದ ವಿಚಾರ ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

* * *

ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಮತ್ತು ಕರ್ನಾಟಕ ಸರ್ವೋದಯ ಮಂಡಲಿಯ ಸದಸ್ಯರಾಗಿದ್ದ ಪ್ರೊ||ಎಚ್.ಆರ್.ದಾಸೇಗೌಡರವರು ೧೩-೧೧-೨೦೧೧ ರಂದು ವಿಧಿವಶರಾದರು. ದಾಸೇಗೌಡರು ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡಿದ್ದರು. ಅವರ ಆತ್ಮಕ್ಕೆ ಜನಪದ ವಿಚಾರವು ತನ್ನ ಸಂತಾಪವನ್ನು ಸೂಚಿಸುತ್ತದೆ.

ಸರ್ವೋದಯ ಆಂದೋಲನದ ಮುನ್ನಡೆ

ಮಹಾತ್ಮಾ ಗಾಂಧೀಜಿ ಸರ್ವೋದಯ ವಿಚಾರವನ್ನು ಜಗತ್ತಿಗೆ ಕೊಟ್ಟರು. ಆ ವಿಚಾರವನ್ನು ಸೈದ್ಧಾಂತಿಕ ರೂಪಕ್ಕೆ ಇಳಿಸಿ ಹಾಗೂ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದವರು ಆಚಾರ್ಯ ವಿನೋಬಾ ಭಾವೆ. ಹದಿಮೂರು ವರ್ಷಗಳ ಕಾಲ ದೇಶಾದ್ಯಂತ ಭೂದಾನ ಮತ್ತು ಗ್ರಾಮದಾನದಂಥ ಸಮಾಜಮುಖಿ ಅಹಿಂಸಾತ್ಮಕ ಸಾಮ್ಯವಾದಿ ಕಾರ್ಯಕ್ರಮಗಳಿಗಾಗಿ ಅಖಂಡ ಭಾರತವನ್ನು ನಡಿಗೆಯ ಮೂಲಕ ಉಪಕ್ರಮಿಸಿದ ವೀರ ಸಂತ. ಎಪ್ಪತ್ತು ಸಾವಿರ ಕಿಲೋಮೀಟರ್‌ನಷ್ಟು ಪಾದಯಾತ್ರೆ ಮಾಡಿದರು. ಆ ಪಾದಯಾತ್ರೆ ಸೂರ್ಯೋದಯ ಮತ್ತು ಚಂದ್ರೋದಯದಂತೆ ನಿಯಮಿತವಾಗಿ ನಡೆಯಿತು. ಈ ಸಾಧನೆಯ ಮೂಲಕ ನಲವತ್ತೆರಡು ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದು ಭೂಮಿ ಹೀನರಿಗೆ ಹಂಚಿದರು. ಈಗ ಭಾರತ ದೇಶದಲ್ಲಿ ೪೯೩೨ ಗ್ರಾಮದಾನಿ ಹಳ್ಳಿಗಳಿವೆ. ಅವುಗಳಲ್ಲಿ ೪೯೦೭ ಗ್ರಾಮದಾನಿ ಹಳ್ಳಿಗಳು ರಾಜಸ್ಥಾನ, ಒರಿಸ್ಸಾ, ಬಿಹಾರ್, ಜಾರ್ಖಂಡ್ ಮತ್ತು ತಮಿಳುನಾಡಿನಲ್ಲಿವೆ. ಭೂದಾನ ಮತ್ತು ಗ್ರಾಮದಾನ ಆಂದೋಲನದಲ್ಲಿ ಇರುವ ಲೋಪದೋಷಗಳನ್ನು ಸರ್ವ ಸೇವಾ ಸಂಘ ಸರಿಪಡಿಸಲು ಪ್ರಯತ್ನಿಸುತ್ತಿದೆ. ಈ ಸಂಬಂಧ ಹೆಚ್ಚಿನ ವಿವರಗಳು ಬೇಕಿದ್ದಲ್ಲಿ ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲಿ ಇವರನ್ನು ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ : ೦೮೨೩೬ ೩೧೬೩೪೪/೨೯೮೫೪.

ವಿನೋಬಾ ನಡೆಸಿದ ಆಂದೋಲನದ ಕಾರಣದಿಂದ ದೇಶದಾದ್ಯಂತ ಅವರ ಅಭಿಮಾನಿಗಳಿದ್ದಾರೆ. ಈಗಲೂ ಅವರಲ್ಲಿ ದೇಶದ ಭೂ ಸಮಸ್ಯೆ ಬಗ್ಗೆ ಚಿಂತನ-ಮಂಥನ ನಡೆಯುತ್ತಿದೆ. ಈ ಸಾವಿರಾರು ಜನ ಸರ್ವೋದಯ ಕಾರ್ಯಕರ್ತರು ಪ್ರತಿವರ್ಷ ವಿನೋಬಾರವರ ಪುಣ್ಯತಿಥಿಯ ನಿಮಿತ್ತ ನವೆಂಬರ್ ೧೫,೧೬ ಮತ್ತು ೧೭ ಈ ದಿನಗಳಲ್ಲಿ ಮಿತ್ರಮಿಲನ ಎಂಬ ಹೆಸರಿನಲ್ಲಿ ಒಟ್ಟುಗೂಡುತ್ತಾರೆ. ಮಿತ್ರಮಿಲನವು ವಿನೋಬಾರವರ ಪವನಾರ್ ಗ್ರಾಮದ ಬಳಿ ಇರುವ ಬ್ರಹ್ಮವಿದ್ಯಾಮಂದಿರದಲ್ಲಿ ನಡೆಯುತ್ತದೆ. ಇದುವರೆಗೆ ೨೯ ಮಿತ್ರ ಮಿಲನಗಳಾಗಿವೆ. ಈ ವರ್ಷದ ಮಿತ್ರಮಿಲನವು ನವೆಂಬರ್ ಮಾಹೆಯಲ್ಲಿ ನಡೆಯಿತು. ಸುಮಾರು ೫೦೦ಜನ ಕಾರ್ಯಕರ್ತರು ಭಾಗವಹಿಸಿದ್ದರು. ಶಾಂತಿಸೇನೆ-ತತ್ವ ಮತ್ತು ವಿನಿಯೋಗ ಎಂಬ ವಿಷಯವಾಗಿ ಮಿತ್ರಮಿಲನದಲ್ಲಿ ಚರ್ಚೆನಡೆಯಿತು. ಈ ವಿಷಯ ಕುರಿತು ವಿದ್ವತ್‌ಪೂರ್ಣವಾದ ಉಪನ್ಯಾಸಗಳು ನಡೆದವು. ಆಶ್ರಮದ ಬ್ರಹ್ಮಚಾರಿ ನಿವಾಸಿಗಳಾದ ಕಾಲಿಂದಿ, ಉಷಾ ಮುಂತಾದವರು ಉಪನ್ಯಾಸ ನೀಡಿದರು. ಮಿಲನದಲ್ಲಿ ಭಾಗವಹಿಸಿದ್ದ ಸರ್ವೋದಯ ಕಾರ್ಯಕರ್ತರಿಗೆ ನವ ಸ್ಫೂರ್ತಿ ದೊರೆತಂತಾಯಿತು.

ಮೈಸೂರು ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ರಚನೆಯಾಯಿತು. ಈಗ ಹನ್ನೊಂದು ಜನ ಸದಸ್ಯರಿದ್ದಾರೆ. ಬಿ.ಎನ್.ಜಯಸಿಂಹ ಗೌರವ ಅಧ್ಯಕ್ಷರಾಗಿ,

ಡಾ||ಶಿವರಾಜಪ್ಪ ಕಾರ್ಯಾಧ್ಯಕ್ಷರಾಗಿ, ಡಾ||ಉಮೇಶ್ ಸಂಚಾಲಕರಾಗಿ ಮತ್ತು ಹೊಸಳ್ಳಿ ಸುಧಾಕರ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಸಭೆ ಕರ್ನಾಟಕ ಸರ್ವೋದಯ ಮಂಡಲಿಯ ಅಧ್ಯಕ್ಷರಾದ ಶ್ರೀ ಸುರೇಂದ್ರ ಕೌಲಗಿಯವರ ಅಧ್ಯಕ್ಷತೆಯಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಗಾಂಧೀ ಭವನದಲ್ಲಿ ನಡೆಯಿತು.

ಸರ್ವೋದಯ ಕಾರ್ಯಕರ್ತರಾದ ಶ್ರೀ ರಮೇಶ್‌ಭಯ್ಯಾ ಮತ್ತು ಶ್ರೀಮತಿ ವಿಮಲಾ ಬೆಹನ್‌ರವರಿಗೆ ೨೦೧೧ನೇ ಸಾಲಿನ ಜಮನ್‌ಲಾಲ್ ಬಜಾಜ್ ಪ್ರಶಸ್ತಿ ದೊರೆತಿದೆ. ಈ ದಂಪತಿ ವಿನಾಬಾರವರ ಉತ್ಸಾಹಿ ಅನುಯಾಯಿಗಳಾಗಿದ್ದಾರೆ. ಭೂದಾನ ಚಳುವಳಿಯ ೫೦ನೇ ವರ್ಷದ ಸಂದರ್ಭದಲ್ಲಿ ರಮೇಶಭಯ್ಯಾ ಮೂವತ್ತೈದು ಸಾವಿರ ಕಿಲೋಮೀಟರ್ ದೂರ ಪಾದಯಾತ್ರೆಯ ಸಂಚಾಲನೆ ಮಾಡಿದರು. ಈ ಯಾತ್ರೆ ೧೯೯೬ರಿಂದ ೨೦೦೧ರ ಅವಧಿಯಲ್ಲಿ ಹಿಮಾಚಲಪ್ರದೇಶದ ಧರ್ಮಶಾಲಾದಿಂದ ಆಂಧ್ರಪ್ರದೇಶದ ಪೋಚಂಪಲ್ಲಿಯವರೆಗೆ ನಡೆಯಿತು. ಗ್ರಾಮೀಣ ಜನರ ಉತ್ಥಾನಕ್ಕಾಗಿ ಮತ್ತು ಸಶಕ್ತಿಕರಣಗೊಳಿಸುವುದಕ್ಕಾಗಿ ಪಾದಯಾತ್ರೆ ಮಾಡಿದರು. ೧೯೮೦ರಲ್ಲಿ ತುಂಬ ಹಿಂದುಳಿದ ಮತ್ತು ಅನೇಕ ಅಪರಾಧಗಳಿಂದ ಪೀಡಿತವಾಗಿದ್ದ ಭರತಾರ ಎಂಬ ಹಳ್ಳಿಯಲ್ಲಿ ವಿನೋಬಾ ಸೇವಾ ಆಶ್ರಮ ಸ್ಥಾಪಿಸಿದರು. ಅಲ್ಲಿ ಅನೇಕ ಪ್ರಕಾರದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. ಈಗ ಆಶ್ರಮದ ಕಾರ್ಯವ್ಯಾಪ್ತಿ ಸುಮಾರು ೩೦೦ಗ್ರಾಮಗಳಿಗೆ ವ್ಯಾಪಿಸಿದೆ. ಆಶ್ರಮದಲ್ಲಿ ಸಾವಿರದ ನೂರು ಕಾರ್ಯಕರ್ತರಿದ್ದಾರೆ. ಆಶ್ರಮವು ಸರ್ಕಾರದ ಯಾವ ಅನುದಾನವನ್ನು ತೆಗೆದುಕೊಳ್ಳದೆ ರಚನಾತ್ಮಕ ಕಾರ್ಯಗಳನ್ನು ನಡೆಸುತ್ತಿದೆ. ೧೯೮೪ರಲ್ಲಿ ಕೇವಲ ಮೂರು ಮಕ್ಕಳಿಂದ ಪ್ರಾರಂಭವಾದ ಶಾಲೆಯಲ್ಲಿ ಈಗ ೧೨೦೦ ವಿದ್ಯಾರ್ಥಿಗಳಿದ್ದಾರೆ. ನೂರು ಪ್ರೌಢ ಶಿಕ್ಷಣ ಕೇಂದ್ರಗಳಿವೆ. ಕಳೆದ ೨೭ವರ್ಷಗಳಿಂದ ಸರ್ವೋದಯ ಕೆಲಸವನ್ನು ವಿನೋಬಾ ಸೇವಾ ಆಶ್ರಮ ಮಾಡಿಕೊಂಡು ಬರುತ್ತಿದೆ.

೨೦೧೧ ಡಿಸೆಂಬರ್ ೨೯.೩೦ ಮತ್ತು ೩೧ ಈ ದಿನಾಂಕಗಳಲ್ಲಿ ಮಧುರೈನಲ್ಲಿ ನಡೆಯುವ ಸರ್ವೋದಯ ಸಮಾಜ ಸಮ್ಮೇಳನಕ್ಕೆ ವಿವಿಧ ರಾಜ್ಯಗಳಿಂದ ಸುಮಾರು ನಾಲ್ಕು ಸಾವಿರ ಪ್ರತಿನಿಧಿಗಳು ಬರುವ ನಿರೀಕ್ಷೆಯಿದೆ. ಈ ಸಮ್ಮೇಳನವನ್ನು ಶ್ರೀಲಂಕಾದ ಸರ್ವೋದಯ ನಾಯಕರಾದ ಡಾ|| ಎ.ಟಿ.ಅರ್ಯರತ್ನೆ ಉದ್ಘಾಟಿಸುವರು. ಸಂತ ವಿನೋಬಾರವರ ನಿಕಟವರ್ತಿಯಾಗಿದ್ದ ಬಾಲ್ ವಿಜಯ್‌ರವರು ಅಧ್ಯಕ್ಷತೆ ವಹಿಸುವರು. ಸಮ್ಮೇಳನ ಮಧುರೈನಲ್ಲಿರುವ ಗಾಂಧೀ ಮ್ಯೂಸಿಯಂ ಆವರಣದಲ್ಲಿ ನಡೆಯುವುದು. ಮಧುರೈ ನಿಲ್ದಾಣದಿಂದ ಸಮ್ಮೇಳನದ ಸ್ಥಳ ಐದು ಕಿ.ಮಿ ದೂರದಲ್ಲಿದೆ. ಆಟೋರಿಕ್ಷಾಗಳು ಇವೆ. ಮೂರು ಜನರಿಗೆ ಐವತ್ತರಿಂದ ಅರವತ್ತು ರುಪಾಯಿ ಬಾಡಿಗೆ ತೆಗೆದುಕೊಳ್ಳುತ್ತಾರೆ. ಉಷ್ಣತೆ ಗರಿಷ್ಠ ೨೩ ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ೧೮ ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಬರಲಿಚ್ಛಿಸುವವರು ಕೂಡಲೇ ಬರಲಿಚ್ಛಿಸುವವರ ಸಂಖ್ಯೆ ಮತ್ತು ವಿವರಗಳೊಂದಿಗೆ ಕೂಡಲೆ
ಸುರೇಂದ್ರ ಕೌಲಗಿ, ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲ ಇವರನ್ನು
ದೂರವಾಣಿ ಸಂಖ್ಯೆ ೦೮೨೩೬ - ೩೧೬೩೪೪ / ೨೯೮೫೪ ಗಳಲ್ಲಿ ಸಂಪರ್ಕಿಸಿ.

ಖಾದಿ ವಿಚಾರ

ಒಮ್ಮೆ ನನ್ನ ಬಳಿ ಗಾಂಧೀಜಿಯ ಚಿತ್ರಗಳ ದೊಡ್ಡದೊಂದು ಆಲ್ಬಮ್ ಬಂತು. ಅದರಲ್ಲಿ ತುಂಬ ಸುಂದರವಾದ ಚಿತ್ರಗಳಿದ್ದವು. ಆದರೆ ನೂಲಿನ ಒಂದು ಲಡಿಯನ್ನು ನಾನು ನೋಡಿದಾಗ ನನಗೆ ಅದರಲ್ಲಿ ಗಾಂಧೀಜಿಯ ಅನುಪಮ ರೂಪ ತೋರಿಬರುತ್ತದೆ. ಅಷ್ಟು ಅದ್ಭುತವಾದ ಅವರ ಚಿತ್ರ ನನಗೆ ಮತ್ತಾವುದರಲ್ಲೂ ಕಾಣುವುದಿಲ್ಲ. ಗಾಂಧೀಜಿಯ ಜೀವನ ಚಕ್ರ ನೂಲಿನ ಲಡಿಯಲ್ಲಿ ಸ್ಪಷ್ಟವಾಗಿ ಕಾಣುವಂತೆ ಮತ್ತಾವುದೇ ಸ್ಥೂಲ ಶಾರೀರಿಕ ಚಿತ್ರದಲ್ಲಿ ಕಾಣುವುದಿಲ್ಲ.

ಆದುದರಿಂದಲೇ ನಾನು ಬಾಪೂ ಸ್ಮೃತಿಯಲ್ಲಿ ಸೂತ್ರಾಂಜಲಿ ಅರ್ಪಿಸುವ ಕಾರ್ಯಕ್ರಮವನ್ನು ದೇಶದ ಮುಂದಿಟ್ಟೆ. ಪ್ರತಿ ವರ್ಷ ಫೆಬ್ರವರಿ ೧೨ರಂದು ನಮ್ಮ ಕೈಯಿಂದ ನೂತ ನೂಲಿನ ಒಂದು ಲಡಿಯನ್ನು ಸಮರ್ಪಿಸುತ್ತೇವೆ. ಈ ಕಾರ್ಯಕ್ರಮ ಬಾಪೂ ಬಗೆಗೆ ಶ್ರದ್ಧೆಯ ಎಲ್ಲಕ್ಕಿಂತ ದೊಡ್ಡ ಪ್ರತೀಕಕ್ಕೆ ಸಮಾನ. ಬಾಪೂಗೆ ಎಲ್ಲಕ್ಕಿಂತ ದೊಡ್ಡ ಸ್ಮಾರಕವೂ ಹೌದು.

ಇದಂತೂ ಒಂದು ಸಣ್ಣ ಸಂಗತಿ, ಎಷ್ಟು ಸಣ್ಣದೊ ಅಷ್ಟೇ ಶಕ್ತಿಶಾಲಿ. ಇದರಲ್ಲಿ ಶರೀರಶ್ರಮ, ಅಹಿಂಸಕ ಪ್ರೇಮ ಮತ್ತು ತ್ಯಾಗದ ದೀಕ್ಷೆ ಸಿಕ್ಕುತ್ತದೆ. ಇದು ನಮ್ಮ ಶ್ರಮ ಪ್ರತಿಷ್ಠೆಯ ಭಾವನೆಗೆ ಪ್ರತೀಕ. ಇದರಲ್ಲಿ ಭ್ರಾತೃಭಾವಕ್ಕೆ ಮನ್ನಣೆ ನೀಡುತ್ತೇವೆ. ಅದರ ದರ್ಶನವಾಗುತ್ತದೆ. ಇದು ಸರ್ವೋದಯ ವಿಚಾರಕ್ಕೆ ನೀಡುವ ಮತ. ಇಡೀ ರಾಷ್ಟ್ರಕ್ಕೇ ಇದೊಂದು ಸುಂದರ ಉಪಾಸನೆ.

ದೇಶದ ಪ್ರತಿಯೊಬ್ಬ ಬಾಲಕನೂ ಮಾಡಬಲ್ಲ ರಾಷ್ಟ್ರೀಯ ಉಪಾಸನೆಯೊಂದು ದೇಶದೆದುರು ಇರಬೇಕೆಂದು ಬಾಪೂ ಹೇಳಿದ್ದರು. ಧಾರ್ಮಿಕ ಹಾಗೂ ಪಾಂಥಿಕ ಉಪಾಸನೆಗಳಂತೂ ಇದ್ದೇ ಇವೆ. ಆದರೆ ಅವುಗಳಿಂದ ಭೇದ ಹುಟ್ಟುತ್ತದೆ. ದೇಶದಲ್ಲಿ ಅಭೇದ ಉತ್ಪನ್ನ ಮಾಡುವ ಉಪಾಸನೆ ಬೇಕು. ದೇಶಕ್ಕಾಗಿ ನಾನು ಏನನ್ನಾದರೂ ಮಾಡುತ್ತಿದ್ದೇನೆಂದು ಎಲ್ಲರಿಗೂ ಅನಿಸಬೇಕು.

ಈ ವಿಚಾರದಿಂದಲೇ ಚರಕಾದ ವಿಕಾಸವಾಯಿತು. ನೂಲುವುದು ಅತ್ಯಂತ ಹಗುರವಾದ ಸರಳ ಶ್ರಮ. ಕಿಶೋರ್‌ಲಾಲ್ ಭಾಯೀ ಅವರಂಥ ಮನುಷ್ಯರೂ ಸಹ ಚರಖಾದ ಮೂಲಕ ದೇಶಕ್ಕಾಗಿ ಏನಾದರೂ ಉತ್ಪಾದನ ಮಾಡಬಹುದು. ಅವರಿಗೆ ಸಂಜೆಯೊಳಗೆ ಸತ್ತು ಹೋಗುತ್ತೇನೆ ಎಂದು ಮುಂಜಾನೆ ಅನಿಸುತ್ತದೆ, ಸಂಜೆಗೆ ಮುಂಜಾನೆಯಾದೀತೋ ಇಲ್ಲವೋ ಎನಿಸುತ್ತದೆ. ತಮ್ಮ ಬಟ್ಟೆಗೆ ಬೇಕಾಗುವಷ್ಟು ನೂಲನ್ನು ಅವರು ನೂತುಕೊಂಡೇ ಬಿಡುತ್ತಾರೆ. ಅತ್ಯಂತ ದುರ್ಬಲನಾದ ನಾಗರಿಕನನ್ನು ಚರಖಾ ಉತ್ಪಾದಕನನ್ನಾಗಿಸಬಲ್ಲದು. ಇದು ಅದರ ವಿಶೇಷತೆ. ಇಂಥದೊಂದು ಸಾಧನವನ್ನು ಬಾಪೂ ನಮಗೆ ಹೊಸ ರೂಪದಲ್ಲಿ ಮತ್ತು ಹೊಸ ವಿಚಾರ ಸಹಿತವಾಗಿ ಕೊಟ್ಟರು.

ಮೊದಲು ಬಾಪೂಗೆ ಚರಖಾ ಹೊಳೆಯಲಿಲ್ಲ. ಮಗ್ಗ ಭಾಸವಾಯಿತು. ೧೯೧೬ರ ಮಾತು. ನಾನು ಆಗ ಆಶ್ರಮವನ್ನು ತಲುಪಿದಾಗ ಕೊಚರಬ್‌ನಲ್ಲಿ ಎಲ್ಲರೂ

ಸೇರಿ ನೂಲಿನ ಪಟ್ಟಿಗಳನ್ನೂ ಮತ್ತು ಬಟ್ಟೆಯನ್ನೂ ನೇಯುತ್ತಿದ್ದೆವು. ಈ ಕೆಲಸದ ಮೂಲಕ ಸ್ವಾವಲಂಬನೆ ಸಾಧಿಸಲು ನನಗೆ ಎಷ್ಟು ನೇಯಬೇಕಾದೀತು ಎಂದು ನಾನು ಪ್ರಶ್ನೆ ಕೇಳಿದೆ. ೨೫ ಗಜ ಎಂದು ಹೇಳಿದರು. ೨೫ ಗಜ ನೇಯಲು ಪ್ರಯತ್ನಿಸುತ್ತಿದ್ದೆ. ಒಂದು ದಿವಸ ನಿರ್ಧಾರ ಮಾಡಿ ಕುಳಿತೆ, ರಾತ್ರಿ ಒಂಭತ್ತು-ಹತ್ತು ಗಂಟೆತನಕ ನೇಯುತ್ತಲಿದ್ದೆ. ೨೫ ಗಜದ ಪಟ್ಟಿಯನ್ನೇ ಪೂರ್ಣಗೊಳಿಸಿಯೇ ಎದ್ದೆ.

ಆದರೆ ಈ ನೂಲೆಲ್ಲವೂ ಗಿರಣಿಯದಾಗಿತ್ತು. ಇದು ಜ್ಞಾನದ ಶೋಧನೆಯಾಗಿತ್ತು, ಕರ್ಮಯೋಗದ ಆರಂಭ. ಮತ್ತೆ ಕೆಲವು ದಿನಗಳ ಬಳಿಕ ನೂಲುವುದನ್ನೂ ಪ್ರಾರಂಭಿಸಬೇಕು ಎಂಬುದು ಲಕ್ಷ್ಯಕ್ಕೆ ಬಂತು. ಮತ್ತೆ ಚರಖಾ ಸಿಕ್ಕಿತು. ಆದರೆ ಹಂಜಿ? ಮೊದಲು ಉದ್ದನೆಯ ಹಂಜಿಯನ್ನು ಗಿರಣಿಯಿಂದ ತರುತ್ತಿದ್ದೆವು. ಅನಂತರ ಹಂಜಿಯನ್ನು ಕೈಯಿಂದಲೇ ಮಾಡಿಕೊಳ್ಳಬೇಕೆಂದೆನಿಸಿತು. ಈ ರೀತಿ ಹಂಜಿಯನ್ನೂ ಕೈಯಿಂದಲೇ ಮಾಡತೊಡಗಿದೆವು. ಈ ಬಗೆಯಲ್ಲಿ ಖಾದಿ ಪ್ರಾರಂಭವಾಯಿತು. ಖಾದಿಯ ಮೂಲಕ ಮನಸ್ಸಿನ ತಂತುವನ್ನು ಬಾಪೂಗೆ ಜೋಡಿಸಬೇಕಾಗಿತ್ತು.

ಬಾಪೂ ಮೀರಾಬಾಯಿಯ ಒಂದು ಭಜನೆಯನ್ನು ಅನೇಕ ಬಾರಿ ಹಾಡುತ್ತಿದ್ದರು: ***'ಕಾಚೇ ರೇ ತಾಂತಣೇ ಮನೇ ಹರಿಯೇ ಬಾಂಧೀ, ಜೇಮ್ ತಾಣೇ ತೇಂ ರಹಿಯೇ ರೇ.'***

'ಒಂದು ಕಚ್ಚಾ ತಂತು ಇದೆ. ಅದರಿಂದ ನನ್ನನ್ನು ಕಟ್ಟಿದ್ದಾರೆ. ಭಗವಂತ ಅದರಿಂದ ನನ್ನನ್ನು ಎಳೆಯುವಷ್ಟು ಗಟ್ಟಿ ಇದೆ ಅದು. ನಾನೂ ಆತನನ್ನು ಅದರಿಂದ ಸೆಳೆಯುತ್ತೇನೆ.' ಈ ರೀತಿ ಮೀರಾಬಾಯಿ ಹೇಳುತ್ತಾಳೆ. ಪ್ರೇಮದ ಹಗ್ಗವೆಂಬ ಕಚ್ಚಾ ತಂತುವಿನಿಂದ ಇಡೀ ಜಗತ್ತನ್ನು ಎಳೆಯ ಬಲ್ಲೆವು. ನಾವೂ ಅವರತ್ತ ಸೆಳೆಯಲ್ಪಡಬಲ್ಲೆವು. ಈ ಭಾವನೆ ಚರಖಾದ ಹಿಂದಿದೆ.

ಬಾಪೂ ತಮ್ಮ ಇಡೀ ಜೀವಮಾನ ಪರ್ಯಂತ ಪ್ರತಿ ದಿನವೂ ಚರಖಾ ನೂತರು. ಸಾಯುವ ದಿನದಂದೂ ಚರಖಾ ನೂತುಬಿಟ್ಟೇ ಹೋದರು. ನ್ಯಾಯಾಲಯದಲ್ಲಿ ಒಮ್ಮೆ ನಿಮ್ಮ ದಂಧೆ ಏನೆಂದು ಕೇಳಿದರು? 'ನೂಲುವುದು ಮತ್ತು ನೇಯುವುದು' ಎಂದು ಉತ್ತರವಿತ್ತರು. ಅದು ಅವರ ತೇಜಸ್ವೀ ಪದ್ಧತಿ. ಈ ರೀತಿ ಹಿಂದೂಸ್ಥಾನದ ಜನತೆಯೊಡನೆ ಅವರು ಏಕರೂಪ ಆಗಲು ಸಾಧ್ಯವಾಯಿತು. ಹೀಗೆ ಚರಖಾದ ಹಿಂದೆ ಉಪಾಸನೆಯ ಮತ್ತು ಸರ್ವಜನರೊಡನೆ ಏಕಾತ್ಮತೆಯನ್ನು ಸಾಧಿಸುವ ಭಾವನೆಯೊಂದಿದೆ. ಆದರೆ ಅದರೊಂದಿಗೆ ಒಂದು ಹೊಸ ಅರ್ಥವ್ಯವಸ್ಥೆಯ ದೃಷ್ಟಿಯೂ ಇದೆ. ಅತ್ಯಧಿಕ ಸಹಾಯದ ಅಗತ್ಯವಿರುವವರಿಗೆ ಎಲ್ಲರಿಗಿಂತ ಮುಂಚಿತವಾಗಿ ನೆರವು ನೀಡುವ ಉಪಾಯವನ್ನು ಗಾಂಧೀಜಿ ಹುಡುಕುತ್ತಿದ್ದರು. ಅದರಿಂದಲೇ ಈ ಚರಖಾ ಹೊರಟಿತು. ಇದು ಅವರ ಅದ್ಭುತ ಪ್ರತಿಭೆ. ವರ್ಷಗಳ ಮುನ್ನವೇ ಭಾರತಕ್ಕೆ ಗ್ರಾಮೋದ್ಯೋಗದ ಅಗತ್ಯವನ್ನವರು ಕಂಡುಕೊಂಡಿದ್ದರು. ದೂರದರ್ಶಿ ಬಾಪೂಗೆ ಈ ದರ್ಶನವಾಗಿಹೋಗಿತ್ತು. ಅವರು ಕ್ರಾಂತದ್ರಷ್ಟಾರರಾಗಿದ್ದರು: ಕವಿಃ ಕ್ರಾಂತದರ್ಶೀ. ಆಚೆ ದಡದ ದರ್ಶನವುಳ್ಳವರು ಕವಿ, ಈ ಅರ್ಥದಲ್ಲಿ ಗಾಂಧೀಜಿಯೂ ಕವಿಯೇ.

– ವಿನೋಬಾ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಕೆ.ರಾಮಚಂದ್ರ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀಮತಿ ಎಸ್.ಪುಷ್ಪಲತಾ, ಶ್ರೀಮತಿ ಅನುರಾಧ, ಶ್ರೀ ಚೀಲೂರು ಚಂದ್ರಶೇಖರ್, ಡಾ|| ಜಿ.ಎಸ್.ನಾಗರಾಜು, ಶ್ರೀ ಎಂ.ಎನ್.ಜಯಸಿಂಹ, ಶ್ರೀ ಸುಧಾಕರ್ ಹೊಸಹಳ್ಳಿ, – ಮೈಸೂರು

ಶ್ರೀಮತಿ ಕೋಮಲ – ಮಂಡ್ಯ

ಶ್ರೀ ಎಂ.ಸತ್ಯನಾರಾಯಣಭಟ್ – ಹಾಸನ

ಶ್ರೀ ಕೆ.ಸುಬ್ರಹ್ಮಣ್ಯಭಟ್ – ಮಂಗಳೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.